
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

13 ಆಗಸ್ಟ್ 2014 ಪುಟ 20 ರೂ. 15/-

ಅತ್ಯಾಚಾರ ಅಸ್ಪೃಶ್ಯತೆ ಒಂದೇ ಮರದ ಎರಡು ರೆಂಬೆಗಳು

ಅತ್ಯಾಚಾರಿ ಭಟ್ಟ




ಕರಾವಳಿ
ರತ್ನಾ ಸಾವಿನ ಸುತ್ತ ಸಂಶಯದ ಹುತ್ತ

ಬೆಂಗಳೂರು
ಒಕ್ಕಲಿಗರ ಸೊತ್ತು ಬಿಲ್ಡರ್ ಪಾಲಾಯಿತು

ಮಂಡ್ಯ
ರೌಡಿ ಜನರಲ್ ಬಸವರಾಜ್ ಅರೆಸ್ಟ್

ಕಪ್ಪು ಚುಕ್ಕೆಗಳ ಸುಳಿಯಲ್ಲಿ ನ್ಯಾಯಾಂಗ

ಕಾರ್ಮಿಕ ಕಾನೂನುಗಳ ಸುಧಾರಣೆ
ಕಾರ್ಮಿಕರಿಗೆ 'ಅಚ್ಛೇ ದಿನಗಳು' ಆರಂಭವಾದವು



ಡಾ.ವಾಸು ಎಚ್.ವಿ.

ನಿನ್ನೆ (ಜುಲೈ 30) ಕೇಂದ್ರ ಸಚಿವ ಸಂಪುಟವು ಕಾರ್ಮಿಕರಿಗೆ ಸಂಬಂಧಪಟ್ಟ ಒಂದು ತೀರ್ಮಾನವನ್ನು ತೆಗೆದುಕೊಂಡಿದೆ. ಹೊಸ ಕಾಲಕ್ಕೆ ಸೂಕ್ತವೆನಿಸುವ ಹಾಗೆ ಕಾರ್ಮಿಕ ಕಾನೂನುಗಳ 'ಸುಧಾರಣೆ' ಮಾಡಬೇಕೆಂಬುದು ಅದರ ಉದ್ದೇಶ. ಹಾಗಾಗಿ ಉದ್ದಿಮೆಪತಿಗಳು ಮತ್ತು ಕಾರ್ಮಿಕರು ಇಬ್ಬರಿಗೂ ಅನುಕೂಲ ಮಾಡಿಕೊಡುವ 'ಸಮತೋಲನ ಹೊಂದಿರುವ' ಸುಧಾರಣೆಗಳನ್ನು ತಾವು ತರುತ್ತಿದ್ದೇವೆಂದು ಈ ಮುಂಚೆಯೇ ಸರ್ಕಾರವು ಹೇಳಿತ್ತು. ಲೋಕಸಭೆಯಲ್ಲಿ ಈ ಕುರಿತು ಲಿಖಿತ ಉತ್ತರ ನೀಡಿದ್ದ ಕಾರ್ಮಿಕ ಖಾತೆಯ ರಾಜ್ಯ ಸಚಿವ ವಿಷ್ಣು ದೇವ್ ತಮ್ಮ ಉದ್ದೇಶವನ್ನು ವಿವರಿಸಿದ್ದರು. ಅದರಂತೆ, ಈಗ 'ಸುಧಾರಣೆ'ಗಳ ಮೊದಲ ಕಂತು ಹೊರಬಿದ್ದಿದೆ.

ಈ ಸುಧಾರಣೆಗಳು ಹೇಗಿವೆಯೆಂದು ಬಹಳ ಸರಳವಾಗಿ ಹೇಳಬೇಕೆಂದರೆ ಹೀಗೆ ಹೇಳಬಹುದು. ಕಾರ್ಮಿಕರು ತಮ್ಮ ಮಾಲೀಕರ ಹತ್ತಿರ ಈಗಿರುವ ಸಂಬಳ 8,000ರೂ.ಗಳು ಸಾಕಾಗುತ್ತಿಲ್ಲ, ಅದನ್ನು ಕನಿಷ್ಠ 10,000 ರೂ.ಗಳಿಗೆ ಏರಿಸಬೇಕೆಂದು ಕೇಳುತ್ತಾರೆಂದುಕೊಳ್ಳಿ. ಆಗ ಮಾಲೀಕನು, 'ಹೌದು, ಕಾಲ ಬದಲಾಗಿದೆ. ಸಂಬಳದ ಪರಿಷ್ಕರಣೆಯನ್ನು ಮಾಡಲೇಬೇಕೆಂದು ನನಗೂ ಅನ್ನಿಸಿದೆ. ಸದ್ಯದಲ್ಲೇ ಬದಲಾವಣೆ ಬರಲಿದೆ, ಕಾದುನೋಡು' ಎಂದು ಹೇಳಿ, ಸಂಬಳವನ್ನು 5,000 ರೂ.ಗಳಿಗೆ ಇಳಿಸಿದರೆ? ಇಳಿಸಿದರೆ ಹೇಗಿರುತ್ತದೋ, ಹಾಗಿದೆ ಈ ಸುಧಾರಣೆ! ಈ ಸುಧಾರಣೆಗಳಿಂದ 'ಅಭಿವೃದ್ಧಿ' ಹೆಚ್ಚಾಗುವುದರಿಂದ ಸಹಜವಾಗಿಯೇ ಉದ್ಯೋಗಾವಕಾಶವೂ ಹೆಚ್ಚಲಿದೆ ಎಂಬುದು ಬಿಜೆಪಿ ಸರ್ಕಾರ ಪಠಿಸಿರುವ ಮೋದಿ ಮಂತ್ರವಾಗಿದೆ.

ಈ ಎರಡೂ ವಾದಗಳು ಎಷ್ಟರಮಟ್ಟಿಗೆ ನಿಜ ಎಂಬುದನ್ನು ಸಾಕ್ಷ್ಯಾಧಾರಗಳೊಂದಿಗೆ ಪರಿಶೀಲಿಸುವುದು ಅಗತ್ಯ. ಮೊದಲಿಗೆ, ಹಾಲಿ ಕಾರ್ಮಿಕರು ಎದುರಿಸುತ್ತಿರುವ ಮುಖ್ಯ ಸಮಸ್ಯೆಗಳೇನು ಎಂಬುದನ್ನು ನೋಡೋಣ. ಯಾವುದೇ ಉದ್ದಿಮೆಯಲ್ಲಿ ಉತ್ಪಾದನಾ ವೆಚ್ಚದ ಮುಖ್ಯ ಭಾಗದಲ್ಲಿ ಕಾರ್ಮಿಕರ ವೇತನ ಮತ್ತು ಇತರ ಸೌಲಭ್ಯಗಳಿಗೆ ಮಾಡುವ ವೆಚ್ಚವು ಸೇರಿರುತ್ತದೆ. ಕಾರ್ಮಿಕರೇ ಕಾರ್ಖಾನೆಯ ಮಾಲೀಕರೂ ಆಗಿರಬೇಕು ಎಂಬ ಸಮಾಜವಾದಿ, ಕಮ್ಯುನಿಸ್ಟ್ ಆಲೋಚನೆಗಳನ್ನು ಬಿಟ್ಟುಬಿಡೋಣ. ಆದರೆ, ಕಾರ್ಮಿಕರಿಗೆ ಘನತೆಯಿಂದ ಬದುಕುವಷ್ಟು ವೇತನ, ಸಾಮಾಜಿಕ ಭದ್ರತೆ, ಪಿಂಚಣಿ, ಆರೋಗ್ಯ ವಿಮೆ ಹಾಗೂ ಕಾರ್ಖಾನೆಗೆ ಆದ ಲಾಭಕ್ಕೆ ತಕ್ಕಂತೆ ಬೋನಸ್ ಇತ್ಯಾದಿ ಸೌಲಭ್ಯಗಳು ಸಿಗಬೇಕು ಎಂದು ಕಲ್ಯಾಣಕಾರೀ ಬಂಡವಾಳಶಾಹಿ ವ್ಯವಸ್ಥೆಯೂ ಹೇಳುತ್ತಿತ್ತು. ಭಾರತದಲ್ಲಿ 20ನೇ ಶತಮಾನದ ಮೊದಲೆರಡು ದಶಕಗಳಲ್ಲಿ ಬಿರುಸು ಪಡೆದುಕೊಂಡ ಕಾರ್ಮಿಕ ಚಳವಳಿಯ ಪರಿಣಾಮವಾಗಿ ಬ್ರಿಟಿಷ್ ಆಡಳಿತ 1929ರಲ್ಲಿ ಒಂದು ಆಯೋಗವನ್ನು ನೇಮಿಸಿತು. 'ರಾಯಲ್ ಕಮೀಷನ್ ಆಫ್ ಲೇಬರ್' ಎಂದು ಕರೆಸಿಕೊಳ್ಳುವ ಆ ಆಯೋಗವು ತನ್ನ ವರದಿಯಲ್ಲಿ ಹೀಗೆ ಹೇಳಿತು: ಭಾರತದ ಕಾರ್ಮಿಕರ ಪರಿಸ್ಥಿತಿಯನ್ನು ನೋಡಿದ ನಂತರ, ನಾವು ಅತ್ಯಂತ ದೃಢವಾಗಿ ಹೇಳಲೇಬೇಕಾದ ಒಂದು ಅಂಶವೇನೆಂದರೆ, ಇಂದು ಅವರಿಗೆ ಸಂಘಟನೆಯ ಅಗತ್ಯ ಅತ್ಯಂತ ಹೆಚ್ಚಾಗಿದೆ. ಒಂದು ಗಟ್ಟಿಯಾದ ಟ್ರೇಡ್ ಯೂನಿಯನ್ ಚಳವಳಿಯನ್ನು ಬಿಟ್ಟು ಇನ್ನೇನೂ ಅವರಿಗೆ ಅಗತ್ಯವಿರುವ ಭದ್ರತೆಯನ್ನು ನೀಡಲಾರದು. ಅವರಿಂದು ಅಮಾನವೀಯ ಪರಿಸ್ಥಿತಿಯನ್ನು ಮತ್ತು ಶೋಷಣೆಯನ್ನು ಎದುರಿಸಲು ಸಾಧ್ಯವಾಗುವುದು ಅದೊಂದರಿಂದ ಮಾತ್ರ.

ಆ ಹೊತ್ತಿಗಾಗಲೇ ಇಲ್ಲಿ ಸಂಘಟನೆಯನ್ನು ಕಟ್ಟಿಕೊಳ್ಳಲು ಸಾಧ್ಯವಾಗುವ ಒಂದು ಕಾಯ್ದೆ ಜಾರಿಗೆ ಬಂದಿತ್ತು, ಬ್ರಿಟಿಷರು ತಮ್ಮ ದೇಶದಲ್ಲೂ ಕಾರ್ಮಿಕರ ಪರವಾದ ಕಾಯ್ದೆಗಳನ್ನು ಜಾರಿಗೆ ತರಲೇಬೇಕಾದ ಪರಿಸ್ಥಿತಿಯನ್ನು 1917ರ ರಷ್ಯಾ ಕ್ರಾಂತಿ ಸೃಷ್ಟಿಸಿತ್ತು, ಮೇಲೆ ಹೇಳಲಾದ ಆಯೋಗದ ವರದಿಯ ನಂತರ ಇನ್ನೊಂದಷ್ಟು ಕಾಯ್ದೆಗಳು ಬಂದವು. ಕಾರ್ಮಿಕ ಕಾನೂನುಗಳ ಎರಡನೆಯ ಸರಣಿ 1946ರಿಂದ 1952ರ ಹೊತ್ತಿನಲ್ಲಿ ಜಾರಿಯಾಯಿತು. ಅವುಗಳಲ್ಲಿ ಕೈಗಾರಿಕಾ ವ್ಯಾಜ್ಯಗಳ ಕಾಯ್ದೆ (Industrial Disputes Act) ಮುಖ್ಯವಾದುದು. ಅದಾದ ಮೇಲೆ 70ರ ದಶಕದಲ್ಲಿ (ವಿಪರ್ಯಾಸದ ಸಂಗತಿಯೆಂದರೆ, ಅವುಗಳಲ್ಲಿ ಕೆಲವು 'ತುರ್ತುಪರಿಸ್ಥಿತಿ'ಯ ಸಂದರ್ಭದಲ್ಲಿ) ಜಾರಿಗೆ ಬಂದವು. ಗುತ್ತಿಗೆ ಕಾರ್ಮಿಕ ಪದ್ಧತಿ ನಿಯಂತ್ರಣ ಮತ್ತು ರದ್ಧತಿ ಕಾಯ್ದೆ ಅವುಗಳಲ್ಲೊಂದು.

ಇವೆಲ್ಲದರ ಪರಿಣಾಮವಾಗಿ ಎಲ್ಲಾ ಕಾರ್ಮಿಕರಿಗೆ ಅಲ್ಲದಿದ್ದರೂ, ಸಂಘಟಿತ ಉತ್ಪಾದಕ ವಲಯದಲ್ಲಿ ಕಾರ್ಮಿಕರು ಕೆಲಸದ ಭದ್ರತೆ, ಸಂಬಳದ ಭದ್ರತೆ ಮತ್ತು ಸಾಮಾಜಿಕ ಭದ್ರತೆಗಳನ್ನು ಪಡೆದುಕೊಂಡಿದ್ದರು. ಆದರೆ 1990ರ ನಂತರದಲ್ಲಿ ಜಾಗತೀಕರಣ ನೀತಿಗಳು ಈ ಸ್ಥಿತಿಯನ್ನು ತಿರುಗುಮುರುಗು ಮಾಡಲಾರಂಭಿಸಿದವು. ಬಹುತೇಕ ಸೌಲಭ್ಯಗಳನ್ನು ನೀಡುವ ಅಗತ್ಯವಿಲ್ಲದ ಅಸಂಘಟಿತ ವಲಯವು (ಗುತ್ತಿಗೆ, ದಿನಗೂಲಿ, ಅಪ್ರೆಂಟಿಸ್ ಇತ್ಯಾದಿ ಹೆಸರುಗಳಲ್ಲಿ) ಸಂಘಟಿತ ವಲಯದೊಳಗೇ ಬೆಳೆಯಲು ಆರಂಭವಾಯಿತು. 1995-96ರಲ್ಲಿ ಸಂಘಟಿತ ವಲಯದಲ್ಲಿ ಗುತ್ತಿಗೆ ಕಾರ್ಮಿಕರ ಪಾಲು 10.5% ಇದ್ದರೆ, 2009-10ರ ಹೊತ್ತಿಗೆ ಅದು 25.6%ನ್ನು ಮುಟ್ಟಿತ್ತು, ಈಗ ಅದು 50%ನ್ನು ದಾಟಿದೆ. ಇದೇ ಅವಧಿಯಲ್ಲಿ ಕಾಯಂ ಕಾರ್ಮಿಕರ ಪಾಲು 68.3%ರಿಂದ 52.4%ಗೆ ಇಳಿದಿದೆ. ಈ ಅವಧಿ ಯಾಕೆ ಮುಖ್ಯವೆಂದರೆ ಈ ದೇಶದ ಇತಿಹಾಸದಲ್ಲೇ ಅತ್ಯಂತ ಹೆಚ್ಚಿನ 'ಅಭಿವೃದ್ಧಿ' ದರ ಇದ್ದದ್ದು ಇದೇ ಅವಧಿಯಲ್ಲಿ (2003ರಿಂದ 2009). ಈ 5 ವರ್ಷಗಳಲ್ಲಿ ಐದೂವರೆ ಕೋಟಿ ಯುವಸಮೂಹ ಇಲ್ಲಿನ ಒಟ್ಟಾರೆ ಶ್ರಮಿಕ ಸಮೂಹಕ್ಕೆ ಸೇರಿಕೊಂಡಿತು. ಅವರಲ್ಲಿ 'ಉದ್ಯೋಗ' ಪಡೆದುಕೊಂಡವರು 20 ಲಕ್ಷ ಜನ ಮಾತ್ರ.

ಅಂದರೆ ಅತ್ಯಂತ ಹೆಚ್ಚಿನ ಅಭಿವೃದ್ಧಿ ದರ ಇದ್ದ ಕಾಲದಲ್ಲಿ ಹೆಚ್ಚಿನ ಉದ್ಯೋಗವೂ ಸೃಷ್ಟಿಯಾಗಲಿಲ್ಲ ಮತ್ತು ಸೃಷ್ಟಿಯಾದ ಉದ್ಯೋಗಗಳಲ್ಲಿ ಹೆಚ್ಚಿನವು ಅಸಂಘಟಿತ ವಲಯಕ್ಕೆ ಸೇರಿತ್ತು. ಇದರಿಂದ ಕಾರ್ಮಿಕರಿಗೆ ಆದ ಕಿರುಕುಳ ಶೋಷಣೆ ಅಷ್ಟಿಷ್ಟಲ್ಲ. ಇಲ್ಲಿ ಗಮನಿಸಬೇಕಾದ ಸಂಗತಿಯೇನೆಂದರೆ, ಈ ಅವಧಿಯಲ್ಲಿ ಕೇಂದ್ರ ಸರ್ಕಾರವು ಕಾರ್ಮಿಕ ಕಾನೂನುಗಳಿಗೆ ಯಾವ ತಿದ್ದುಪಡಿಯನ್ನೂ ತಂದಿರಲಿಲ್ಲ. ಆದರೆ, ಕೆಲವು ರಾಜ್ಯ ಸರ್ಕಾರಗಳು ತಿದ್ದುಪಡಿಗಳನ್ನು ತಂದಿದ್ದವು. ಕಾರ್ಮಿಕ ವಲಯವು ಸಮವರ್ತಿ ಪಟ್ಟಿಯಲ್ಲಿರುವುದರಿಂದ ಇದು ಸಾಧ್ಯವಾಗಿತ್ತು. ಜೊತೆಗೆ 1982 ಮತ್ತು 84ರಲ್ಲಿ ಕೈಗಾರಿಕಾ ವ್ಯಾಜ್ಯಗಳ ಕಾಯ್ದೆ (IDA) ಗೆ ತರಲಾಗಿದ್ದ ತಿದ್ದುಪಡಿಯೂ ಮಾಲೀಕವರ್ಗಕ್ಕೆ ಅನುಕೂಲ ಮಾಡಿಕೊಟ್ಟಿತ್ತು. ಆ ತಿದ್ದುಪಡಿಯು ಸೇವಾ ಭದ್ರತೆಯನ್ನು ಖಾತರಿಪಡಿಸಲೇಬೇಕಾದ ಕೈಗಾರಿಕೆಗಳ ಕಾರ್ಮಿಕರ ಸಂಖ್ಯಾ ಮಿತಿಯನ್ನು 300ರಿಂದ 100ಕ್ಕೆ ಇಳಿಸಿತ್ತು. ಹಾಗಾಗಿ ಮಧ್ಯಮ ಪ್ರಮಾಣದ ಕೈಗಾರಿಕೆಗಳೂ ಸೇವಾಭದ್ರತೆಯನ್ನು ಕಲ್ಪಿಸಲೇಬೇಕಿತ್ತು. ಇದು ಕಾರ್ಮಿಕರಿಗೆ ಅನುಕೂಲ ಮಾಡಿಕೊಡುವಂಥಾದ್ದು ಆಗಿದ್ದರೂ, ಅದರೊಂದಿಗೆ ಇನ್ನೆರಡು ಸಮಸ್ಯೆಗಳನ್ನೂ ಸೃಷ್ಟಿಸಿತ್ತು. 1. ಕೆಲಸದಿಂದ ಕಿತ್ತುಹಾಕುವ (Retrenchment) ದಕ್ಕೆ ಇರುವ ವ್ಯಾಖ್ಯಾನವನ್ನು ಮಾಲೀಕರ ಪರವಾಗಿ ಬದಲಿಸಲಾಗಿತ್ತು. 2. ಗುತ್ತಿಗೆ ಕಾರ್ಮಿಕರನ್ನು ಗುತ್ತಿಗೆ ಅವಧಿಯ ನಂತರ ಇಟ್ಟುಕೊಳ್ಳುವುದು ಕಡ್ಡಾಯವಲ್ಲ ಎಂದು ಮಾಡಿ, ಮೂಲ ಮಾಲೀಕರಿಗಿದ್ದ ನಿರ್ಬಂಧವನ್ನು ಸಡಿಲಿಸಿಬಿಟ್ಟಿತ್ತು.

ಇಲ್ಲಿಂದಾಚೆಗೆ ನಿಧಾನಕ್ಕೆ ಗುತ್ತಿಗೆ ಕಾರ್ಮಿಕ ನಿಯಂತ್ರಣ ಮತ್ತು ರದ್ದತಿ ಕಾಯ್ದೆ 1969 ಕಸದಬುಟ್ಟಿಗೆ ಸೇರಲಾರಂಭಿಸಿತ್ತು. ಅದರ ಜೊತೆಗೆ ಉದ್ದಿಮೆಯನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗಾಯಿಸಿದಾಗಲೂ ಕೆಲಸದಿಂದ ತೆಗೆದುಹಾಕುವ ವಿಚಾರದಲ್ಲಿ ಮಾಲೀಕರಿಗೇ ಅನುಕೂಲ ಮಾಡಿಕೊಡಲಾಗಿತ್ತು. (ಇಂದು ಗಾರ್ಮೆಂಟ್ಸ್ ಫ್ಯಾಕ್ಟರಿಯಲ್ಲಿ ಇದೇ ತಂತ್ರವನ್ನು ಬಳಸಿ, ಸಾವಿರಾರು ಕಾರ್ಮಿಕರನ್ನು ಬೀದಿ ಪಾಲು ಮಾಡಲಾಗುತ್ತದೆ).



ಸೇವಾ ಭದ್ರತೆಯನ್ನು ಕಲ್ಪಿಸುವ ಐಡಿಎ.ದ 5-ಬಿ ಕಲಂಅನ್ನು ಉತ್ತರ ಪ್ರದೇಶವು 1983ರಲ್ಲೇ ಬದಲಿಸಿ, 300ಕ್ಕಿಂತಲೂ ಹೆಚ್ಚು ಕಾರ್ಮಿಕರಿರುವ ಉದ್ದಿಮೆಗಳಿಗೆ ಅದನ್ನು ಸೀಮಿತಗೊಳಿಸಿತು. ಆಂಧ್ರಪ್ರದೇಶ ಸರ್ಕಾರವು 2006ರಲ್ಲಿ ಐಡಿಎ.ಅನ್ನು ವಿಶೇಷ ಆರ್ಥಿಕ ವಲಯಕ್ಕೆ ಅನ್ವಯವಾಗದಂತೆ ಕಾನೂನಿಗೆ ತಿದ್ದುಪಡಿ ಮಾಡಿತು. ಗುಜರಾತ್, ತಮಿಳುನಾಡು, ಕರ್ನಾಟಕ ಮತ್ತು ಗೋವಾ ರಾಜ್ಯಗಳೂ ಈ ತಿದ್ದುಪಡಿಯನ್ನು ತಂದವು. ಇದಲ್ಲದೇ ಆಂಧ್ರಪ್ರದೇಶ ಸರ್ಕಾರವು 2003ಲ್ಲಿ ಐಡಿಎನ ವ್ಯಾಪ್ತಿಯನ್ನು ಕುಗ್ಗಿಸಿ 20ಕ್ಕಿಂತಲೂ ಹೆಚ್ಚು ಗುತ್ತಿಗೆ ಕಾರ್ಮಿಕರಿದ್ದರೆ, ಅವರನ್ನು 12 ತಿಂಗಳ ಕಾಲ ಸತತವಾಗಿ ನೇಮಿಸಿಕೊಂಡಿದ್ದರೆ ಮಾತ್ರ ಅನ್ವಯವಾಗುತ್ತದೆ ಎಂದು ತಿದ್ದುಪಡಿ ತಂದಿತು. ಜೊತೆಗೆ ವರ್ಷ ಪೂರ್ತಿ ಕೆಲಸ ಇರುವ ಯಾವ ಉದ್ಯೋಗಕ್ಕೂ ಗುತ್ತಿಗೆ ಕಾರ್ಮಿಕರನ್ನು ನೇಮಿಸಿಕೊಳ್ಳುವಂತಿಲ್ಲ ಎಂಬುದನ್ನೂ ಬದಲಿಸಿತು. ಉತ್ಪಾದನೆಯ ಕೇಂದ್ರ (core) ಮತ್ತು ಅಂಚು (periphery) ಎಂದು ವಿಭಾಗಿಸಿ, ಅಂಚಿನ ಉದ್ಯೋಗಗಳಿಗೆ ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಬಹುದೆಂದು ಹೇಳಿತು.

ಈ ರೀತಿಯ ತಿದ್ದುಪಡಿಗಳನ್ನು ಎಲ್ಲಾ ರಾಜ್ಯಗಳು ತಂದಿಲ್ಲವಾದರೂ, ಇದು ಒಂದು ರೀತಿಯ ಅಲಿಖಿತ ನಿಯಮವಾಗಿಬಿಟ್ಟಿದೆ. ಏಕೆಂದರೆ ಅವನ್ನು ಪ್ರಶ್ನಿಸಿದ ಮೊಕದ್ದಮೆಗಳು ಸುಪ್ರೀಂಕೋರ್ಟ್‌ನಲ್ಲೂ ಬಿದ್ದು ಹೋಗಿವೆ. ಸ್ಟೀಲ್ ಅಥಾರಿಟಿ ಆಫ್ ಇಂಡಿಯಾದ ಮೊಕದ್ದಮೆಯಲ್ಲಿ ಸುಪ್ರೀಂಕೋರ್ಟ್ ಹೀಗೆ ಹೇಳಿತು: "1969ರ ಕಾಯ್ದೆಯ ಅನ್ವಯ ಒಂದು ವೇಳೆ ಗುತ್ತಿಗೆ ಪದ್ಧತಿ ನಿಷೇಧವಾದರೆ, ಇರುವ ಗುತ್ತಿಗೆ ಕಾರ್ಮಿಕರು ತನ್ನಂತೆ ತಾನೇ ಕಾಯಂ ಕಾರ್ಮಿಕರು ಆಗುವುದಿಲ್ಲ. ಮಾಲೀಕರಿಗೆ ಅಗತ್ಯವಿದ್ದರೆ ತೆಗೆದುಕೊಳ್ಳಬಹುದು. ಇಲ್ಲದಿದ್ದರೆ, ಗುತ್ತಿಗೆ ಪದ್ಧತಿ ರದ್ದಾಗಬೇಕು." ಅಂದರೆ, ಇದ್ದ ಗುತ್ತಿಗೆ ಕೆಲಸವೂ ಹೋಗುತ್ತದೆ ಎಂದರ್ಥ. ಇದಾದ ಮೇಲೆ ಈ ಕಾಯ್ದೆಯ ಬಹುಮುಖ್ಯ ಉಪಯೋಗವಾಗಿದ್ದ ಕಾಯಮಾತಿಯನ್ನು ಯಾವ ಕಾರ್ಮಿಕರೂ ಕೇಳುವುದು ಸಾಧ್ಯವಿಲ್ಲ. ಗುತ್ತಿಗೆ ಕಾರ್ಮಿಕ ನಿಯಂತ್ರಣ ಕಾಯ್ದೆಯ ಉಳಿದ ನಿಯಮಾವಳಿಗಳೂ ಪ್ರಯೋಜನಕ್ಕಿಲ್ಲ, ಏಕೆಂದರೆ ಇಂದಿಗೂ, ಅದನ್ನು ಉಲ್ಲಂಘಿಸಿದರೆ ಇರುವ ದಂಡ 100ರೂ., 200 ರೂ.ಗಳು ಮಾತ್ರವೇ.

ಜಾಗತೀಕರಣ ನೀತಿಯ ನಂತರ, ಅಂದರೆ 1990 ಉದ್ಯೋಗಾವಕಾಶಗಳು ಒಂದು ಪ್ರಮಾಣಕ್ಕೆ ಹೆಚ್ಚಿದರೂ, ಅವೆಲ್ಲವೂ ಕೆಲಸಗಳಾಗಿದ್ದು ಇದೇ ಕಾರಣಕ್ಕೆ ಇದರ ಜೊತೆಗೆ 100ಕ್ಕಿಂತ ಹೆಚ್ಚಿನ ಕಾ ಕಾರ್ಖಾನೆಗಳಲ್ಲಿ ಕೆಲವರು ಉದ್ಯೋಗವನ್ನು ಕಳೆದುಕೊಂಡಿದ್ದೂ ನಡೆ 1997-98ರಿಂದ 2003-04ರ ನಡುವೆ 7.3 ಲಕ್ಷ ಜನ ಉದ್ಯೋ (ಇದರಲ್ಲಿ 5.2 ಲಕ್ಷ ಕಾರ್ಮಿಕರು) ಉದ್ಯೋಗ ಕಳೆದುಕೊಂಡರು. ಸಾಧ್ಯವಾಗಿದ್ದು ಮೇ 1999ರಲ್ಲಿ ಪರಿಚಯಿಸಲ್ಪಟ್ಟ ವಿಆರ್‌ಎಸ್‌ನಿಂದ. ಕಾಯ್ದೆ ಬದಲಾವಣೆ ಇಲ್ಲದೆಯೂ ಈ ರೀತಿ ಮಾಡಲು ಸಾಧ್ಯವಾಗಿ

ಹೀಗೆಲ್ಲಾ ಆಗುತ್ತಿದ್ದುದರಿಂದಲೇ, ಗುತ್ತಿಗೆ ಕಾರ್ಮಿಕ ನಿಯಂತ್ರಣ ರದ್ಧತಿ ಕಾಯ್ದೆಯನ್ನು ಮತ್ತಷ್ಟು ಬಿಗಿಗೊಳಿಸಬೇಕೆಂಬುದು ಎಲ್ಲಾ ಕಾ ಸಂಘಟನೆಗಳ ಒತ್ತಾಯವಾಗಿತ್ತು. ಈ ಒತ್ತಾಯವು ಕಾರ್ಮಿಕ ವಲ ಬಹುಮುಖ್ಯವಾಗಿ ಚರ್ಚೆಯಾಗಿದ್ದರಿಂದಲೇ, ಕಳೆದ ಲೋಕಸಭಾ ಚುನಾವ ಕಾಂಗ್ರೆಸ್ ಪಕ್ಷವು ಅದನ್ನು ತನ್ನ ಪ್ರಣಾಳಿಕೆಯಲ್ಲೂ ಸೇರಿಸಿಕೊಂಡಿತ್ತು. ಕೈ ವ್ಯಾಜ್ಯಗಳ ಕಾಯ್ದೆಯನ್ನೂ ಮತ್ತಷ್ಟು ಬಲಪಡಿಸಬೇಕಿತ್ತು. ಕಾರ್ಮಿಕ ಸ ಕಟ್ಟಿಕೊಳ್ಳುವ ಹಕ್ಕನ್ನು ಖಾತರಿಗೊಳಿಸಲು ಕ್ರಮ ತೆಗೆದುಕೊಳ್ಳಬೇಕಿತ್ತು. ಸ ವಲಯದಲ್ಲಿ ಅಸಂಘಟಿತ ವಲಯ ಇಲ್ಲದಂತೆ ಮಾಡಿ, ಅಸಂಘಟಿತ ವಲ ಭದ್ರತೆಯನ್ನು ಪಡೆದುಕೊಳ್ಳಲು ಸಾಧ್ಯವಾಗುವಂತೆ ಕಾಯ್ದೆಗಳನ್ನು ತರಬ ಅಂತಹದೊಂದು ಸುಧಾರಣೆಗಾಗಿ ಕಾರ್ಮಿಕ ಸಂಘಟನೆಗಳು ಕಾಯು

ಇಂತಿಪ್ಪ ಸಂದರ್ಭದೊಳ್ ಒಳ್ಳೆಯ ದಿನಗಳು (ಅಚ್ಛೇ ದಿನ್) ಬ ಅದು ಮೋದಿ ಸರ್ಕಾರ್‌ನ ಧಿನಗಳು. ಅದರ ಮುನ್ಸೂಚನೆ ಬಿಜೆ ಭಾರೀ ಬಹುಮತದಿಂದ ಆರಿಸಿ ಬಂದ ರಾಜಸ್ತಾನದಲ್ಲೇ ಸಿಕ್ಕಿತ್ತು. ವಸುಂಧರ ಸಿಂಧಿಯಾ ಸರ್ಕಾರವು ರಾಜಸ್ತಾನವನ್ನು ಗುಜರಾತ್ ಮಾಡಲು ಕಾ ಕಾನೂನುಗಳನ್ನು ಬದಲಿಸಿದ್ದಾಗಿತ್ತು. ಅವನ್ನೇ ಈಗ ಬಹುಮತದ ಸರ್ಕಾರವು ಇಡೀ ದೇಶಕ್ಕೆ ಅನ್ವಯವಾಗುವಂತೆ ಮಾಡಲು ಹೊರಟಿ

ಅವುಗಳು ಈ ರೀತಿ ಇವೆ. ಮಹಿಳೆಯರಿಂದ ರಾತ್ರಿ ಪಾಳಿ ಮಾ ಇದುವರೆಗೆ ಇದ್ದ ನಿರ್ಬಂಧವನ್ನು ತೆಗೆಯುವುದು (ಅತ್ಯಾಚಾರ ಹಾಗೂ ಕಿರುಕುಳ ಒಂದು ದೇಶವ್ಯಾಪಿ ಪಿಡುಗಾಗಿರುವ ಸಂದರ್ಭದಲ್ಲೇ ಸರ್ಕಾರ ಜಾರಿಗೆ ತರುತ್ತಿದೆಯೆಂದರೆ ಅದರ ಉದ್ದೇಶವೇನು?), ಓವರ್ ಅವಧಿ ಈಗಿನ ಪ್ರಕಾರ 50 ಗಂಟೆಗಳಿಗಿಂತ ಹೆಚ್ಚಿರುವಂತಿಲ್ಲ. ಅದನ್ನು ಗಂಟೆಗಳಿಗೆ ಏರಿಸುವುದು. ಕೈಗಾರಿಕಾ ವ್ಯಾಜ್ಯಗಳ ಕಾಯ್ದೆಯನ್ನು ಅನ್ವಯ ಅಲ್ಲಿ ಕನಿಷ್ಠ 10 (ವಿದ್ಯುತ್ ಇದ್ದರೆ) ಅಥವಾ 20 (ವಿದ್ಯುತ್ ಇಲ್ಲ ಕಾರ್ಮಿಕರಿದ್ದರೆ ಸಾಕಿತ್ತು. ಈಗ ಅದನ್ನು ಕ್ರಮವಾಗಿ 20 ಮತ್ತು ಏರಿಸಲಾಗುತ್ತದೆ.

• ಯೂನಿಯನ್ ಕಟ್ಟಿಕೊಂಡು ಅಧಿಕೃತವಾಗಿ ಸಾಮೂಹಿಕ ಚ ಮಾಡುವಾಗ ಕೈಗಾರಿಕಾ ವ್ಯಾಜ್ಯಗಳ ಕಾಯ್ದೆಯ ಉಪಯೋಗ ಪ್ರಮುಖವಾದುದು. ಇದುವರೆಗೆ 100 ಜನರಿದ್ದ ಕೈಗಾರಿಕೆ ಅಥವಾ ಸಂಸ್ಥೆಗಳಲ್ಲೆಲ್ಲಾ ಸಾಧ್ಯವಿತ್ತು. ಈಗ ಅಲ್ಲಿ ಕನಿಷ್ಠ 300 ಜನರಿರಬೇಕು. ಮಾತ್ರವಲ್ಲದೇ, ಒಂದು ಯೂನಿಯನ್ ಮಾಡಲು ಹಿಂದೆ ಒಟ್ಟು ಕಾ ಸಮೂಹದ ಶೇ.10 ಅಥವಾ 100 ಜನವಿದ್ದರೆ ಸಾಕಿತ್ತು. ಆದರೆ ಈಗ ಶೇ.30ರಷ್ಟು ಕಾರ್ಮಿಕರಿರಬೇಕು. ಈ ಎರಡು ತಿದ್ದುಪಡಿಗಳಿಂದ 'ಸಂ ವಲಯದ ಶೇ.57-60ರಷ್ಟು ಕಾರ್ಮಿಕರು ತಮ್ಮ ಕಾನೂನುಬದ್ಧ ಸೌಲಭ್ಯ ವಂಚಿತರಾಗುತ್ತಾರೆ ಎಂದು ಅತುಲ್ ಸೂದ್ ಮತ್ತು ಇತರರು ನಡೆ ಅಧ್ಯಯನವು ಹೇಳುತ್ತದೆ. ಹಾಗೆಯೇ ಗುತ್ತಿಗೆ ಕಾರ್ಮಿಕ ಕಾಯ್ದೆಯ ಅ ಈಗ 20 ಜನರಿದ್ದರೆ ಆಗುತ್ತದೆ. ಮುಂದಿನ ದಿನಗಳಲ್ಲಿ 50 ಜನ ಮಾತ್ರ ಅದರ ಅನ್ವಯ ಮಾಡಬಹುದು.

ದೇಶದಲ್ಲಿ ಇಂದು 100ಕ್ಕೂ ಹೆಚ್ಚು ಕಾರ್ಮಿಕರನ್ನೊಳಗೊಂಡ ಕೈಗಾರಿ ಒಟ್ಟು 45 ಲಕ್ಷ ಜನ ಕಾರ್ಮಿಕರಿದ್ದಾರೆ. ಇವರು ಐಡಿಎ.ದ 5-ಬಿ ಅಧ್ಯಾಯ ನಿಯಮಗಳಿಂದಲೇ ಕೆಲಸದ ಭದ್ರತೆಯನ್ನು ಪಡೆದುಕೊಂಡಿದ್ದಾರೆ. ಅವರ ಅಭದ್ರತೆಗೆ ದೂಡುವ ತಿದ್ದುಪಡಿಗಳನ್ನು ಕೇಂದ್ರ ಸರ್ಕಾರವು ತರಲು ಹೊ ಅದಕ್ಕಾಗಿ 'ಅಭಿವೃದ್ಧಿ'ಯ ಮಂತ್ರವನ್ನೂ ಜೊತೆಜೊತೆಗೇ ಪಠಿಸ ಉದಾರವಾದೀ ಆರ್ಥಿಕತೆಯ ಕಾಲಘಟ್ಟದಲ್ಲಿ ಜನವಿರೋಧಿ ಕ್ರಮ ತರಲು ಅದಕ್ಕಿಂತ ಉತ್ತಮವಾದ ಮಂತ್ರ ಇನ್ನೊಂದಿಲ್ಲ ಎಂದು ಅದು ಮಾಡಿಕೊಂಡಿದೆ. ಅಭಿವೃದ್ಧಿ ಹೆಚ್ಚಿದಂತೆ ಅಚ್ಛೇ ದಿನ್‌ಗಳು ಹತ್ತಿರವಾಗ ಅಭಿವೃದ್ಧಿಯೆಂದರೆ ನಾಶ. ಅಚ್ಛೇ ದಿನ್ ಎಂದರೆ?

...ತ್ಯಾಚಾರಿ ಭಟ್ಟ ಮತ್ತು ಆರೆಸ್ಸೆಸ್‌ನ ಗೋಸುಂಬೆತನ




• ಗೌರಿ ಲಂಕೇಶ್

editorlankesh@gmail.com


...ಮಾಜಿಕ ಕಾರ್ಯಕರ್ತೆ ಪ್ರಭಾ ಅವರಿಗೆ ...ಭಟ್ ಎಂಬ ವಿಕೃತ ಕ್ರಿಮಿ ಕಳುಹಿಸಿದ ... ಬೆದರಿಕೆಯ ಮೆಸ್ಸೇಜ್ ಬಗ್ಗೆ ...ಲದಲ್ಲಿ ವಿರೋಧ ...ಳಲಾರಂಭಿಸಿದಾಗ ಮೊದಲು ...ಂಡಿದ್ದು ಆರೆಸ್ಸೆಸ್. ಈ ಆರೆಸ್ಸೆಸ್ ಎಂತಹ ... ಎಂದರೆ ಅದು ಇದೇ ಭಟ್ಟನಂತಹ ... ಸೃಷ್ಟಿಸುತ್ತದೆ, ಅವರ ಚಿಂತನೆಗಳನ್ನು ...ತ್ತದೆ. ಆಮೇಲೆ ಭಟ್ಟನಂತಹವರನ್ನು ...ಗಿಸಿಕೊಂಡು ಕೆಳಜಾತಿಯ ಯುವಕರಲ್ಲಿ ...ತ್ವದ ವಿಷವನ್ನು ಬಿತ್ತರಿಸುತ್ತದೆ. ಕೊನೆಗೆ ...ಯ ಯುವಕರ ಕೈಯಿಂದ ತನ್ನ ಸೈದ್ಧಾಂತಿಕ ...ಗಳ ಮೇಲೆ ದಾಳಿಗಳನ್ನು, ಗಲಭೆಗಳನ್ನು, ...ನ್ನು ಮಾಡಿಸುತ್ತದೆ. ಇದೇ ಕಾರಣಕ್ಕೆ ...ನಕ ಇಂತಹ ಹಿಂದೂತ್ವ ಕೋಮು ... ಸಿಲುಕಿಕೊಂಡಿರುವವರು ಕೆಳಜಾತಿಯ ...ರೇ ಹೊರತು ಯಾವ ಭಟ್ಟ, ಹೆಗಡೆ, ...ಂಗ ತರಹದ ಬ್ರಾಹ್ಮಣರು ...ಕೊಂಡಿರಲಿಲ್ಲ.

...ರೀಗ ಭಟ್ಟನಂತಹ ಭಟ್ಟನೇ ...ಕೊಂಡಿದ್ದಾನೆ. ಯಾವ ಕಾರಣಕ್ಕೂ ಆತನನ್ನು ... ಮಾಡುವುದು ಅಸಾಧ್ಯ ಎಂದು ಗೊತ್ತಾದ ... ಆರೆಸ್ಸೆಸ್‌ನ ಕರ್ನಾಟಕ ಶಾಖೆ ಒಂದು ...ಪ್ರಕಟಣೆಯನ್ನು ಬಿಡುಗಡೆ ಮಾಡಿ ಅದರಲ್ಲಿ ... ಸಂಘಕ್ಕೂ, ವಿ.ಆರ್.ಭಟ್ಟನಿಗೂ ಯಾವುದೇ ...ಧವಿಲ್ಲ. ಪ್ರಸ್ತುತ ವ್ಯಕ್ತಿ ನಮ್ಮ ಸಂಘಟನೆಯಲ್ಲಿ ...ದೇ ಜವಾಬ್ದಾರಿಯನ್ನು ಹೊಂದಿಲ್ಲವಾದ್ದರಿಂದ ...ಅಭಿಪ್ರಾಯಕ್ಕೂ ನಮ್ಮ ಸಂಘಟನೆಗೂ ...ಧವಿಲ್ಲ. ಆರೆಸ್ಸೆಸ್ ಇಂತಹ ಅಭಿಪ್ರಾಯಗಳನ್ನು ...ೋದಿಸುವುದಿಲ್ಲ. ನಮ್ಮ ಸಂಘಟನೆಯ ... ಪ್ರಸ್ತುತ ವಿವಾದದಲ್ಲಿ ಎಳೆದು ...ಡದೆಂದು ಮಾಧ್ಯಮಗಳನ್ನು ...ಸಿಕೊಳ್ಳುತ್ತೇವೆ" ಎಂದಿತ್ತು. ಜೊತೆಗೆ ಹೆಚ್ಚಿನ ...ತಿಗಾಗಿ ಸಂಪರ್ಕಿಸಿ ಎಂದು ಎರಡು ಮೊಬೈಲ್ ...ಗಳನ್ನು ಅದೇ ಪತ್ರಿಕಾ ಹೇಳಿಕೆಯಲ್ಲಿ ನೀಡಿತ್ತು.



ವಿಕೃತ ಭಟ್ಟ

ಇದು ನನ್ನ ಗಮನಕ್ಕೆ ಬಂದಾಗ ರಾತ್ರಿ ಒಂದು ...ಯಾಗಿತ್ತು, ಆದರೇನಂತೆ, ಆರೆಸ್ಸೆಸ್‌ನ ಸದಸ್ಯರು ... ಜೀವಿತದ ಪ್ರತಿಕ್ಷಣವನ್ನೂ 'ದೇಶಸೇವೆ'ಗಾಗಿ ...ಸಲಿಟ್ಟವರಲ್ಲವೇ? ಆದ್ದರಿಂದ ಆ ತಡ ರಾತ್ರಿ ...ನ್ ಮಾಡಿದರೂ ಇಂತಹ 'ದೇಶಭಕ್ತ'ರಿಗೆ ...ವುದೇ ಅನಾನುಕೂಲವಾಗುವುದಿಲ್ಲ ಎಂಬ ...ಬೆಯ ಮೇಲೆ ಅದೇ ಆರೆಸ್ಸೆಸ್‌ನ ...ಹೇಳಿಕೆಯಲ್ಲಿ ನೀಡಲಾಗಿದ್ದ ರಾಜೇಶ್ ಪದ್ಮಾರ್ ...ಬವರ ಮೊಬೈಲ್‌ಗೆ ಫೋನ್ ಮಾಡಿದೆ. ...ಗಾಢ ನಿದ್ದೆಯಲ್ಲಿದ್ದ ಪದ್ಮಾರ್ ಅವರು ನನ್ನ ಕರೆ



ಪ್ರಭಾ

ಸ್ವೀಕರಿಸಿದರು.

ನಮ್ಮಿಬ್ಬರ ನಡುವಿನ ಸಂಭಾಷಣೆ ಹೀಗೆ ನಡೆಯಿತು:

ನಾನು: ನಾನು ಪತ್ರಕರ್ತೆ. ರಾತ್ರಿ ಈ ಹೊತ್ತಿನಲ್ಲಿ ಫೋನ್ ಮಾಡಿದ್ದಕ್ಕೆ ಕ್ಷಮೆ ಇರಲಿ. ಅನಾನುಕೂಲವಿಲ್ಲದಿದ್ದರೆ ನನ್ನ ಕೆಲವು ಪ್ರಶ್ನೆಗಳಿಗೆ ಈಗ ಉತ್ತರಿಸಿ, ಇಲ್ಲವಾದರೆ ನಾಳೆ ಬೆಳಗ್ಗೆ ಮತ್ತೆ ಫೋನ್ ಮಾಡುತ್ತೇನೆ.

ಪದ್ಮಾರ್: ಪರವಾಗಿಲ್ಲ, ಈಗಲಾದರೂ, ಬೆಳಗ್ಗೆಯಾದರೂ ನಮ್ಮ ಉತ್ತರಗಳು ಬದಲಾಗುವುದಿಲ್ಲ. ಆದ್ದರಿಂದ ಪ್ರಶ್ನೆಗಳನ್ನು ಕೇಳಿ.

ನಾಮ: ನಿಮ್ಮ ಪತ್ರಿಕಾ ಹೇಳಿಕೆಯಲ್ಲಿ ನಿಮ್ಮ ಸಂಘಟನೆಗೂ, ವಿ.ಆರ್.ಭಟ್ಟನಿಗೂ ಸಂಬಂಧ ಇಲ್ಲ ಎಂದಿದ್ದೀರಿ. ಅಂದರೆ ಆತ ಆರೆಸ್ಸೆಸ್ ಸದಸ್ಯನಲ್ಲವೇ?

ಪದ್ಮಾರ್: ಅವರು ನಮ್ಮ ಸಂಘಟನೆಯಲ್ಲಿ ಯಾವುದೇ ಜವಾಬ್ದಾರಿಯನ್ನು ಹೊಂದಿಲ್ಲ.

ನಾನು: ಆದರೆ ಅವರು ಆರೆಸ್ಸೆಸ್ ಸದಸ್ಯರೇ?

ಪದ್ಮಾರ್: ಅವರು ಯಾವುದೇ ಹುದ್ದೆಯನ್ನು ನಮ್ಮ ಸಂಘಟನೆಯಲ್ಲಿ ಹೊಂದಿಲ್ಲ.

ನಾನು: ನನ್ನ ಪ್ರಶ್ನೆ ಇಷ್ಟೇ: ವಿ.ಆರ್.ಭಟ್ ಆರೆಸ್ಸೆಸ್ ಸದಸ್ಯನೇ?

ಪದ್ಮಾರ್: ಅವರು ನಮ್ಮ ಸಂಘಟನೆಯಲ್ಲಿ ಯಾವುದೇ ಜವಾಬ್ದಾರಿಯುತ ಹುದ್ದೆಯನ್ನು ಹೊಂದಿಲ್ಲವಾದ್ದರಿಂದ ಅವರ ಅಭಿಪ್ರಾಯಕ್ಕೂ ನಮ್ಮ ಸಂಘಟನೆಗೂ ಸಂಬಂಧವಿಲ್ಲ.

ನಾನು: (ಮತ್ತೊಮ್ಮೆ) ನನ್ನ ಪ್ರಶ್ನೆ ಇಷ್ಟೇ: ವಿ.ಆರ್.ಭಟ್ ಆರೆಸ್ಸೆಸ್ ಸದಸ್ಯನೇ?

ಪದ್ಮಾರ್: ಆ ಪ್ರಶ್ನೆಗೆ ನಾನು ಉತ್ತರ ಕೊಡಲಾಗುವುದಿಲ್ಲ.

ನಾನು: ಯಾಕೆ? ಆರೆಸ್ಸೆಸ್ ಎಂದೂ ತನ್ನ ಸದಸ್ಯರ ಪಟ್ಟಿಯನ್ನು ಹೊಂದಿಲ್ಲದಿರುವುದರಿಂದ ಭಟ್ಟ ಆರೆಸ್ಸೆಸ್ ಸದಸ್ಯ ಹೌದೋ ಅಲ್ಲವೋ ಎಂಬ ಪ್ರಶ್ನೆಗೆ ಉತ್ತರ ಕೊಡಲಾಗುವುದಿಲ್ಲ ಎಂದು ತಾವು ಹೇಳುತ್ತಿದ್ದೀರಾ?


ಪದ್ಮಾರ್: ನಮ್ಮದು ಒಂದು ದೊಡ್ಡ ಸಂಘಟನೆ.

ನಾನು: ನಾನು ಪೆದ್ದಿ ಅಲ್ಲ, ನನಗೆ ಗೊತ್ತು ನಿಮ್ಮದು ಒಂದು ಅಂತಾರಾಷ್ಟ್ರೀಯ ಸಂಘಟನೆ ಎಂದು. ನನ್ನ ಪ್ರಶ್ನೆ ಇಷ್ಟೇ: ಆರೆಸ್ಸೆಸ್ ಎಂದೂ ತನ್ನ ಸದಸ್ಯರ ಪಟ್ಟಿಯನ್ನು ಇಟ್ಟುಕೊಳ್ಳುವುದಿಲ್ಲವಾದ್ದರಿಂದ ಭಟ್ಟ ತಮ್ಮ ಸದಸ್ಯ ಹೌದೋ ಅಲ್ಲವೋ ಎಂಬುದನ್ನು ದೃಢೀಕರಿಸಲಾಗುವುದಿಲ್ಲ ಎಂಬುದು ನಿಮ್ಮ ಉತ್ತರ ಎಂದು ನಾನು ಬರೆಯಬಹುದೇ?

ಪದ್ಮಾರ್: ಆತ ಸಂಘದಲ್ಲಿ ಯಾವುದೇ ಜವಾಬ್ದಾರಿಯುತ ಹುದ್ದೆಯನ್ನು ಹೊಂದಿಲ್ಲ.

ನಾನು: ನಿಮ್ಮ ಉತ್ತರವನ್ನು ನಾನು ಪ್ರಶ್ನಿಸುತ್ತಿಲ್ಲ. ನಾನು ಕೇಳುತ್ತಿರುವ ಪ್ರಶ್ನೆ ಇಷ್ಟೇ: ಆರೆಸ್ಸೆಸ್ ಎಂದೂ ತನ್ನ ಸದಸ್ಯರ ಪಟ್ಟಿಯನ್ನು ಇಟ್ಟುಕೊಳ್ಳುವುದಿಲ್ಲವಾದ್ದರಿಂದ ಭಟ್ಟ ತಮ್ಮ ಸದಸ್ಯ ಹೌದೋ ಅಲ್ಲವೋ ಎಂಬುದನ್ನು ದೃಢೀಕರಿಸಲಾಗುವುದಿಲ್ಲ ಎಂಬುದು ನಿಮ್ಮ ಉತ್ತರವೋ?

ಪದ್ಮಾರ್: ಹೌದು. ಆರೆಸ್ಸೆಸ್ ತನ್ನ



ಭಟ್ಟನ ಊರಿನಲ್ಲಿ ಆರೆಸ್ಸೆಸ್‌ನ ಶಾಖೆ ಪ್ರಾರಂಭವಾಗುತ್ತಿರುವುದು

ಸದಸ್ಯರ ಪಟ್ಟಿಯನ್ನು ಹೊಂದಿಲ್ಲ.

ಇದು ಆರೆಸ್ಸೆಸ್‌ನ ಒಂದು ಹಳೇ ಕುತಂತ್ರ. ದಾಖಲೆಗಳಲ್ಲಿ ಹಲವೇ ಹಲವು ಪದಾಧಿಕಾರಿಗಳನ್ನು ಹೊರತುಪಡಿಸಿದರೆ ಆರೆಸ್ಸೆಸ್‌ಗೆ ಸದಸ್ಯರು ಎಂಬುದೇ ಎಂದೂ ಇಲ್ಲವೇ ಇಲ್ಲ. ಇದಕ್ಕೆ ಒಂದು ಕಾರಣವೂ ಇದೆ. ಇದರ ಎಲ್ಲಾ ಸದಸ್ಯರು ಒಂದಲ್ಲಾ ಒಂದು ರೀತಿಯಲ್ಲಿ ನಮ್ಮ ಸಂವಿಧಾನದ ಮೂಲ ಆಶಯಗಳ ವಿರುದ್ಧ ಕೆಲಸ ಮಾಡುವುದರಿಂದ ಅವರನ್ನೆಲ್ಲ ರಕ್ಷಿಸಲೆಂದೇ ಆರೆಸ್ಸೆಸ್ ಎಂದೂ ತನ್ನ ಸದಸ್ಯರ ಪಟ್ಟಿಯನ್ನು ಹೊಂದಿಲ್ಲ. ಈ ಕಾರಣಕ್ಕೇ ಆರೆಸ್ಸೆಸ್ ಮೂರು ಬಾರಿ (ಮಹಾತ್ಮ ಗಾಂಧಿಯ ಹತ್ಯೆ, ತುರ್ತುಪರಿಸ್ಥಿತಿ ಮತ್ತು ಬಾಬ್ರಿ ಮಸೀದಿಯ ಧ್ವಂಸದ ನಂತರ) ನಿಷೇಧಿತ ಸಂಘಟನೆ ಎಂದು ಭಾರತದ ಸರ್ಕಾರದಿಂದ ಘೋಷಿಸಲ್ಪಟ್ಟಿದ್ದರೂ ಅದರ ಯಾವ ಸದಸ್ಯನೂ ಕಾನೂನಿನ ಕರ್ಮಕ್ಕೆ ಗುರಿಯಾಗಿಲ್ಲ- ಗಾಂಧಿ ಹತ್ಯಾ ಪ್ರಕರಣದಲ್ಲಿ ವಿ.ಡಿ.ಸಾವರ್ಕರ್ ಕೂಡ ನೇಣು ಗಂಬದಿಂದ ಬಚಾವಾಗಿದ್ದು ಈ ಕಾರಣಕ್ಕೇನೇ.

ಈಗ ಅತ್ಯಾಚಾರಿ ಭಟ್ಟನ ವಿಷಯದಲ್ಲೂ ಆರೆಸ್ಸೆಸ್ ಅದೇ ತಂತ್ರವನ್ನು ಉಪಯೋಗಿಸುತ್ತಿದೆ. ಆದರೆ ಭಟ್ಟ ಆರೆಸ್ಸೆಸ್ ಸದಸ್ಯ ಎಂಬುದನ್ನು ಆತನೇ ತನ್ನ ಬರಹಗಳ ಮೂಲಕ ಸ್ಪಷ್ಟಪಡಿಸಿದ್ದಾನೆ. ಇದಕ್ಕೆ ಸಾಕ್ಷಿಯಾಗಿ ಆತ ತನ್ನ ಬ್ಲಾಗ್‌ನಲ್ಲಿ ಬರೆದಿದ್ದ ಒಂದು ಲೇಖನದ ಆಯ್ದ ಭಾಗಗಳನ್ನು ಇಲ್ಲಿ ನೀಡುತ್ತಿದ್ದೇನೆ.

ಊರಿನಲ್ಲಿ ಆರ್.ಎಸ್.ಎಸ್. ಸ್ಥಾಪನೆ

ಸಮೃದ್ಧವಾಗಿದ್ದ ಭಾರತದಲ್ಲಿ ಅನ್ಯ ಸಂಸ್ಕೃತಿಯ ಹಾವಳಿ ಹೆಚ್ಚತೊಡಗಿದಾಗ ಅದನ್ನು ನಿಗ್ರಹಿಸಿ ಸನಾತನ ಧರ್ಮವನ್ನು ಎತ್ತಿಹಿಡಿಯುವ ಸಲುವಾಗಿ ಸ್ವಾವಲಂಬಿಯಾಗಿ ಸ್ಥಾಪನೆಗೊಂಡಿದ್ದೇ ರಾಷ್ಟ್ರೀಯ ಸ್ವಯಂ ಸೇವಕ ಸಂಘ. ಅಂತಹ ಸಂಘದ ಶಾಖೆ ನಮ್ಮೂರಿಗೂ ಬೇಕೆಂಬುದು ನನ್ನ ಮನಸ್ಸಿನಲ್ಲಿತ್ತು.

ನಮ್ಮ ಊರಿನಲ್ಲಿ ಹಿಂದೆಂದೂ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶಾಖೆ ಆರಂಭಗೊಂಡಿರಲಿಲ್ಲ. ಶಾಖೆಯನ್ನು ತೆರೆಯಬೇಕು ಎಂಬುದು ನಮ್ಮ ಕುಟುಂಬದ ಇರಾದೆಯಾಗಿತ್ತು. ಸಂಘಕ್ಕೂ ಸಹ ಆದರಿಸುವ ಜನರ ಅಗತ್ಯತೆಯಿತ್ತು. ಕುಮಟಾದ ವೆಂಕಟೇಶ್ ಶಾನಭಾಗ್ ವಕೀಲರು ಸೇರಿದಂತೆ ಸರಸಂಘದ ಹಲವು ಪ್ರಮುಖರು ಗೊತ್ತಾದ ಎರಡು ದಿನ ನಮ್ಮ ಮನೆಯಲ್ಲೇ ಬೈಠಕ್ ನಡೆಸಿದರು. ಇಡೀ ಮನೆಯನ್ನೂ ಸ್ವಯಂ ಸೇವಕರ ಅನುಕೂಲಕ್ಕಾಗಿ ಅಣಿಗೊಳಿಸಿ ಅವರೆಲ್ಲರಿಗೂ ಸ್ವಂತ ಮನೆಯೆಂಬ ಭಾವನೆ ಬರುವಂತಹ ವಾತಾವರಣವನ್ನು ನಿರ್ಮಿಸಿದ್ದೆವು. ಸನಾತನ ದೇಶಭಕ್ತರು 15-20 ಜನ ಗೊತ್ತಾದ ದಿನ ಬಂದಿಳಿದರು, ಮಹಡಿಯಲ್ಲಿ ಇಡೀ ದಿನ ಚರ್ಚೆಗಳು ನಡೆದವು. ಯಾವ ರೀತಿಯಲ್ಲಿ ಹೇಗೆ ಹೇಗೆ ನಡೆಸಬೇಕೆಂಬ ಕಾರ್ಯಕಲಾಪಗಳ ಬಗೆಗೆ ಮಾತುಕತೆಗಳು ಜರುಗಿದವು. ತಂಗಿದ್ದ ಎರಡು ದಿನಗಳಲ್ಲಿ ಅಪರಿಚಿತ ಮುಖಗಳೆಲ್ಲ ಪರಿಚಿತವಾಗಿ ಆತ್ಮೀಯವಾಗಿದ್ದವು.

ಅದಾದ ವಾರಗಳ ನಂತರ ಅಂಕೋಲಾ-ಅಚವೆ ಮೂಲದ ಹಬ್ಬಣಮನೆ ಮಹಾಬಲೇಶ್ವರ ಭಟ್ ಎಂಬ ಕಾರ್ಯವಾಹರನ್ನು ನಮ್ಮೂರಿಗೆ ಕಳಿಸಲಾಯ್ತು. ಆರಂಭಿಕ ದಿನಗಳಲ್ಲಿ ಅವರ ವಸತಿ ನಮ್ಮ ಮನೆಯಲ್ಲಿಯೇ ನಡೆಯಿತು. (ಪ್ರತಿ ದಿನ ಜನರಿಗೆ) ಒಂದಷ್ಟು ಯೋಗಾಸನಗಳನ್ನೂ ಸೂರ್ಯನಮಸ್ಕಾರಾದಿಗಳನ್ನೂ ಅವರು ಕಲಿಸಿಕೊಡುವುದರ ಜೊತೆಗೆ ದೇಶದ ಬಗೆಗೆ ಕುರಿತು ತಕ್ಕಮಟ್ಟಿಗೆ ಮಾತನಾಡುತ್ತಿದ್ದರು.

ಯಾರೋ ರಾಜಕಾರಣಿಗಳು, 'ಬುದ್ಧಿಜೀವಿಗಳು' ಕುಹಕದಿಂದ ಸಂಘವನ್ನು ಬೈಯಬಹುದು. ಆನೆ ಬೀದೀಲಿ ಹೋಗುವಾಗ ನಾಯಿ ಬೊಗಳಿದರೆ ಆನೆಗೇನೂ ಅಪಮರ್ಯಾದೆಯಾಗುವುದಿಲ್ಲ. ಹೀಗಾಗಿ ನನ್ನ ಸ್ನೇಹಿತರಲ್ಲಿ ನನ್ನ ಪ್ರಾರ್ಥನೆಯಿಷ್ಟೇ: ಸರಸಂಘವೆಂಬುದು ದೇಶೋದ್ಧಾರಕರ ಸಂಘ. ಅದರ ಒಂದು ಅತ್ಯದ್ಭುತ ಕಾರ್ಯಕರ್ತ ಇಂದು ದೇಶವನ್ನಾಳುತ್ತ ಬದಲಾವಣೆ ತರುತ್ತಿರುವುದು ನಮ್ಮೆಲ್ಲರ ಸೌಭಾಗ್ಯ. ಸರಸಂಘದ ಎಲ್ಲಾ ಕಾರ್ಯಕರ್ತರ ಮೇಲೂ ಪ್ರೀತಿಯಿರಲಿ, ಅಭಿಮಾನವಿರಲಿ, ನಿಮ್ಮವರೆಂಬ ಭಾವನೆಯಿರಲಿ, ಅವರನ್ನು ಕಂಡು-ಕರೆದು ಆದರಿಸುವ ಔದಾರ್ಯವಿರಲಿ, ಶುಭದಿನ.

ಭಟ್ಟ ಆರೆಸ್ಸೆಸ್‌ನ ಸದಸ್ಯನಾಗಿರದಿದ್ದರೆ ಆ ಸಂಘಟನೆಯ ಪದಾಧಿಕಾರಿಗಳು ಯಾಕೆ ಅವನ ಮನೆಗೆ ಹೋಗಿ, ಅಲ್ಲಿ ಆತಿಥ್ಯವನ್ನು ಸ್ವೀಕರಿಸಿ, ಆತನ ಊರಲ್ಲೊಂದು ಶಾಖೆಯನ್ನು ಪ್ರಾರಂಭಿಸುತ್ತಿದ್ದರು?

ಈಗ ನೀವೇ ನಿರ್ಧರಿಸಿ, ಈಗ ಸಿಕ್ಕಿಹಾಕಿಕೊಂಡಿರುವ ಅತ್ಯಾಚಾರಿ ಭಟ್ಟ ನಿಜ ಹೇಳುತ್ತಿದ್ದಾನೋ ಅಥವಾ ಈ ಕಳಂಕದಿಂದ ಪಾರಾಗಲು ಆರೆಸ್ಸೆಸ್ ಸುಳ್ಳುಹೇಳುತ್ತಿದೆಯೋ ಎಂದು!!

ಆರೆಸ್ಸೆಸ್‌ನ ಗೋಸುಂಬೆತನಕ್ಕೆ ಇದಕ್ಕಿಂತ ಸಾಕ್ಷಿ ಬೇಕಾ? ■

ಕರಾವಳಿ

ರತ್ನಾ ಸಾವಿನ ಸುತ್ತ ಸಂಶಯಗಳ ಹುತ್ತ!



ಅವಿಭಜಿತ ದಕ್ಷಿಣ ಕನ್ನಡದ ಪೊಲೀಸ್ ವ್ಯವಸ್ಥೆ ಎಕ್ಕುಟ್ಟಿ ಹೋಗಿದೆ. ಕೇಸರೀಕರಣದ ಕಳಂಕದಿಂದ ವಿಶ್ವಾಸಾರ್ಹತೆ ಕಳೆದುಕೊಂಡಿದ್ದ ಕರಾವಳಿಯ ಖಾಕಿ ಪಡೆಯನ್ನೀಗ ಕರ್ತವ್ಯನಿಷ್ಠೆ, ವೃತ್ತಿ ಪರತೆಯ ಕೊರತೆ ಬಿಟ್ಟೂಬಿಡದೆ ಬಾಧಿಸುತ್ತಿದೆ. ಅನೈತಿಕ ಪೊಲೀಸರಿಗೆ ಅಂಕುಶ ಇಡಲಾಗದ ಈ ದಂಡಪಿಂಡ ಅಸಲಿ ಪೊಲೀಸರು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸಾಲು-ಸಾಲು ಸಂಶಯದ ಸಾವು, ಕೊಲೆ, ಮಾನಹರಣ, ಮತಾಂಧ ದಾಂಧಲೆಗಳಾದಾಗಲೂ ಕುಂಭಕರ್ಣನಿಗೆ ಪೈಪೋಟಿ ಕೊಡುವ ಸ್ಟೈಲಿನ ಗೊರಕೆ ಹೊಡೆಯುತ್ತಿದ್ದಾರೆ. ಸರ್ಕಾರ ಬದಲಾದರೂ ಖಾಕಿಗಳು ಮಾತ್ರ ಇದ್ದಂತೆಯೇ ಇದ್ದಾರೆ.

ಅವಳಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷದಲ್ಲಿ ನಡೆದ ಸುಮಾರು ಒಂದು ಡಜನ್‌ಗಿಂತಲೂ ಹೆಚ್ಚಿನ ನಿಗೂಢ ಸಾವು, ಪಕ್ಕಾ ಕೊಲೆಗಳ ರಹಸ್ಯ ಇವತ್ತಿಗೂ ಬೇಧಿಸಲಾಗಿಲ್ಲ! ಪ್ರಾಮಾಣಿಕ ತನಿಖೆ ಮಾಡದೆ ತರತರದ ಕುಂಟುನೆಪಗಳನ್ನು ಪೊಲೀಸರು ಬಿತ್ತರಿಸುತ್ತಿದ್ದಾರೆ. ಧರ್ಮ ವ್ಯಾಪಾರಿಗಳ ಶ್ರೀ ಮಂಜುನಾಥ ಸ್ವಾಮಿ ಸನ್ನಿದಿಯಲ್ಲಾದ ಸೌಜನ್ಯ ರೇಪ್ ಮತ್ತು ಮರ್ಡರ್ ದೇಶ-ವಿದೇಶದಲ್ಲಿ ಅಲ್ಲೋಲ ಕಲ್ಲೋಲ ಮಾಡಿದರೂ ಸ್ಥಳೀಯ ಪೊಲೀಸರು ಮಾತ್ರ ಪ್ರಕರಣ ಹಳ್ಳ ಹಿಡಿಸಲು ಹವಣಿಸಿದ್ದರು. ಎಚ್ಚೆತ್ತ ಜನ ಬೀದಿಗಿಳಿದು ಈ ಕೇಸ್ ಸಿಬಿಐಗೆ ಒಪ್ಪಿಸುವಂತೆ ಮಾಡಿದರು.

ಆದರೆ ಕರಾವಳಿಯ ಇನ್ನೂ ಅನೇಕ ಕೊಲೆ ಪ್ರಕರಣಗಳು ಪೊಲೀಸರ ಹೊಣೆಗೇಡಿತನದಿಂದ ಮುಚ್ಚಿಹೋಗುತ್ತಿವೆ. ಕರಾವಳಿ ಪೊಲೀಸರಿಗೆ ತಾವು ತೊಡುವ ಖಾಕಿಗೆ, ಪಡೆವ ಸಂಬಳಕ್ಕೆ ನಿಯತ್ತಿನಿಂದ ಇರಬೇಕೆಂಬ ಋಣ ಪ್ರಜ್ಞೆಯೂ ಇಲ್ಲದಾಗಿದೆ. ಹೀಗಾಗಿ ಅವಳಿ ಜಿಲ್ಲೆಯ ಕಿರಾತಕರ ಕರ್ತವ್ಯ ಭ್ರಷ್ಟತೆಯ ಪುರಾಣಕ್ಕೆ ಈಗ ಮತ್ತೊಂದು ಸೇರ್ಪಡೆಯಾಗಿದೆ. ಕುಂದಾಪುರ ತಾಲ್ಲೂಕಿನ ಉತ್ತರ ತುದಿಯಲ್ಲಿರುವ ಶಿರೂರು ಎಂಬ ಹಳ್ಳಿಯ ಹದಿನೇಳರ ಹರೆಯದ ಹುಡುಗಿ ರತ್ನಾ ಕೊಟ್ಟಾರಿ ಹೆಣವಾಗಿ ಕಂಡು ಮೂರು ವಾರ ಕಳೆದರೂ ಈ ಸಾವಿಗೊಂದು 'ಹೆಸರು' ಇಡುವ ಯೋಗ್ಯತೆ ಪೊಲೀಸರಿಗಿಲ್ಲವಾಗಿದೆ. ರತ್ನಾಳದು ಹತ್ಯೆಯೋ, ಆತ್ಮಹತ್ಯೆಯೋ, ಆಕಸ್ಮಿಕ ಸಾವೋ ಅಥವಾ ಅತ್ಯಾಚಾರಿ ಮೃಗಗಳಿಗಾದ ಆಹುತಿಯೋ ಎಂದು ಹೇಳಲು ಹೇತ್ಲಾಂಡಿ ಪೊಲೀಸ್ ಅಧಿಕಾರಿಗಳಿಂದಾಗಿಲ್ಲ!!

ರತ್ನಾ ಬಡ ಹಿಂದುಳಿದ ವರ್ಗದ ಕುಟುಂಬದ ಕಣ್ಮಣಿಯಂತಿದ್ದ ಕೂಸು. ಶಿರೂರು ಪದವಿ ಪೂರ್ವ ಕಾಲೇಜಿನಲ್ಲಿ ಪ್ರಥಮ ಪಿಯುಸಿ ವ್ಯಾಸಂಗ ಮಾಡುತ್ತಿದ್ದಳು. ಆಕೆ ಕಾಲೇಜಿಗೆ ಹೋಗಿ ಬರುವುದು ಗುಡ್ಡ-ಬೆಟ್ಟದ ನಿರ್ಜನ ಹಾದಿ ದಾರಿಯಲ್ಲಾಗಿತ್ತು. ಸ್ವಲ್ಪ ದೂರ ಆಕೆಗೆ ಗೆಳತಿಯರಿಬ್ಬರು ಸಿಗುತ್ತಿದ್ದರು. ಆದರೆ ಮುಂದೆ ಆಕೆಯದೇ ಒಂಟಿ ಪಯಣವಾಗಿತ್ತು. ದಿನವೂ ಹೀಗೆ ಕಲಿಕೆಗೆಂದು ಹೋಗಿಬರುತ್ತಿದ್ದ ರತ್ನಾ 09.07.2014ರಂದು ಸಂಜೆಯಾದರೂ ಮನೆಗೆ ಬರಲಿಲ್ಲ. ಕಂಗಾಲಾದ ಹೆತ್ತವರು-ಊರವರು ಕಾಡನ್ನೆಲ್ಲ ಹುಡುಕಿದರೂ ಆಕೆ ಕಾಣಲಿಲ್ಲ. ಬೇರೆ ಗತಿಯಿಲ್ಲದೆ ಪೊಲೀಸರಿಗೆ ದೂರು ಕೊಟ್ಟರು.

ಕಂಪ್ಲೇಂಟು ಬಂದು ಮೂರು ದಿನವಾದರೂ ಬೈಂದೂರು ಪೊಲೀಸರಿಗೆ ರತ್ನಾಳ ಪತ್ತೆ ಹಚ್ಚಲಿಕ್ಕಾಗಲಿಲ್ಲ; ಮನೆ ಮಂದಿಗೂ ಆಕೆ ಸಿಗಲಿಲ್ಲ. ಹುಡುಕಾಟ ಮಾತ್ರ ನಡೆದೇ ಇತ್ತು. 11.07.2014ರಂದು ಮುಂಜಾನೆ ಕೊಟ್ಟಿಗೆಗೆ ಸೊಪ್ಪು ತರಲೆಂದು ಕಾಡಿಗೆ ಹೋದವರಿಗೆ ರತ್ನಾ ಹೆಣವಾಗಿ ಬಿದ್ದಿರುವುದು ಕಾಣಿಸಿತು. ರತ್ನಾಳ ಮನೆಯಿಂದ ಕೇವಲ 2 ಕಿ.ಮೀ. ದೂರದ ಕಲಂದೂರು ಗುಡ್ಡದ ಮೇಲೆ ಕೊಳೆತ ಸ್ಥಿತಿಯಲ್ಲಿ ಆಕೆಯ ಶವ ಅಂಗಾತ ಬಿದ್ದಿತ್ತು. ಆಕೆಯ ವೇಲ್ ಮತ್ತು ಚಪ್ಪಲಿ ದೇಹದಿಂದ ದೂರದಲ್ಲಿ ಬಿದ್ದುಕೊಂಡಿತ್ತು. ಆದರೆ ಪುಸ್ತಕದ ಬ್ಯಾಗ್ ಮತ್ತು ಮೃದು ಪಾನೀಯದ ಬಾಟಲಿ ರತ್ನಾಳ ಮೃತ ಶರೀರದ ಹತ್ತಿರವೇ ಇತ್ತು!

ಹಾಗಂತ ಆಕೆಯ ದೇಹದ ಮೇಲೆ ಹೇಳುವಂಥ ಗಾಯಗಳಿರಲಿಲ್ಲ; ಬಟ್ಟೆ ಹರಿದಿರಲಿಲ್ಲ. ರತ್ನಾಳ ದೇಹ, ಆಕೆಯ ಬ್ಯಾಗ್-ವೇಲ್-ಚಪ್ಪಲಿ ಇದ್ದ ಸ್ಥಿತಿ-ಗತಿ ಕಂಡವರು ಇದೊಂದು ಅಪಹರಣ ಮತ್ತು ಕೊಲೆಯೆಂದು ತರ್ಕಿಸಿದರು; ಪೊಲೀಸರೂ ಆರಂಭದಲ್ಲಿ ಕೊಲೆಯೆಂದೇ ಬಗೆದರು. ಆದರೆ ಎಸ್ಪಿ ಬೋರಲಿಂಗಯ್ಯ ಅತ್ಯಾಚಾರವಲ್ಲ ಎಂದು ವಾದಿಸಿದರು. ಅತ್ಯಾಚಾರದ ಯಾವ ಕುರುಹುಗಳೂ ದೇಹದ ಮೇಲಾಗಲಿ, ಹೆಣವಿದ್ದ ಪರಿಸರದಲ್ಲಾಗಲಿ ಕಾಣಲಿಲ್ಲ ಎಂಬುದು ಎಸ್ಪಿ ಅನಿಸಿಕೆ. ಜಿಲ್ಲಾ ಮಂತ್ರಿ ವಿನಯ್‌ಕುಮಾರ್ ಸೊರಕೆಯೂ ಎಸ್ಪಿ ಹೇಳಿದ ಪಾಠವನ್ನೇ ಒಪ್ಪಿಸಿದ್ದಾರೆ. ಇದು ರೇಪ್ ಅಲ್ಲ; ಶವ ಕೊಳೆತಿರುವುದರಿಂದ ನಿಖರ ಕಾರಣದ ವೈದ್ಯಕೀಯ ವರದಿ ಬರುವುದು ತಡವಾಗಿದೆ ಎಂಬುದು ಮಂತ್ರಿಗಳ ಹೇಳಿಕೆ.



ರತ್ನಾಳ ಶವ



ಸ್ಪಷ್ಟವಾದ ವೈದ್ಯಕೀಯ ವರದಿ ಬರಲು ಈ ಹೈಟೆಕ್ ವೈದ್ಯಕೀಯ ವಿಜ್ಞಾನ ಯುಗದಲ್ಲಿ 20 ದಿನಗಳು ಬೇಕಾ? ಹಾಗೆಂಬ ಕೂಗು ಈಗ ಇಡೀ ಕರಾವಳಿಯಲ್ಲಿ ಎದ್ದಿದೆ. ಅದರಲ್ಲೂ ವೈದ್ಯಕೀಯ ರಂಗದಲ್ಲಿ ಮುಂದುವರಿದಿರುವ ಉಡುಪಿ ಜಿಲ್ಲೆಯಲ್ಲಿ ಪೋಸ್ಟ್ ಮಾರ್ಟಮ್ ರಿಪೋರ್ಟೊಂದು ಬರಲು ವಿಳಂಬವಾಗುವುದಾದರೂ ಹೇಗೆ? ಅಷ್ಟಕ್ಕೂ ಶವ ಸಾಗಿಸಿರುವುದು ದಿ ಗ್ರೇಟ್ ಮಣಿಪಾಲ್ ಪೈಗಳ ಕೆಎಂಸಿ ವೈದ್ಯಕೀಯ ಕಾಲೇಜಿಗೆ. ಇಷ್ಟಾದರೂ ಮರಣೋತ್ತರ ವರದಿ ಬರದಿರುವುದು ಸಂಶಯಗಳ ಮೇಲೆ ಸಂಶಯಗಳನ್ನು ಸಾರ್ವಜನಿಕರಲ್ಲಿ ಸೃಷ್ಟಿಸುತ್ತಿದೆ.

ರತ್ನಾಳ ಸಾವು ಅನೇಕ ಸಾಧ್ಯತೆಗ... ಚರ್ಚೆಗೊಳಗಾಗುತ್ತಿದೆ. ಆಕೆಯ ಹೆಣ ಸಿ... ಹಲಂದೂರು ಗುಡ್ಡದ ಸುತ್ತಲಿನ ಸಾಂದರ್ಭಿಕ ಸಾಕ್ಷ್ಯ... ಅವಲೋಕಿಸಿದರೆ, ಅಲ್ಲಿ ಅತ್ಯಾಚಾರ ಅಥವಾ ಕೊಲೆ ಸಾಧ್ಯತೆ ತೀರಾ ಕಮ್ಮಿ ಎನ್ನಿಸುತ್ತದೆ. ಆದರೆ ಆಕೆ... ಬೆಟ್ಟದ ದಾರಿಯಿಂದ ಅಪಹರಿಸಿ, ಅತ್ಯಾಚಾರ ಮಾ... ಸಾಧ್ಯತೆಗಳ ಬಗ್ಗೆಯೂ ಜನ ಮಾತಾಡುತ್ತಾರೆ. ... ಒಯ್ದು ಬೆದರಿಸಿ ಬಳಸಿ, ಅಲ್ಲೇ ಕೊಂದು ಆಕೆಯ... ಬಳಿಯ ಗುಡ್ಡಕ್ಕೆ ತಂದೆಸೆದರಾ ಕಾಮಪಿಪಾಸುಗಳು? ಒಬ್ಬಂಟಿಯಾಗಿ ನಿರ್ಜನ ಕಾಡು ದಾರಿಯಲ್ಲಿ ಕಾ... ಹೋಗಿ-ಬರುತ್ತಿರುವುದು ಗೊತ್ತಿರುವ ಪಾಪಿಗಳು ... ಮಾಡಿರುವ ಬಲವಾದ ಅನುಮಾನ ಜನರಲ್ಲಿದೆ.

ಆದರೆ ಸ್ಥಳೀಯ ಅಧಿಕ ಪ್ರಸಂಗಿ ಶಾಸಕ ಗೋ... ಪೂಜಾರಿಗೆ ಆ ಹುಡುಗಿಯ ಸಾವಿನಲ್ಲಿ ಔಷಧಿಯ... ಪರಿಣಾಮ ಕಂಡಿದೆ! ಯಾವುದೋ ಬೇನೆಗೆಂದು ... ಗುಳಿಗೆಗಳನ್ನು ತಿಂದಿದ್ದಾಳೆ. ಜತೆಗೆ ಮೃದು ಪಾ... ಕುಡಿದಿದ್ದಾಳೆ. ಅದು ರಿಯಾಕ್ಷನ್ ಆಗಿದೆ ಎಂ... ಅನ್‌ಪಡ್ ಎಮ್ಮೆಲ್ಲೆ ಗೋ-ಪಾಲನ ಅಭಿಪ್ರಾ... ಹಾಗೊಮ್ಮೆ ರತ್ನಾ ಯಾವುದೋ ಗುಳಿಗೆ ಸೇ... ನಿಜವೇ ಇದ್ದರೂ, ಆಕೆ ಮನೆಯತ್ತ ಹೋಗಬೇಕ... ದಾರಿತಪ್ಪಿ ಗುಡ್ಡದತ್ತ ಹೋಗುವುದಾದರೂ ಹೇಗೆ? ಕುಸಿದು ಬಿದ್ದು ಸಾಯುವುದಿದ್ದರೆ ಅದು ದಾರಿಯಲ್ಲಾ... ವಿನಃ ರಸ್ತೆ ಪಕ್ಕದ ಗುಡ್ಡದಲ್ಲಾಗಲು ಸಾಧ್ಯವಾ?

ಮನೆ ಜಾಡು ಬಿಟ್ಟು ನಿಗೂಢ ಸ್ಥಳದತ್ತ ಹೋಗಿರುವುದಕ್ಕೆ ಮೂರು ಸಾಧ್ಯತೆಯಿದೆ. ಆಕೆ... ಯಾರೋ ಪುರುಷ ಮೃಗ ಪಕ್ಕದ ಗುಡ್ಡಕ್ಕೆ ಎಳೆದೊಯ್... ಆ ಆಘಾತದಿಂದ ಮುಗ್ಧ ಹುಡುಗಿ ಎದೆಯೊ... ಸತ್ತಿರಬೇಕು. ಸಾಧ್ಯತೆ ಎರಡು, ರತ್ನಾ 'ಗೆಳೆತನದ' ... ಮರುಳಾಗಿ ಏಕಾಂತದ ಗುಡ್ಡದತ್ತ ಹೆಜ್ಜೆ ಹಾಕಿರಬ... ಆದರೆ ಊರಲ್ಲಿ, ಕಾಲೇಜಿನಲ್ಲಿ ಯಾರನ್ನೇ ಕೇಳಿ... ಆಕೆಯ ನಡತೆ ಬಗ್ಗೆ ಕೆಟ್ಟದಾಗಿ ಹೇಳುವುದಿಲ್ಲ. ... ಪ್ರೇಮ ಎಂಬ ಒಣ ಸೆಳೆತದ ಹುಡುಗಿ ಆಕೆಯಾಗಿ... ಮೂರನೇ ಸಾಧ್ಯತೆಯೆಂದರೆ, ಆತ್ಮಹತ್ಯೆ. ರತ್ನಾ ಯಾ... ಒತ್ತಡ-ಚಿಂತೆ-ಡಿಪ್ರೆಷನ್ ಇಲ್ಲದ ಲವಲವಿ... ಹುಡುಗಿಯಾಗಿದ್ದಳು. ಕೈಯಾರೆ ಜೀವ ತೆಗೆದುಕೊಳ್ಳ... ಅನಿವಾರ್ಯತೆ-ಕಷ್ಟಗಳೇನೂ ಆಕೆಗೆ ಕೌಟುಂಬಿ... ಯಾಗಲೀ, ವೈಯಕ್ತಿಕವಾಗಿಯಾಗಲೀ ಇರಲಿಲ್ಲ.


ರತ್ನಾಳ ಪಾಲಕರು ತಮ್ಮ ಮಗಳನ್ನು ಯಾ... ಹತ್ಯೆ ಮಾಡಿದ್ದಾರೆಂದೇ ಹೇಳುತ್ತಿದ್ದಾರೆ. ಎಲ್ಲ ... ಕುತರ್ಕಗಳನ್ನೂ ಮೀರಿದ ಸಾಧ್ಯತೆ-ಸಂಶಯವಿರು... ಎರಡೇ ಎರಡು. ಒಂದು ಹತ್ಯೆ, ಮತ್ತೊಂದು ಆತ್ಮ... ಆತ್ಮಹತ್ಯೆ ಮಾಡಿಕೊಂಡಿದ್ದರೆ, ಸಾಯುವ ಹ... ಕೊಸರಾಟದಲ್ಲಿ ಆಕೆಯ ಪುಸ್ತಕದ ಚೀಲ ಸಿ... ಹೋಗಬೇಕಿತ್ತು. ಆದರೆ ರತ್ನಾಳ ಬ್ಯಾಗ್ ಮೃತ ದೇ... ಹತ್ತಿರವಿತ್ತು. ಅಂದರೆ ಆಕೆಯನ್ನು ಎಲ್ಲೋ ತಿಂದು-ಕ... ಹಲಂದೂರು ಗುಡ್ಡದ ತಲೆ ಮೇಲಿಟ್ಟು ದೇಹದ... ಬ್ಯಾಗ್ ಇಟ್ಟು ಕೊಲೆಗಡುಕ ಪರಾರಿ ಆಗಿರಬ... ಸಂಪೂರ್ಣ ಕನ್‌ಫ್ಯೂಸ್‌ನಲ್ಲಿರುವ ಪೊಲೀಸರ ತನಿಖೆ... ಈ ಆ್ಯಂಗಲ್‌ನಲ್ಲೇ ಕೇಂದ್ರೀಕೃತವಾಗಿರುವ ಸುದ್ದಿ...

ಏನೇ ಇರಲಿ. ಸ್ಪಷ್ಟ ತೀರ್ಮಾನಕ್ಕೇಕೆ ಪೊಲಿ... ಬರುತ್ತಿಲ್ಲ? ಸಾರ್ವಜನಿಕರಲ್ಲಿ ಮತ್ತು ಹುಡುಗಿ ಹೆತ್ತ... ವಿನಾಕಾರಣ ಏಕೆ ವಿಶ್ವಾಸಾರ್ಹತೆ ಕಳೆದುಕೊಳ್ಳುತ್ತಿ... ಕರಾವಳಿ ಪೊಲೀಸರೇಕೆ ಪದೇಪದೇ ವಿಫಲ... ಅಪಹಾಸ್ಯಕ್ಕೀಡಾಗುತ್ತಿದ್ದಾರೆ? ಒಟ್ಟಿನಲ್ಲಿ ಅವಳಿ ಜಿ... ಖಾಕಿ ಪಡೆಯ ಕಾರ್ಯವೈಖರಿ ಪಶ್ಚಿಮ ವಲ... ಪೊಲೀಸರು ನಂಬುವಂತಿಲ್ಲ ಎಂಬುದನ್ನು ಸಾ... ಪಡಿಸಿಬಿಟ್ಟಿದೆ. ಇನ್ನಾದರೂ ಪಶ್ಚಿಮ ವಲಯದ ... ಅಮೃತ್ ಪಾಲ್ ಸಾಹೇಬರು ಎಚ್ಚೆತ್ತು ಥಂಡಿ ಹಿ... ಕೂತಿರುವ ಆಧೀನಾಧಿಕಾರಿಗಳ ಪರೇಡ್ ಮಾಡು... ಹೊಣೆಯರಿತು ಕೆಲಸ ಮಾಡಲು ವಾರ್ನ್ ಮಾಡು...


■ ನಹ...



ಕಾಲೇಜಿಗೆ ಗುಡ್ಡ ಬೆಟ್ಟದ ನಿರ್ಜನ ದಾರಿ




ರತ್ನಾಳ ಮನೆ



ರೋಧಿಸುತ್ತಿರುವ ರತ್ನಾಳ ಸಂಬಂಧಿಕರು

ಕಪ್ಪು ಚುಕ್ಕೆಗಳ ಸುಳಿಯಲ್ಲಿ ನ್ಯಾಯಾಂಗ



...ನ್ಯಾಯಾಂಗ ವ್ಯವಸ್ಥೆಯ ಉನ್ನತ ಅಂಗಗಳು ...ಷ್ಟವಾಗಿರುತ್ತವೆ ಎಂದು ನಂಬಿಕೊಂಡಿದ್ದ ...ಂದಿತ್ತು. ಆದರೆ ವ್ಯವಸ್ಥೆಯೊಳಗಿನ ...ುಗಳು ನ್ಯಾಯಾಂಗವನ್ನು ಹೇಗೆ ...ಕೊಂಡಿವೆ ಎಂಬುದು ಪದೇಪದೇ ಬಯಲಿಗೆ ...ೇ ಇವೆ. ಇತ್ತೀಚೆಗೆ ಜಸ್ಟೀಸ್ ಮಾರ್ಕಂಡೇಯ ...ಬ್ಬಿಸಿರುವ ತಾಜಾ ವಿವಾದದಿಂದ ಎರಡು ...ು ನಿಚ್ಚಳವಾಗಿವೆ. ನ್ಯಾಯಾಂಗದ ಉನ್ನತ ...ಮಲ್ಲಿರುವವರು ವ್ಯಕ್ತಿಗತವಾಗಿ ಭ್ರಷ್ಟಾಚಾರದ ...ಪಗಳಲ್ಲಿ ಕಳಂಕಿತರಾಗಿರುವುದು ...ಕಡೆಯಾದರೆ, ನ್ಯಾಯಾಂಗ ವ್ಯವಸ್ಥೆಯ ಮೇಲೆ ...ಯದ ಕಪಿಮುಷ್ಟಿ ಬಿಗಿಗೊಳ್ಳುತ್ತಿರುವುದು ...ದು.


...ದೀಗ ಚಾಲ್ತಿಯಲ್ಲಿರುವ ವಿವಾದದ ...ರಗನ್ನು ಪರಿಶೀಲಿಸೋಣ.

...ಸ್ ಕೌನ್ಸಿಲ್ ಆಫ್ ಇಂಡಿಯಾದ ಹಾಲಿ ...ನ್ ಆಗಿರುವ ಕಟ್ಜು ಅವರು 'ಸತ್ಯಂ ...ಶ್' ಎಂಬ ತಮ್ಮ ಬ್ಲಾಗ್‌ನಲ್ಲಿ ಕೆಲದಿನಗಳ ... ಒಂದು ಲೇಖನವನ್ನು ಪ್ರಕಟಿಸಿದ್ದಾರೆ. ತಾವು ...ಸ್ ಹೈಕೋರ್ಟ್‌ನ ಮುಖ್ಯ ...ಾಧೀಶರಾಗಿದ್ದ ಸಂದರ್ಭದಲ್ಲಿ ಭ್ರಷ್ಟಾಚಾರದ ...ಪ ಹೊತ್ತಿದ್ದ ಜಡ್ಜ್ ಒಬ್ಬರನ್ನು ಹೈಕೋರ್ಟ್‌ನ ...ಾಧೀಶರನ್ನಾಗಿ ನೇಮಕ ಮಾಡಿದ ಬಗ್ಗೆ ಆ ...ನದಲ್ಲಿ ವಿವರಿಸಿದ್ದಾರೆ.

...ಜ್ ದಿವಂಗತ - ಪ್ರಕರಣ ಜೀವಂತ!

... ಜಡ್ಜ್‌ನ ಹೆಸರು ಅಶೋಕ್‌ಕುಮಾರ್. ...ರಲ್ಲಿ ಅವರು ಮದ್ರಾಸ್ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರು. 2007ರಲ್ಲಿ ಅವರ ಹುದ್ದೆಯನ್ನು ಕಾಯಂಗೊಳಿಸಲಾಗಿತ್ತು. ಅವರ ನೇಮಕಾತಿ ವಿಷಯ ಕಗ್ಗಂಟಾಗುತ್ತಿದ್ದಂತೆ ಹೈದರಾಬಾದ್‌ಗೆ ವರ್ಗಾವಣೆಯಾದರು. ಮರು ವರ್ಷವೇ ನಿವೃತ್ತಿಯಾದ ಈ ವ್ಯಕ್ತಿ 2009ರ ಅಕ್ಟೋಬರ್‌ನಲ್ಲೆ ತೀರಿಹೋಗಿದ್ದಾರೆ. ಅವರು ತೀರಿಕೊಂಡ 5 ವರ್ಷಗಳ ಬಳಿಕ ನ್ಯಾಯಾಧೀಶ ಹುದ್ದೆಗೆ ಅವರ ನೇಮಕಾತಿಯ ವಿಷಯ ವಿವಾದಕ್ಕೀಡಾಗಿದ್ದು ಮಾತ್ರ ವಿಪರ್ಯಾಸ.

ಈ ಪ್ರಕರಣ ನಡೆದ ಸಂದರ್ಭದಲ್ಲಿ ಮಾರ್ಕಂಡೇಯ ಕಟ್ಜು ಅವರು ಮದ್ರಾಸ್ ಹೈಕೋರ್ಟಿನ ಮುಖ್ಯ ನ್ಯಾಯಮೂರ್ತಿಯಾಗಿದ್ದರು. ಈಗ ಪ್ರೆಸ್ ಕೌನ್ಸಿಲ್‌ನ ಚೇರ್ಮನ್ ಆಗಿರುವ ಕಟ್ಜು ಅವರು ತಮ್ಮ ಸ್ಮೃತಿ ಪಟಲದಲ್ಲಿರುವ ಅಸಂಖ್ಯಾತ ಸಂಗತಿಗಳಲ್ಲಿ ಈ ಸಂಗತಿಯನ್ನು ಆಯ್ದು ಬಹಿರ್ಗತಗೊಳಿಸಿದ್ದಾರೆ.



44229 ಈ ನಕಲು ಪ್ರತಿ 6 ಹಾಳೆಗಳನ್ನು ಹೊಂದಿದೆ. 1 ನೇ ಹಾಳೆಯ ನಕಲು ಅರ್ಜಿ ಸಂಖ್ಯೆ ...

ಕರ್ನಾಟಕ ಸರ್ಕಾರ
Government of Karnataka
ದಸ್ತಾವೇಜು ಹಾಳೆ
Document Sheet
ನೋಂದಣಿ ಹಾಗೂ ಮುದ್ರಾಂಕ ಇಲಾಖೆ
Registration and Stamps Department
ಬೆಲೆ: ರೂ. 2/-
This sheet can be used for any document
Date of execution
Total stamp duty paid Rs.

SALE DEED

THIS DEED OF ABSOLUTE SALE made and executed on this Nineth Day of FEBRUARY TWO THOUSAND FOUR (09.02.2004) at Bangalore.

BY:

THE VYALIKAVAL HOUSE BUILDING CO-OPERATIVE SOCIETY LIMITED
(a Co-operative Society Registered under the provisions of the Karnataka Co-operative Societies Act, 1959)
having its registered office at No.100, 6th Main, 11th Cross, Malleswaram, Bangalore 560 003,
Represented by its Secretary

hereinafter called the "VENDOR" of the ONE PART:

AND:

SREE SHAKTHI PROMOTERS AND DEVELOPERS (R)
A registered partnership firm, registered under the provisions of the Indian Partnership Act, having its registered office at No.646/8, 2nd Floor, Dr.Rajkumar Road, Rajajinagar, Bangalore 560 010 represented by its Partner Sri Lakshman.

hereinafter called the "DEVELOPER/PROMOTER" of the SECOND PART:

For SREE SHAKTHI PROMOTERS & DEVELOPERS (R) ...2

For The Vyalikaval House Building Co-Operative Society Ltd., Bangalore-560003

SECRETARY

PARTNER

ಅವರ ಪ್ರಕಾರ ನಡೆದದ್ದಿಷ್ಟು. ಡಿಎಂಕೆ ಪಕ್ಷಕ್ಕೆ ನಿಕಟವರ್ತಿಯೆನ್ನಲಾದ ಅಶೋಕ್‌ಕುಮಾರ್ ಎಂಬ ಜಿಲ್ಲಾ ನ್ಯಾಯಾಧೀಶರನ್ನು ಹೈಕೋರ್ಟ್‌ನ ನ್ಯಾಯಮೂರ್ತಿ ಸ್ಥಾನಕ್ಕೆ ನೇಮಕಾತಿ ಮಾಡುವ ವಿಷಯದಲ್ಲಿ ರಾಜಕೀಯ ಒತ್ತಡವೇ ಪ್ರಮುಖ ಪಾತ್ರ ವಹಿಸಿದೆ. ಆಗ ಯುಪಿಎ-1 ಸರ್ಕಾರ ಅಧಿಕಾರದಲ್ಲಿತ್ತು, ಡಿಎಂಕೆ ಪಕ್ಷ ಸರ್ಕಾರದ ಪ್ರಮುಖ ಅಂಗಪಕ್ಷವಾಗಿತ್ತು.

ಅಶೋಕ್ ಕುಮಾರ್ ಬಗ್ಗೆ ಭ್ರಷ್ಟಾಚಾರದ ಆರೋಪಗಳು ಕೇಳಿಬಂದಿದ್ದರಿಂದ ಸುಪ್ರೀಂ ಕೋರ್ಟ್‌ನ ಚೀಫ್ ಜಸ್ಟೀಸ್ ಅವರು ಈ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಇಂಟೆಲಿಜೆನ್ಸ್ ಬ್ಯೂರೋ ಅನ್ನು ಕೋರಿದರು. ಐಬಿ ರಿಪೋರ್ಟ್ ಕೂಡ ಇವರ ಭ್ರಷ್ಟಾಚಾರವನ್ನು ದೃಢಪಡಿಸಿತು. ಇದರ ಆಧಾರದಲ್ಲಿ ಸಿಜೆಐ ಅವರು ಅಶೋಕ್ ಕುಮಾರ್ ನೇಮಕಾತಿಯ ಪ್ರಸ್ತಾಪವನ್ನು ತಳ್ಳಿ ಹಾಕಿದರು.

ಆದರೆ ಡಿಎಂಕೆ ಈ ವಿಷಯವನ್ನು ಬಿಟ್ಟುಕೊಡಲು ತಯಾರಿರಲಿಲ್ಲ. ಸರ್ಕಾರವನ್ನು ಉರುಳಿಸುವ ಬೆದರಿಕೆಯೊಡ್ಡಿತು. ರಾಜಕೀಯ ಒತ್ತಡಕ್ಕೆ ಮಣಿದ ಸಿಜೆಐ ಕೊನೆಗೆ ನೇಮಕಾತಿ ಆದೇಶ ಹೊರಡಿಸಿದರು. ಹೀಗೆ ಬೇರೆಬೇರೆ ಅವಧಿಗಳಲ್ಲಿ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಾಧೀಶರುಗಳಾಗಿದ್ದ ಆರ್.ಸಿ.ಲಹೋಟಿ, ವೈ.ಕೆ.ಸಬರ್‌ವಾಲ್ ಮತ್ತು ಕೆ.ಜಿ.ಬಾಲಕೃಷ್ಣನ್ ಅವರುಗಳು ರಾಜಕೀಯ ಒತ್ತಡಕ್ಕೆ ಗುರಿಯಾಗಿ ಭ್ರಷ್ಟಾಚಾರದಲ್ಲಿ ಮುಳುಗಿದ್ದ ಅಶೋಕ್‌ಕುಮಾರ್ ನೇಮಕಾತಿಯ ತೀರ್ಮಾನಗಳನ್ನು ತೆಗೆದುಕೊಂಡಿದ್ದಾರೆಂಬುದು ಕಟ್ಜು ಅವರ ಆರೋಪದ ಸಾರಾಂಶ.

ಈ ವಿವಾದ ಹೊರಬಿದ್ದಾಗಿನಿಂದ ಮಾಧ್ಯಮಗಳಿಗೆ ಒಂದು ಹೊಸ ಚ್ಯೂಯಿಂಗ್ ಗಮ್ ಸಿಕ್ಕಂತಾಗಿದೆ. ಭಾರತದ ಮಾಧ್ಯಮಗಳ ಜಾಯಮಾನವೇ ಹೀಗಾಗಿರುವುದರಿಂದ ಅದರಲ್ಲಿ ಅಂಥಾ ವಿಶೇಷವೇನಿಲ್ಲ. ವಿಶೇಷವೇನೆಂದರೆ ಈ ವಿವಾದದಲ್ಲಿ ಆಳುವ ಮತ್ತು ವಿರೋಧ ಪಕ್ಷಗಳ ಸ್ಥಾನ ಅದಲು ಬದಲಾಗಿರುವುದು. ಈ ವಿವಾದ 2007ರಲ್ಲಿ ಯುಪಿಎ ಸರ್ಕಾರದ ಅವಧಿಗೆ ಸಂಬಂಧಿಸಿದ್ದಾಗಿರುವುದರಿಂದ ಅಧಿಕಾರಾರೂಢ ಬಿಜೆಪಿ ಮಂದಿ ಮಾಜಿ ಪ್ರಧಾನಿ ಮನಮೋಹನ್‌ಸಿಂಗ್‌ರನ್ನು ಗುರಿ ಮಾಡಿ ಟೀಕಾಪ್ರಹಾರಕ್ಕಿಳಿದಿದ್ದಾರೆ.

ಕರ್ನಾಟಕ ಹೈಕೋರ್ಟ್ ಜಡ್ಜ್‌ನ ಪ್ರಕರಣ

ಇಂಥಾ ವಿವಾದಗಳಲ್ಲಿ ಕರ್ನಾಟಕದ ಪಾಲೂ ಕಡಿಮೆಯೇನಲ್ಲ. 2011ರಲ್ಲಿ ಕರ್ನಾಟಕದ ನ್ಯಾಯಾಧೀಶರ ಭ್ರಷ್ಟಾಚಾರದ ಬಗ್ಗೆ ಒಂದು ಆತಂಕಕಾರಿ ಸುದ್ದಿ ಪ್ರಕಟವಾಗಿತ್ತು. ಆ ವರದಿಯ ಪ್ರಕಾರ ವಿವಿಧ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿಗಳಿಂದ ಕನಿಷ್ಠ 83 ಮಂದಿ ಜಡ್ಜ್‌ಗಳು (ಸೇವೆಯಲ್ಲಿದ್ದವರು, ನಿವೃತ್ತರಾಗಿದ್ದವರೂ ಸೇರಿ) ಅಕ್ರಮವಾಗಿ ನಿವೇಶನ ಪಡೆದುಕೊಂಡಿದ್ದರು. 2011ರ ಸೆಪ್ಟೆಂಬರ್‌ನಲ್ಲಿ ಕರ್ನಾಟಕ ಲೋಕಾಯುಕ್ತರಾಗಿ ನೇಮಕಗೊಂಡ ಜಸ್ಟೀಸ್ ಶಿವರಾಜ್‌ಪಾಟೀಲ್ ಇಂಥದೇ ವಿವಾದಕ್ಕೆ ಗುರಿಯಾಗಿ ಒಂದು ತಿಂಗಳಿನ ಒಳಗಾಗಿಯೇ ಸ್ವಯಂಪ್ರೇರಿತರಾಗಿ ಆ ಹುದ್ದೆ ತೊರೆದದ್ದು ಇನ್ನೂ ನಮ್ಮ ನೆನಪಿನಲ್ಲಿದೆ.

ಮತ್ತೊಬ್ಬ ಹೈಕೋರ್ಟ್ ನ್ಯಾಯಮೂರ್ತಿಯ ಸರದಿ ಈಗ ಬಂದಿದೆ. ಅವರ ಹೆಸರು ಜಸ್ಟೀಸ್ ಕೆ.ಎಲ್.ಮಂಜುನಾಥ್. 2001ರಲ್ಲಿ ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕವಾಗಿರುವ ಇವರ ಅಧಿಕಾರಾವಧಿ 2015ರ ಏಪ್ರಿಲ್‌ಗೆ ಕೊನೆಗೊಳ್ಳಲಿದೆ. ಈ ಮಧ್ಯೆ ಸದರಿ ನ್ಯಾಯಮೂರ್ತಿಯನ್ನು ಪಂಜಾಬ್-ಹರಿಯಾಣ ಹೈಕೋರ್ಟ್‌ನ ಚೀಫ್ ಜಸ್ಟೀಸ್ ಹುದ್ದೆಗೆ ನೇಮಕ ಮಾಡುವಂತೆ ಜಡ್ಜ್‌ಗಳ ಕೊಲಿಜಿಯಂ ಕೇಂದ್ರಕ್ಕೆ ಶಿಫಾರಸ್ಸು ಮಾಡಿದೆ. ಆದರೆ ಕರ್ನಾಟಕ ಹೈಕೋರ್ಟ್‌ನ ಹಿರಿಯ ನ್ಯಾಯಾಧೀಶರೊಬ್ಬರು ಮಂಜುನಾಥ್ ಅವರು ಭ್ರಷ್ಟಾಚಾರದಲ್ಲಿ ತೊಡಗಿರುವುದರಿಂದ ಈ ನೇಮಕಾತಿಯ ಬಗ್ಗೆ ತಕರಾರು ತೆಗೆದಿದ್ದಾರೆ. ಈ ಹಿನ್ನೆಲೆಯಲ್ಲಿ ಸದ್ಯಕ್ಕೆ ಕೇಂದ್ರ ಸರ್ಕಾರ ಈ ಪ್ರಸ್ತಾವನೆಯನ್ನು ಮತ್ತೆ ಕೊಲಿಜಿಯಂಗೆ ವಾಪಸ್ ಕಳಿಸಿದೆ.

ಆದರೆ ಸುಪ್ರೀಂಕೋರ್ಟ್ ಜಡ್ಜ್‌ಗಳ ಮಂಡಳಿ

>>>>13ನೇ ಪುಟಕ್ಕೆ


...ಡ್ಜ್ ಮಂಜುನಾಥರ ಸೈಟು ಪುರಾಣ

...ನ್ಯಾ. ಕೆ.ಎಲ್.ಮಂಜುನಾಥ್ ಅವರಿಗೆ ಸಂಬಂಧಿಸಿದ ಕೆಲವು ವಾಸ್ತವ ಸಂಗತಿಗಳನ್ನು ...ಳಗೆ ವಿವರಿಸಲಾಗಿದೆ. ಈ ವಾಸ್ತವ ವಿವರಗಳನ್ನು ತಿಳಿದುಕೊಂಡ ಯುಕ್ತಾಯುಕ್ತ ...ರ್ಮಾನಗಳಿಗೆ ಬರುವುದು ಓದುಗರ ವಿವೇಚನೆಗೆ ಬಿಟ್ಟದ್ದು.

ಈ ಪ್ರಕರಣ ನಡೆದದ್ದು 2004-07ರ ಅವಧಿಯಲ್ಲಿ. ...ಯವರು ಆಗಲೂ ಹೈಕೋರ್ಟ್ ನ್ಯಾಯಮೂರ್ತಿ ಸ್ಥಾನದಲ್ಲಿ ...ಜಮಾನರಾಗಿದ್ದರು.

ಈ ಪ್ರಕರಣದ ಕೇಂದ್ರ ಬಿಂದು ಏನೆಂದರೆ ಮಾನ್ಯ ಜಸ್ಟೀಸ್ ...ರ್ ಮಂಜುನಾಥ್ ಅವರ ಪುತ್ರಿ ಕುಮಾರಿ ಕೆ.ಎಂ.ಚೈತ್ರ ...ುವವರಿಗೆ ವೈಯಾಲಿಕಾವಲ್ ಹೌಸಿಂಗ್ ಸೊಸೈಟಿಯವರು ...0 ಚದರ ಅಡಿ ಅಳತೆಯ ವಿಶಾಲವಾದ ಸೈಟನ್ನು ಮಂಜೂರು ...ದ್ದು, ಅದನ್ನು 2004ರ ಫೆಬ್ರವರಿ 2ರಂದು ಆಕೆಯ ...ರಿಗೆ ನೋಂದಣಿ ಮಾಡಿಸಿಕೊಟ್ಟಿದ್ದಾರೆ.

...ಸೈಟನ್ನು ಕೊಳ್ಳುವ ಹಕ್ಕು ಪ್ರತಿಯೊಬ್ಬ ನಾಗರಿಕರಿಗೂ ಇದೆ. ...ದಲ್ಲಿ ಯಾರದೂ ತಕರಾರು ಇರಬೇಕಿಲ್ಲ. ಆದರೆ ಇಲ್ಲಿ ನಾವು ...ಸಲೇಬೇಕಾದ ಕೆಲವು ವಾಸ್ತವ ಸಂಗತಿಗಳು ಹೀಗಿವೆ.



- ...ನಿವೇಶನ ಖರೀದಿಸಿದಾಗ ಕುಮಾರಿ ಚೈತ್ರಳ ವಯಸ್ಸು ...ು 20 ವರ್ಷ.
- ...ನಿವೇಶನದ ಬೆಲೆಯನ್ನು ಒಂದು ಅಡಿಗೆ 125 ರೂಪಾಯಿ ಎಂದು ಕಡಿಮೆ ...ಲ್ಲ ನಿಗದಿಪಡಿಸಿ, ಒಟ್ಟು ಮೊತ್ತ 6,82,000 ರೂಪಾಯಿ ಎಂದು ತೋರಿಸಲಾಗಿದೆ. ...ನ್ನೊಂದು ಕುತೂಹಲದ ಸಂಗತಿಯೆಂದರೆ ಈ ಖರೀದಿಯ ನೋಂದಣಿಗೆ ಮುದ್ರಾಂಕ ...ವಾಗಿ 1,22,200 ರೂಪಾಯಿಗಳನ್ನು ಪಾವತಿಸಲಾಗಿದೆ. ಅಂದರೆ ಸದರಿ ನಿವೇಶನಕ್ಕೆ ...ರದ ಮಾರ್ಗದರ್ಶಿ ಮೌಲ್ಯ ಸುಮಾರು 18 ಲಕ್ಷ ಆಗಿತ್ತೆಂದು ಅಂದಾಜಿಸಬಹುದು. ...ಆದರೆ ಅಂದಿನ ಮಾರುಕಟ್ಟೆ ಮೌಲ್ಯ ಚದರಡಿಗೆ 800-1000 ರೂ ಇತ್ತು. ಆ ...ದ ಸದರಿ ನಿವೇಶನದ ಮೌಲ್ಯ 40 ರಿಂದ 50 ಲಕ್ಷ.
- ಸದರಿ ಕ್ರಯಪತ್ರದಲ್ಲಿ ಹಣ ಪಾವತಿಸಿದ ವಿಧಾನವನ್ನು -ನಗದು ಅಥವಾ ಚೆಕ್ ಇತ್ಯಾದಿ- ನಮೂದಿಸಿರುವುದಿಲ್ಲ. ಕಾನೂನಿನ ಪ್ರಕಾರ ಇದು ಕಡ್ಡಾಯ.
- ಸದರಿ ನಿವೇಶನಗಳು ಸೊಸೈಟಿಯ ಸದಸ್ಯರಿಗಾಗಿ ಮಾತ್ರವೇ ಮೀಸಲಾಗಿರುವಂಥವು. ಆದರೆ ಚೈತ್ರ ಸೊಸೈಟಿಯ ಸದಸ್ಯೆ ಅಲ್ಲ.
- ಆಕೆಯನ್ನು ಅಸೋಸಿಯೇಟ್ ಮೆಂಬರ್ ಎಂದು ಕಾಣಿಸಲಾಗಿದೆ. ಆದರೆ ಅಸೋಸಿಯೇಟ್ ಮೆಂಬರ್‌ಗಳಿಗೆ ಹೀಗೆ ನಿವೇಶನ ಮಂಜೂರು ಮಾಡಬಾರದೆಂದು 1991ರಲ್ಲೇ ಹೈಕೋರ್ಟ್ ಆದೇಶ ನೀಡಿದೆ; 2002ರಲ್ಲಿ ರಾಜ್ಯ ಸರ್ಕಾರ ಇಂಥಾ ನಡವಳಿಕೆಯ ವಿರುದ್ಧ ಸ್ಪಷ್ಟ ಆದೇಶವನ್ನೂ ಹೊರಡಿಸಿದೆ.

ಸುಮಾರು 20 ವರ್ಷಗಳಿಂದಲೂ ಸದರಿ ಸೊಸೈಟಿಯ ಅಧಿಕೃತ ಸದಸ್ಯರಾಗಿದ್ದು, ನಿವೇಶನದ ಬಾಬ್ತು ಪೂರ್ತಿ ಹಣ ಪಾವತಿಸಿದ ನಂತರವೂ ಸೈಟು ಸಿಗದೆ ಪರದಾಡುತ್ತಿರುವ ಹಲವಾರು ಮಂದಿ ಇಲ್ಲಿದ್ದಾರೆ.

ಆ ಸಂದರ್ಭದಲ್ಲಿ ಬೆಂಗಳೂರು ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಬಳಿ 'ವೈಯಾಲಿಕಾವಲ್ ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿ' ಎಂಬುವವರು ನಿರ್ಮಿಸಿದ್ದ ಬಡಾವಣೆಗೆ ಸಂಬಂಧಿಸಿದ ಕನಿಷ್ಠ ಮೂರು ಕೇಸುಗಳನ್ನು ಮಂಜುನಾಥ್ ಅವರು ವಿಚಾರಣೆ ನಡೆಸಿ ತೀರ್ಪು ನೀಡಿದ್ದರು.


1) 2005ರ ಜೂನ್ 5ರಂದು ಬಿಡಿಎ ಮತ್ತು ಸದರಿ ಹೌಸಿಂಗ್ ಸೊಸೈಟಿಯ ನಡುವಿನ ವಿವಾದದ ತೀರ್ಪು


2) 2001ರ ಜನವರಿ 17ರಂದು ಕಂದಾಯ ಇಲಾಖೆ ಮತ್ತು ಇದೇ ಸೊಸೈಟಿಯ ನಡುವಿನ ವಿವಾದದ ತೀರ್ಪು

3) 2010ರ ಜುಲೈ 20ರಂದು ಕರ್ನಾಟಕ ಗ್ರಾಹಕ ವ್ಯಾಜ್ಯಗಳ ನಿರ್ವಹಣೆ ಕಮಿಷನರ್ ಆದೇಶವನ್ನು ಪ್ರಶ್ನಿಸಿ ಸೊಸೈಟಿ ಸಲ್ಲಿಸಿದ್ದ ಪಿಟಿಷನ್ ಬಗ್ಗೆ ತೀರ್ಪು.

ಈ ಮೂರೂ ಪ್ರಕರಣಗಳಲ್ಲಿ ನ್ಯಾಯದ ತಕ್ಕಡಿಯು ಸೊಸೈಟಿಯ ಪರವಾಗಿ ವಾಲಿತ್ತು ಎಂಬುದರಲ್ಲಿ ಯಾರಿಗೂ ಅನುಮಾನ ಬೇಡ.

ಒಕ್ಕಲಿಗರ ಸೊತ್ತು ಬಿಲ್ಡರ್ ಪಾಲಾಯಿತು


ಸಿದ್ದು


ಶೆಟ್ಟರ್


ಬಿಲ್ಡರ್ ರುಡಾಲ್ಫ್ ಮ್ಯಾಸ್ಕರೆನ್ಹಾಸ್

ರುಡಾಲ್ಫ್ ಮ್ಯಾಸ್ಕರೆನ್ಹಾಸ್!

ರಾಜ್ಯದ ಒಕ್ಕಲಿಗರ ಸ್ವಾಭಿಮಾನಕ್ಕೆ ಕಲ್ಲು ಹೊಡೆದಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯನವರ ಬುಡಕ್ಕೇ ಕೊಳ್ಳಿ ಇಟ್ಟಂತೆ, ಸರ್ಕಾರಗಳ ಮೇಲೆ ಸರ್ಕಾರ ಬಂದರೂ ತನ್ನ ತಾಕತ್ತಿಗೆ ಸಾಟಿ ಇಲ್ಲದಂತೆ, ಕೋರ್ಟು ಕಾನೂನುಗಳೆಲ್ಲ ತನ್ನ ಕಾಲಕಸದಂತೆ; ಬೆಂಗಳೂರಿನ ರಿಯಲ್ ಎಸ್ಟೇಟ್ ಸಾಮ್ರಾಜ್ಯಕ್ಕೆ ಅಪ್ಪಳಿಸಿದ ಧೂಮಕೇತುವಿನ ಹೆಸರದು.

ಕೆಲವರ ಪ್ರಕಾರ ಈ ಕಾಫಿ ಪ್ಲಾಂಟರ್ ಯಾನೇ ಮಂಗಳೂರಿನ ಕುಖ್ಯಾತ ಬಿಲ್ಡರ್ ಬೇರೆ ಯಾರೂ ಅಲ್ಲ, ಕಾಂಗ್ರೆಸ್ ಅಧಿಪತಿ ಆಸ್ಕರ್ ಫರ್ನಾಂಡಿಸ್ ಪತ್ನಿಯ ಬೇನಾಮಿ. ಇನ್ನೂ ಕೆಲವರು ಹೇಳುವಂತೆ ಕರಾವಳಿಯ ಆರೆಸ್ಸೆಸ್ ಚಾಣಕ್ಯ ಕಲ್ಲಡ್ಕ ಪ್ರಭಾಕರ ಭಟ್ಟನ ಖಾಸಾ ತಮ್ಮನೇ ಈತನ ರಿಯಲ್ ಎಸ್ಟೇಟ್ ಪಾಲುದಾರ. ಹೆಚ್ಚೂ ಕಮ್ಮಿ 2 ಸಾವಿರ ಕೋಟಿಯ ಈತನ ರಿಯಲ್ ಎಸ್ಟೇಟ್ ಒಡ್ಡೋಲಗದೊಳಗೆ ಮಂಗಳೂರು ಮೂಲದ ದುಬೈ ರಿಟರ್ನ್ಡ್ ಡಾನ್ ಕೂಡ ಭಾಗೀದಾರ. ಐಎಎಸ್-ಐಪಿಎಸ್‌ಗಳು ಈತನ ಒಂದೇ ಒಂದು ಆಣತಿಗಾಗಿ ನಾ ಮುಂದೆ ತಾ ಮುಂದೆಂದು ಹಾತೊರೆಯುತ್ತಾರೆಂದರೆ-

ಈತನ ತಾಕತ್ತು ಇನ್ನೆಂಥದ್ದಿರಬೇಡ?

ಅದಕ್ಕೆ ಇರಬೇಕು ಚುನಾವಣೆಗಿನ್ನು ಕೇವಲ ವಾರ ಬಾಕಿಯಿದೆ ಎನ್ನುವುದನ್ನೂ ಲೆಕ್ಕಿಸದೆ ಬಿಜೆಪಿ ಪ್ರಭುತ್ವದ ಕೊನೇ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಈತನಿಗೆ ಒಕ್ಕಲಿಗರ ಸಂಘದ 80 ಕೋಟಿ ರೂಪಾಯಿಗಳ ಬೆಲೆಬಾಳುವ ಭೂಮಿ ಕಿತ್ತು ಕೊಟ್ಟದ್ದು.

ಶೆಟ್ಟರ್ ಕಂಟಕ

ಮುಂದೊಮ್ಮೆ ಎಂದಾದರೂ ಇದು ತನ್ನನ್ನು ಶ್ರೀಕೃಷ್ಣ ಜನ್ಮಸ್ಥಾನಕ್ಕೆ ಕೊಂಡೊಯ್ಯಬಹುದೆಂಬ ಪರಿವೆ ಕೂಡ ಇಲ್ಲದೆ ಜಗದೀಶ್ ಶೆಟ್ಟರ್ ಶ್ರೀಗಂಧದ ಕಾವಲ್ ಸರ್ವೆ ನಂಬರ್ 129ರ ಅಮೂಲ್ಯ ನಾಲ್ಕೆಕರೆಯನ್ನು ಈತನ ರಿಯಲ್ ಎಸ್ಟೇಟ್ ದಂಧೆಗೆ ಬಿಟ್ಟುಕೊಡುತ್ತಾರೆ. ಅದಕ್ಕೆಂದು ಎಲ್ಲಾ ಕಾಯ್ದೆ ಕಾನೂನುಗಳನ್ನೂ ಮುರಿಯುತ್ತಾರೆ. ರಾಜ್ಯದ ಹಳೇ ಮೈಸೂರು ಪ್ರಾಂತ್ಯದ ಬಲಾಢ್ಯ ಒಕ್ಕಲಿಗ ಸಮೂಹವನ್ನೇ ಧಿಕ್ಕರಿಸುತ್ತಾರೆ. ಹೆಜ್ಜೆಹೆಜ್ಜೆಗೂ ತಪ್ಪುಗುತ್ತಾರೆ. ಯಡಿಯೂರಪ್ಪ ಇಂಥದ್ದೇ ದುರಾಶೆಗೆ ಬಿದ್ದು ಜೈಲು ಪಾಲಾದ ಉದಾಹರಣೆಯನ್ನು ಕಂಡೂ ರಾತ್ರಿ ಕಂಡ ಬಾವಿಯೊಳಕ್ಕೆ ಹಾಡುಹಗಲೇ ಕಾಲು ಜಾರಿದ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ತಿಳಿದು ತಿಳಿದೂ ಹಳ್ಳಕ್ಕೆ ಬೀಳುತ್ತಾರೆಂದರೆ ಹಕೀಕತ್ತೆ ಬೇರೆ ಇರಬೇಕಲ್ಲವೆ?

ಏನದು? ಸದಾನಂದ ಗೌಡರಂತೆ ಬೇರೆಲ್ಲ ಡಿನೋಟಿಫಿಕೇಷನ್ ಪ್ರಕರಣಗಳಲ್ಲಿ ವಿಪರೀತ ಎಚ್ಚರಿಕೆ ವಹಿಸಿದ ಜಗದೀಶ್ ಶೆಟ್ಟರ್ ಈ ಒಂದು ವಿಷಯದಲ್ಲಿ ಎಡವಿದ್ದೇಕೆ?

ಅದು ಮಂಗಳೂರಿನ ಬಿಲ್ಡರ್ ರುಡಾಲ್ಫ್ ಮ್ಯಾಸ್ಕೆರನ್ಹಾಸ್‌ನ ಮಹಿಮೆ!

ಇವತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ಈತನ ಹೆಸರು ಕೇಳಿಬಿಟ್ಟರೆ ಚಿಂತಾಕ್ರಾಂತರಾಗುತ್ತಾರಂತೆ. ರಾಜ್ಯದ ಒಕ್ಕಲಿಗ ಸಮೂಹ ಬೀದಿಗಿಳಿಯುವ ಎಲ್ಲಾ ಸಿದ್ಧತೆಯನ್ನೂ ಮಾಡಿಕೊಂಡಾಗಿದೆ. ಕಾಂಗ್ರೆಸ್ ಸರ್ಕಾರದ ಒಕ್ಕಲಿಗ ಮಹಾರಥಿಗಳಾದ ಡೀಕೆ, ಜಯಚಂದ್ರ, ಕೃಷ್ಣ ಭೈರೇಗೌಡ ಇತ್ಯಾದಿಗಳೆಲ್ಲರೂ ಒಕ್ಕಲಿಗರ ಸಂಘದ ಸೊತ್ತನ್ನು ಉಳಿಸಿ ಕೊಡುವಂತೆ ದಬಾವು ತಂದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಆಕಾಶ-ಭೂಮಿ ನೋಡುವಂತಾಗಿದೆಯೆಂದರೆ ಕಾಂಗ್ರೆಸ್ ಹೈಕಮಾಂಡಿನಲ್ಲೂ ರುಡಾಲ್ಫ್ ಪ್ರಭಾವಿಯಾಗಿ ರಲೇಬೇಕು.

ಈಗ ಸಿದ್ದು ಬುಡಕ್ಕೆ ಬೆಂಕಿಯುಂಡೆಯಂತೆ ಸುಡುವ ಈ ಕರ್ಮಕಾಂಡದ ಜನಕರೇ ಬಿಜೆಪಿ ಅಧಿಪತಿಗಳು. ಇನ್ನೇನು ಚುನಾವಣೆಗಿನ್ನೂ ವಾರ ಬಾಕಿಯಿದೆ ಎನ್ನುವಾಗಲೇ ಮುಖ್ಯಮಂತ್ರಿ ಯಾಗಿದ್ದ ಶೆಟ್ಟರ್ ತರಾತುರಿಯಿಂದ ಕ್ಲಿಯರ್ ಮಾಡಿದ್ದು ಒಕ್ಕಲಿಗರ ಸಂಘದ ಶ್ರೀಗಂಧದ ಕಾವಲು ಸೊತ್ತಿನ 80 ಕೋಟಿಯ ಈ ನಾಲ್ಕೆಕರೆಯನ್ನೆ.


ಕೆಂಗಲ್ ಕೊಡುಗೆ

ಸದ್ಯ ಮಾಗಡಿ ರಸ್ತೆಯಲ್ಲಿ ಕಾಮಾಕ್ಷಿ ಪಾಳ್ಯದಿಂದ ಕೆಳಗಿಳಿದು ವೃಷಭಾವತಿ ಮೋರಿ ದಾಟಿ ಸುಮನಹಳ್ಳಿ ಸೇತುವೆ ದಾಟುತ್ತಿದ್ದಂತೆಯೇ ಎಡಭಾಗದಲ್ಲಿ ಶ್ರೀಗಂಧದ ಕಾವಲು ದಿಬ್ಬ ಕಾಣಿಸುತ್ತದೆ. ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ ಶ್ರೀಗಂಧದ ಕಾವಲು ಸರ್ವೇ ನಂಬರ್ 129ರಲ್ಲಿರುವ 47 ಎಕರೆ 11 ಗುಂಟೆ ವಿಸ್ತಾರ[...] ಈ ಭೂಮಿ ಕಾಲಾಂತರದಿಂದ ಒಕ್ಕಲಿಗ ಆಸ್ತಿಯಾಗ[...] ಉಳಿದಿತ್ತು. ಕೆಂಗಲ್ ಹನುಮಂತಯ್ಯ ಮುಖ್ಯಮಂತ್ರಿಯಾಗಿ[...] ಕಾಲಕ್ಕೆ ಅಂದರೆ 1967ರ ಹೊತ್ತಿಗೆ ಕಂದಾಯ ಮಂತ್ರಿಯಾಗಿದ್ದವರು ಒಕ್ಕಲಿಗರೇ ಆಗಿದ್ದ ಎಂ.ವಿ. ಕೃಷ್ಣ[...]

ಒಕ್ಕಲಿಗ ಜನಾಂಗದ ವಿದ್ಯಾಭಿವೃದ್ಧಿಯ[...] ಕನಸಿಟ್ಟುಕೊಂಡೇ ಕೆಂಗಲ್ ಹನುಮಂತಯ್ಯ ಶ್ರೀಗಂಧ[...] ಕಾವಲಿನ 47.11 ಎಕರೆಗಳ ಪೈಕಿ ಒಕ್ಕಲಿಗರ ಸಂಘಕ್ಕೆಂದ[...] 20 ಎಕರೆ ಮಂಜೂರು ಮಾಡಿದರೆ, ಅವರ ಅಳಿಯ[...] ಡಾ. ತಿಮ್ಮಯ್ಯನವರ ಗೋಲ್ಡನ್ ವ್ಯಾಲಿ ಟ್ರಸ್ಟ್‌ಗೆಂದ[...] 25 ಎಕರೆ ಮಂಜೂರು ಮಾಡಿದ್ದು ಮಂತ್ರಿ ಕೃಷ್ಣ[...] ಮಿಕ್ಕ ಎರಡೆಕರೆ 11 ಗುಂಟೆ ಖರಾಬು ಭೂಮಿಯ[...] ಇದಕ್ಕೆ ಹೊಂದಿಕೊಂಡೇ ಇತ್ತು. ಈ ರೀತಿ ಗೋಲ್ಡನ್ ವ್ಯಾಲಿ ಟ್ರಸ್ಟ್ ಹೆಸರಿಗೆ 25 ಎಕರೆ ಮಂಜೂರು ಮಾಡಿದ್ದ[...] ಕಾರಣವಿತ್ತು. ಒಕ್ಕಲಿಗರ ಸಂಘವೊಂದಕ್ಕೇ ಇಷ್ಟೆಲ[...] ಮಂಜೂರು ಸಾರಾಸಗಟಾಗಿ ಭೂಮಿಯನ್ನು ಮಾಡಿಬಿಟ್ಟ[...]



ಯಾರು ಈ ಮ್ಯಾಸ್ಕೆರೆನ್ಹಾಸ್?


ಸಿ.ಟಿ. ರವಿ ಜೊತೆ ಮ್ಯಾಸ್ಕೆರೆನ್ಹಾಸ್, ಪಾಲೇಮಾರ್

ರುಡಾಲ್ಫ್ ಮ್ಯಾಸ್ಕೆರೆನ್ಹಾಸ್ ಎಂಬ ಹೆಸರು ಬೆಂಗಳೂರಿನ ರಿಯಲ್ ಎಸ್ಟೇಟ್ ಕೂಪಕ್ಕಾಗಲಿ ಭೂ ಮಾಫಿಯಾಕ್ಕಾಗಲಿ ಅಪರಿಚಿತವಿರಬಹುದು. ಆದರೆ ಕರಾವಳಿ ಮತ್ತು ಚಿಕ್ಕಮಗಳೂರಿನ ಕಾಫಿಲೋಕದಲ್ಲಿ ಅದೊಂದು ಭಯಾನಕ ಹೆಸರು!

2011ರ ಡಿಸೆಂಬರ್ 11ರಂದು ಭಾನುವಾರ ಚಿಕ್ಕಮಗಳೂರಿನಲ್ಲಿ ಉದ್ಘಾಟನೆಗೊಂಡ ಕ್ಯಾಥೋಲಿಕ್ ಕ್ಲಬ್‌ನ 1.80 ಕೋಟಿ ಮೊತ್ತದ ಗೆಸ್ಟ್ ಹೌಸುಗಳು ಈತನ ಕಾಣಿಕೆಯಾಗಿತ್ತು, ಅವತ್ತು ಚಿಕ್ಕಮಗಳೂರಿನ ಬಿಜೆಪಿ ಶಾಸಕ ಸಿ.ಟಿ. ರವಿಯೇ ಬಂದು ಕ್ಲಬ್ ಉದ್ಘಾಟಿಸಿದರೆ ಅವರಿಗೆ ಸರಿಸಮನಾಗಿ ನಿಂತಿದ್ದವನು ಬಿಲ್ಡರ್ ರುಡಾಲ್ಫ್, ಅದು ಕೇವಲ ಸಿ.ಟಿ. ರವಿ ಮತ್ತು ಮ್ಯಾಸ್ಕೆರೆನ್ಹಾಸ್ ನಡುವಿನ ಗೆಳೆತನವಷ್ಟೇ ಆಗಿರಲಿಲ್ಲ, ಕರಾವಳಿಯ ಆರೆಸ್ಸೆಸ್ ಮತ್ತು ಬಿಜೆಪಿಯ ಹಲವಾರು ನಾಯಕರಿಗೆ ಈತನ ಋಣವಿತ್ತು.

ಕಲ್ಲಡ್ಕ ಭಟ್ಟನ ಖಾಸಾ ತಮ್ಮನನ್ನೇ ಮುಂದಿಟ್ಟುಕೊಂಡು ಮ್ಯಾಸ್ಕೆರೆನ್ಹಾಸ್ ಮಂಗಳೂರಿನ ರಿಯಲ್ ಎಸ್ಟೇಟ್ ಲೋಕಕ್ಕೆ ದೊಡ್ಡ ಮಟ್ಟದಲ್ಲೇ ಎಂಟ್ರಿ ಕೊಟ್ಟಿದ್ದ. ವಿಶೇಷವಾಗಿ ಕೃಷ್ಣ ಪಾಲೇಮಾರ್ ಜೊತೆಗೇ ಈತನ ಲ್ಯಾಂಡ್ ಡೀಲುಗಳಿದ್ದವು. ಮಂಗಳೂರು ಸುತ್ತಮುತ್ತ ಕಮ್ಮಿಯೆಂದರೂ ಒಂದು ಡಜನ್ ಐಷಾರಾಮೀ ಅಪಾರ್ಟ್‌ಮೆಂಟುಗಳನ್ನು ಹುಟ್ಟು ಹಾಕಿದ್ದ. ಭೂವಿವಾದಗಳಲ್ಲಿ ನೇರವಾಗಿ ದುಬೈ ರಿಟರ್ನ್ಡ್ ಮತ್ತು ಹಾಲಿ ಬೆಂಗಳೂರು ಅಂಡರ್‌ವರ್ಲ್ಡ್ ಸಂಭಾಳಿಸುವ ಮಂಗಳೂರು ಮೂಲದ ಡಾನ್‌ನನ್ನೇ ಜೊತೆ ಹಾಕಿಕೊಂಡಿದ್ದ.

ಬಿಜೆಪಿ ಅಧಿಕಾರದಲ್ಲಿದ್ದಷ್ಟೂ ಕಾಲ ತನ್ನ ರಿಯಲ್ ಎಸ್ಟೇಟ್ ಸಾಮ್ರಾಜ್ಯವನ್ನು ಶರವೇಗದಲ್ಲಿ ವಿಸ್ತರಿಸಿದ ಮ್ಯಾಸ್ಕೆರೆನ್ಹಾಸ್ ಮೂಲತಃ ಚಿಕ್ಕಮಗಳೂರಿನ ಕಾಫಿ ಪ್ಲಾಂಟರ್. ಪ್ರಾರಂಭದಲ್ಲಿ ಚಂದವಳ್ಳಿ ಎಸ್ಟೇಟನ್ನು ಖರೀದಿಸಿದ. ಬೆನ್ನಲ್ಲೇ ಹೊಸಗದ್ದೆ ಎಸ್ಟೇಟಿಗೂ ವಕ್ಕರಿಸಿದ. ಸಾಲದೆಂಬಂತೆ ತನ್ನ ಬಿಜಿನೆಸ್ ಪಾಲುದಾರನನ್ನು ಜೊತೆ ಹಾಕಿಕೊಂಡು ಕರ್ವೇಸಿಯಾ ಎಸ್ಟೇಟನ್ನು ಖರೀದಿಸಿದ. 2005ರ ಹೊತ್ತಿಗೆ ಮ್ಯಾಸ್ಕೆರೆನ್ಹಾಸ್ ಮೈಸೂರು ಕಾಫಿ ಲಿಮಿಟೆಡ್ ಮತ್ತು ಬಾಬಾ ಬುದಿನ್ ಕಾಫಿ ಲಿಮಿಟೆಡ್ ಕಂಪೆನಿಗಳ ಅಧ್ಯಕ್ಷನಾಗಿದ್ದ.

ಕೇವಲ ಕಾಫಿ ಕಂಪೆನಿಗಳಷ್ಟೇ ಅಲ್ಲದೆ 2004ರ ಹೊತ್ತಿಗೆ COMA ಎಂಬ ಸಾಫ್ಟ್‌ವೇರ್ ಕಂಪೆನಿಯನ್ನೂ ಹುಟ್ಟು ಹಾಕಿದ. ಖರ್ಗೆ ಸಮಾಜ ಕಲ್ಯಾಣ ಮಂತ್ರಿಯಾಗಿದ್ದಾಗ ರಾಜ್ಯಾದ್ಯಂತ ದಲಿತ ಮಕ್ಕಳಿಗೆಂದು ಕಂಪ್ಯೂಟರ್ ಕಲಿಕೆಯ ಯೋಜನೆ ರೂಪಿಸಿ ಆ ಹೆಸರಲ್ಲಿ 40 ಕೋಟಿಗೂ ಅಧಿಕ ಮೊತ್ತದ ಪರಿಶಿಷ್ಟರ ನಿಧಿಯನ್ನು ದೋಚುವಲ್ಲೂ ಈತ ಪ್ರಮುಖ ಪಾತ್ರಧಾರಿಯಾಗಿದ್ದ. ಈಗ ನಕಲಿ ಸ್ವಾತಂತ್ರ ಹೋರಾಟಗಾರನ ಹೆಸರಲ್ಲಿ ಆತನ ಮಗನನ್ನು ಮುಂದಿಟ್ಟುಕೊಂಡು ಒಕ್ಕಲಿಗರ 80 ಕೋಟಿಯ ಸ್ವತ್ತಿಗೆ ವಕ್ಕರಿಸಿದ ಮ್ಯಾಸ್ಕೆರೆನ್ಹಾಸ್ ಪಾರ್ಟಿ ಫಂಡಿನ ಋಣ ತೀರಿಸಲೆಂದೇ ಶೆಟ್ಟರ್ ಬಳುವಳಿಯಾಗಿ ನಾಲ್ಕೆಕರೆಯ ಕಾಣಿಕೆ ಸಲ್ಲಿಸಿದ್ದಾರೆ. ಮಂಜೂರಾತಿಗೆಂದು ಸಂಪುಟ ಸಭೆಯೆದುರು ಮಂಡಿಸಲಾಗಿದ್ದ ಸುಂದರೇಶ್ ಅರ್ಜಿಯನ್ನೇ ಶೆಟ್ಟರ್ ತಮ್ಮ ಲಾಭಕ್ಕೆಂದು ಬಳಸಿಕೊಂಡಿದ್ದಾರೆ. ಅಂದರೆ ಕರಾವಳಿಯ ಆರೆಸ್ಸೆಸ್ ಧಣಿಗಳ ಆದೇಶ ಪಾಲಿಸಲು ಹೋಗಿ ಹಳ್ಳಕ್ಕೆ ಬಿದ್ದಿದ್ದಾರೆ.

ಎಲ್ಲಿ ತಕರಾರು ಎದ್ದಿತೋ ಎಂದು 45 ಎಕರೆಗಳ[...] ಇಬ್ಭಾಗ ಮಾಡಿ ಪರೋಕ್ಷವಾಗಿ ಒಕ್ಕಲಿಗರದ್ದೇ ಆಗಿ[...] ಗೋಲ್ಡನ್ ವ್ಯಾಲಿ ಟ್ರಸ್ಟ್ ಹೆಸರಿಗೆ ಮಂಜೂ[...] ಮಾಡಲಾಗಿತ್ತು.

ಹೀಗೆ ಗೋಲ್ಡನ್ ವ್ಯಾಲಿ ಟ್ರಸ್ಟ್ ಹೆಸರಿ[...] ಮಂಜೂರಾಗಿದ್ದ 25 ಎಕರೆಗಳ ಪೈಕಿ ಹತ್ತೆಕರೆ ಗ್ರಾಂ[...] ಭೂಮಿಯಾದರೆ ಉಳಿಕೆ 15 ಎಕರೆ 30 ವರ್ಷ ಗುತ್ತಿ[...] ಆಧಾರದ ಮೇಲೆ ನೀಡಲಾಗಿತ್ತು. ಅದೇ ರೀತಿ ಒಕ್ಕಲಿಗ[...] ಸಂಘಕ್ಕೆಂದು ಇದಕ್ಕೆ ಹೊಂದಿಕೊಂಡಂತೆ ಮಂಜೂರಾಗಿ[...] 20 ಎಕರೆಯಲ್ಲಿ ಹತ್ತೆಕರೆಯೂ ಗುತ್ತಿಗೆಗೆಂದು ಸರ್ಕಾ[...] ನೀಡಿದ್ದ ಭೂಮಿಯಾಗಿತ್ತು, ಆದರೆ ಅಚಾತುರ್ಯವಶಾ[...] ಒಕ್ಕಲಿಗರ ಸಂಘ ಸ್ಪಷ್ಟತೆಯ ಕೊರತೆಯಿಂದಾಗಿ ಗೋಲ್ಡ[...] ವ್ಯಾಲಿ ಟ್ರಸ್ಟ್‌ಗೆ ಮಂಜೂರಾಗಿದ್ದ ಭೂಮಿಯನ್ನೇ ತ[...] ಮಂಜೂರಾಗಿದ್ದೆಂದು ಅಪಾರ್ಥಿಸಿ ಅದರೊಳಗೆ ತನ್ನ ವಿ[...] ಸಂಸ್ಥೆಗಳನ್ನು ನಿರ್ಮಿಸಿಬಿಟ್ಟಿತು.

80 ಕೋಟಿಯ ಸೊತ್ತು

ಏನೇ ಆದರೂ ಎಲ್ಲವೂ ಒಕ್ಕಲಿಗ ಜನಾಂಗ[...] ಸೇರಿದ್ದರಿಂದ ಈ ಯಡವಟ್ಟಿನ ಬಗ್ಗೆ ಸಂಘವಾಗಲಿ ಕೆಂಗ[...] ಅಳಿಯ ಡಾ. ತಿಮ್ಮಯ್ಯನವರಾಗಲಿ ತಲೆಕೆಡಿಸಿಕೊಳ್ಳಲಿ[...] ಈ ಮಧ್ಯೆ 2006ರಲ್ಲಿ ಭೂಮಿ ಬಳಕೆಯಾಗದೇ ಹಾ[...] ಉಳಿದದ್ದನ್ನು ಗಮನಿಸಿದ ಕಂದಾಯ ಇಲಾಖೆ ಮಂಜೂ[...] ಮಾಡಿದ ಉದ್ದೇಶ ಈಡೇರಿಸಲು ವಿಫಲರಾ[...] ಕಾರಣಕೊಟ್ಟು ಹಾಗೇ ಉಳಿದಿದ್ದ ಎಲ್ಲಾ ಭೂಮಿಯ[...] ಮುಟ್ಟುಗೋಲು ಹಾಕಿಕೊಂಡಿತು. ಕಂದಾಯ ಇಲಾಖೆ[...]

ಾಗಳೆ ಕ್ರಮದಿಂದಾಗಿ ಗುತ್ತಿಗೆ ಆಧಾರದ ಹತ್ತು ಹದಿನೈದು ಎಕರೆಗಳು ಮುಟ್ಟುಗೋಲಾಯಿತು. ಆ ಹೊತ್ತಿಗೆ ಒಕ್ಕಲಿಗರ ಸಂಘ ಖದೀಮ ಕೆಂಚಪ್ಪಗೌಡನ ಹಿಡಿತದಲ್ಲಿತ್ತು. ಸಂಘದ ದ ಸೊತ್ತನ್ನೆಲ್ಲ ರಿಯಲ್ ಎಸ್ಟೇಟ್ ದುರುಳರಿಗೆ ಳ್ಳುವುದರಲ್ಲೇ ಬಿಜಿಯಾಗಿದ್ದ ಕೆಂಚಪ್ಪಗೌಡ ಅಂಡ್ ಮ್ಮಿಗೆ ತಮ್ಮ ಜನಾಂಗದ ಹಿತಾಸಕ್ತಿಯೇ ಹೋಗಿರುವಾಗ ಇನ್ನು ಸೊತ್ತು ಉಳಿಸಿಕೊಳ್ಳಲು ವಾದರೂ ಎಲ್ಲಿತ್ತು?

ರ್ಕಾರದ ಈ ದಬ್ಬಾಳಿಕೆಯ ವಿರುದ್ಧ ಒಕ್ಕಲಿಗರ ಮತ್ತು ಗೋಲ್ಡನ್ ವ್ಯಾಲಿ ಟ್ರಸ್ಟ್‌ಗಳೆರಡೂ ನ್ಯಾಯಾಲ ಮೊರೆ ಹೋಕ್ಕವು. 2010ರಲ್ಲಿ ಹೈಕೋರ್ಟು ೆ ಬಾಕಿ ಇಟ್ಟು ಯಥಾಸ್ಥಿತಿ ಕಾಪಾಡಿಕೊಳ್ಳುವಂತೆ ಸಿತ್ತು. ಇಷ್ಟೆಲ್ಲದರ ಮಧ್ಯೆ ದೌರ್ಜನ್ಯದ ಅವಧಿಯೆಂಬಂತೆ ಚುನಾವಣೆಗಿನ್ನು ಕೇವಲ 13 ಕಿ ಇರುವಂತೆ 2013ರ ಏಪ್ರಿಲ್ 22ರಂದು ಈ ಒಲ್ಕೆಕರೆಯನ್ನು ಮುಖ್ಯಮಂತ್ರಿ ಶೆಟ್ಟರ್ ಮಂಜೂರು ದ್ದು ಸುಂದರೇಶ್ ಎಂಬ ನಿಗೂಢ ಆಸಾಮಿಗೆ!

ಾಗಡಿ ರಿಂಗ್ ರಸ್ತೆಗೆ ಹೊಂದಿಕೊಂಡಂತೆ ಎಕರೆಗೆ ಮುಂದರೂ 20 ಕೋಟಿ ಬೆಲೆಬಾಳುವ ಈ ರೆಯ ಮಾರುಕಟ್ಟೆ ರೇಟೇ ಕನಿಷ್ಠ 80 ಕೋಟಿ!


ಬಿಲ್ಡರ್ ರುಡಾಲ್ಫ್!

ತ್ರೋರಾತ್ರಿ ಸದ್ದಿಲ್ಲದೆ, ನಿಗೂಢವಾಗಿ ನಡೆದುಹೋದ ನ್ಯಾಯದ ಹಿಂದಿದ್ದ ಕರಾಮತ್ತು, ಲೇವಾದೇವಿ, ದ ಅಸಲಿಯತ್ತೇ ಬೇರೆಯಿತ್ತು. ಅದು ಒಕ್ಕಲಿಗರ ಗಮನಕ್ಕೆ ಬರುವ ಹೊತ್ತಿಗೆ ಕಾಲ ಮಿಂಚಿತ್ತು. ಗ್ಗೆ ಮೊದಲು ಬಯಲಿಗೆಳೆದದ್ದೇ ಪತ್ರಿಕೆ. ಕಳೆದ ಗರ ಸಂಘದ ಚುನಾವಣೆ ಹೊತ್ತಿಗೆ ಪತ್ರಿಕೆ ಗೆಳೆದ ಅಧ್ಯಕ್ಷ ಕೆಂಚಪ್ಪಗೌಡನ ಅಸಂಖ್ಯಾತ ರಗಳ ಪೈಕಿ ಶ್ರೀಗಂಧದ ಕಾವಲು ಆಸ್ತಿ ಕಂಡೋರ ದ್ದೂ ಒಂದಾಗಿತ್ತು. ಒಕ್ಕಲಿಗರ ಸಂಘವೇ ತೆಪ್ಪಗಿದ್ದ ಇನ್ನೇನೆಂದು ಪತ್ರಿಕೆಯೂ ಈ ಬಗ್ಗೆ ವಿಶೇಷವಾಗಿ ಡಿಸಿಕೊಳ್ಳಲು ಹೋಗಲಿಲ್ಲ.


013ರ ಮಾರ್ಚ್ 12ರ ಸಚಿವ ಸಂಪುಟದ ಲ್ಲಿ ಮುಖ್ಯಮಂತ್ರಿ ಶೆಟ್ಟರ್ ತಮ್ಮ ಸ್ವಹಸ್ತಾಕ್ಷರದಲ್ಲೇ ೋದಿಸಿದ ಈ ಕರ್ಮಕಾಂಡದ ರೂವಾರಿಯೇ ಲ್ಫ್ ಮ್ಯಾಸ್ಕೆರೆನ್ಹಾಸ್!

ಮಾರೋ ನಕಲಿ ಸ್ವಾತಂತ್ರ ಹೋರಾಟಗಾರನ ಹೆಸರಲ್ಲಿ ದೆ ನಡೆದು ಹೋದ ಈ ಕರ್ಮಕಾಂಡ ನೋಟಕ್ಕೆ ಕೋರ್ಟ್ ಆದೇಶದ ಪಾಲನೆಯಂತೆ ೂ ಕೆದಕಿದಂತೆಲ್ಲ ಅಕ್ರಮಗಳ ಸರಮಾಲೆಯೇ ಳ್ಳುತ್ತದೆ. ಹೇಳಿಕೇಳಿ ಇದು ಸಾರ್ವಜನಿಕ ಮತ್ತು ಸಾರ್ವಜನಿಕ ಸೊತ್ತು. ಯಾವುದೇ ಕಾರಣಕ್ಕೂ ಇದು ವ್ಯಕ್ತಿಗೆ ಮಂಜೂರಾಗುವಂತಿಲ್ಲ, ಆದರೆ ರಿಯಲ್ ಟ್ ಕಾರಸ್ಥಾನವಿದೆಯಲ್ಲ-

ದಕ್ಕೆಂದೇ ಸೃಷ್ಟಿಯಾದದ್ದು ಸ್ವಾತಂತ್ರ ಹೋರಾಟಗಾರ ಸೂರ್ಯನಾರಾಯಣರಾವ್ ಎಂಬ ಅನುಮಾನಾಸ್ಪದ ಹೆಸರು. ಕರ್ನಾಟಕದ ಸ್ವಾತಂತ್ರ ಹೋರಾಟದಲ್ಲಿ ಈ ಹೆಸರನ್ನು ಕೇಳಿದವರಿಲ್ಲ. ಆದರೆ 1967 ಜನವರಿ 12ರಂದು ಕರ್ನಾಟಕ ಸರ್ಕಾರ ಬೆಂಗಳೂರು ದಕ್ಷಿಣ ತಾಲ್ಲೂಕು ಸಾದರ ಮಂಗಲದಲ್ಲಿ 21 ಎಕರೆ ಸರ್ಕಾರಿ ಭೂಮಿಯನ್ನು 13 ಮಂದಿ ಸ್ವಾತಂತ್ರ ಹೋರಾಟಗಾರರಿಗೆ ಮಂಜೂರು ಮಾಡಿತ್ತು. ಈ ಪೈಕಿ ಸೂರ್ಯ ನಾರಾಯಣರಾವ್‌ಗೆ ದಕ್ಕಿದ್ದು 4 ಎಕರೆ.



ಕಲ್ಲಡ್ಕ ಭಟ್ಟ




ಡಾ. ಆಪ್ಪಾಜಿಗೌಡ


ಉಲ್ಟಾ ಹೊಡೆದ ಸರ್ಕಾರ

ಈ ರೀತಿ ಮಂಜೂರು ಮಾಡಿದ್ದು ಕಾನೂನುಬದ್ಧವಾಗಿಲ್ಲ ಎಂಬುದು ಆ ಕ್ಷಣಕ್ಕೇ ಸರ್ಕಾರಕ್ಕೆ ಗೊತ್ತಾಗಿ ಅದರ ಮರುದಿನವೇ ಮಂಜೂರಾತಿಯನ್ನು ರದ್ದು ಮಾಡುತ್ತದೆ. ಸಾಗುವಳಿ ಚೀಟಿ ವಿತರಿಸದ ಹಾಗೆ ಜಿಲ್ಲಾಧಿಕಾರಿಗೆ ಟೆಲಿಗ್ರಾಂ ಆದೇಶವೂ ರವಾನೆಯಾಗುತ್ತದೆ. ಇದರ ವಿರುದ್ಧ ನ್ಯಾಯಾಲಯದ ಮೊರೆ ಹೊಕ್ಕ ಸೂರ್ಯನಾರಾಯಣರಾವ್ 1983ರಲ್ಲಿ ಹೈಕೋರ್ಟ್‌ನಲ್ಲಿ ಕೇಸು ದಾಖಲಿಸುತ್ತಾರೆ. ಆದರೆ 1989ರ ಆಗಸ್ಟ್ 11ರಂದು ಸೂರ್ಯನಾರಾಯಣರಾವ್ ನಿಧನ ಹೊಂದುತ್ತಾರೆ. ತಂದೆಯ ಪರವಾಗಿ ಈ ಕೇಸನ್ನು ಮುಂದುವರಿಸಿದ್ದು ಮಗ ಸುಂದರೇಶ್!

ಕೇಸು ಹಾಗೂಹೀಗೂ 2012ರ ತನಕ ಬಂದು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಸುಂದರೇಶ್ ವಿರುದ್ಧ 2012ರ ಆಗಸ್ಟ್ 28ರಂದು ಕೌಂಟರ್ ಅಫಿಡವಿಟ್ ಒಂದನ್ನು ಸಲ್ಲಿಸಿ ಯಾವ ಕಾನೂನಿನ ಪ್ರಕಾರವೂ ಜಮೀನು ಮಂಜೂರು ಮಾಡಲು ಸಾಧ್ಯವೇ ಇಲ್ಲವೆಂದು ವಾದಿಸುತ್ತಾರೆ. ಇಷ್ಟಿದ್ದೂ ಸುಂದರೇಶ್ ಸರ್ಕಾರದ ವಿರುದ್ಧ ನ್ಯಾಯಾಂಗನಿಂದನೆ ಅರ್ಜಿ ಸಲ್ಲಿಸಿದಂತೆ ಅದಕ್ಕೆ ಸರ್ಕಾರ ಭೀತಿಗೆ ಬಿದ್ದು ಭೂಮಿ ಕೊಡಲು ಒಪ್ಪಿದಂತೆ ನಾಟಕ ನಡೆದದ್ದು 2012 ಸೆಪ್ಟೆಂಬರ್ 11ರಂದು!



ಪ್ರೊ. ನಾಗರಾಜ್



ಡಾ. ಅಪ್ಪಾಜಿ ಗೌಡ

ಸುಂದರೇಶ್ ನ್ಯಾಯಾಂಗನಿಂದನೆ ಅರ್ಜಿ ವಾಪಸ್ಸು ಪಡೆಯುವುದಾದರೆ ತಾನು ಜಮೀನು ನೀಡುವುದಾಗಿಯೂ ಆದರೆ ಸುಂದರೇಶ್ ಇಂಥದ್ದೇ ಭೂಮಿ ಬೇಕೆಂದು ಹಠಕ್ಕೆ ಬೀಳಬಾರದೆಂದು ಶೆಟ್ಟರ್ ಸರ್ಕಾರ ವಾಗ್ದಾನ ಮಾಡಿದ್ದರ ಹಿಂದಿದ್ದ ಹುನ್ನಾರವೇ ಬೇರೆಯಾಗಿತ್ತು. ಇದನ್ನು ಕೋರ್ಟ್ ಸಮ್ಮತಿಸಿದೆ. ಅದರಂತೆ ಕೆ.ಆರ್.ಪುರಂ ತಾಲ್ಲೂಕು ಕೊಡಿಗೆಹಳ್ಳಿಯ ಸರ್ವೇ ನಂಬರ್ 34ರಲ್ಲಿ ತನಗೆ 4 ಎಕರೆ ನೀಡುವಂತೆ ಸುಂದರೇಶ್ ಅರ್ಜಿ ಸಲ್ಲಿಸುತ್ತಾನೆ. ಆದರೆ ಶೆಟ್ಟರ್ ಮಂಜೂರು ಮಾಡಿದ್ದು ಪ್ರತಿಷ್ಠಿತ ಶ್ರೀಗಂಧದ ಕಾವಲು ಸ.ನಂ. 129ರಲ್ಲಿದ್ದ 4 ಎಕರೆಯನ್ನು!

ಮಾಯಾಬಜಾರ್ ಕತೆಯಂತೆ ಸ್ವಾತಂತ್ರ ಹೋರಾಟಗಾರನ ಮಗನಿಗೆ ನೀಡಬೇಕಾದ ನಾಲ್ಕೆಕರೆ ಕೃಷಿ ಭೂಮಿಗೆ ಬದಲಾಗಿ ಒಕ್ಕಲಿಗರ ಸಂಘದ 4 ಎಕರೆ ನೀಡಿದ್ದೇಕೆ? ಹಕೀಕತ್ತಿದ್ದಿದ್ದೇ ಇಲ್ಲಿ!

ಮೊದಲೇ ಯಥಾಸ್ಥಿತಿ ಕಾಪಾಡುವಂತೆ ಹೈಕೋರ್ಟ್ ನೀಡಿದ ಆದೇಶವನ್ನು ಶೆಟ್ಟರ್ ಲೆಕ್ಕಕ್ಕೇ ಇಲ್ಲದಂತೆ ಧಿಕ್ಕರಿಸಿದ್ದರು. ಇದು ಮೊದಲನೇ ಅಕ್ರಮ. ಹಾಗೆ ನೀಡುವುದಾದರೆ ಕೃಷಿ ಭೂಮಿಯನ್ನು ನೀಡಬೇಕೆ ಹೊರತು ನಗರದ ವ್ಯಾಪ್ತಿಯ ಪರಿವರ್ತಿತ ಭೂಮಿಯನ್ನಲ್ಲ. ಕಾನೂನುರೀತ್ಯ ಕೃಷಿ ಭೂಮಿಯೆಂದರೆ ಬಿಬಿಎಂಪಿ ವ್ಯಾಪ್ತಿಯಿಂದ 16 ಕಿ.ಮೀ. ಆಚೆಗಿರುವ ಭೂಮಿ. ಆದರೆ ಶೆಟ್ಟರ್ ಮಂಜೂರು ಮಾಡಿರುವುದು ವಿಧಾನಸೌಧದಿಂದ 12 ಕಿ.ಮೀ. ಒಳಗಿನ ಭೂಮಿಯನ್ನು. ಇದು ಎರಡನೇ ಅಕ್ರಮ. ಮೊದಲಿನಿಂದಲೂ ಮಂಜೂರಾತಿಯನ್ನು ನಿಯಮ ಬಾಹಿರ ಎಂದು ವಾದಿಸಿಕೊಂಡೇ ಬಂದಿದ್ದ ಸರ್ಕಾರ ಏಕಾಏಕಿ ಉಲ್ಟಾ ಹೊಡೆದದ್ದು ಮೂರನೇ ಅಕ್ರಮ. ಸಾರ್ವಜನಿಕ ಜಮೀನನ್ನು ಖಾಸಗಿ ವ್ಯಕ್ತಿಗೆ ಅದರಲ್ಲೂ ಕೃಷಿ ಸಾಧ್ಯವೇ ಇಲ್ಲದ ಜಮೀನನ್ನು ಕೃಷಿ ಉದ್ದೇಶಕ್ಕೆಂದು ಮಂಜೂರು ಮಾಡಿದ್ದು ಇದೆಲ್ಲಕ್ಕಿಂತಲೂ ದೊಡ್ಡ ಮೋಸವಾಗಿತ್ತು.

ಚುನಾವಣೆಗಿನ್ನು 13 ದಿನ ಬಾಕಿಯಿರುವಾಗಲೇ ಚುನಾವಣಾ ಆಯೋಗದ ಕಣ್ಣಿಗೆ ಮಣ್ಣೆರಚಲಾಗಿತ್ತು. ಜಮೀನಿನ ದರ ನಿಗದಿಯಲ್ಲೂ ಮೋಸವೇ ನಡೆದಿತ್ತು. ವಾಣಿಜ್ಯ ಉದ್ದೇಶದ ಭೂಮಿಯನ್ನು ನಿಯಮ ಧಿಕ್ಕರಿಸಿ ಕೃಷಿ ಭೂಮಿಯ ದರವೆಂದು ಬದಲಿಸಲಾಯ್ತು. ಎಕರೆಗೆ 6 ಕೋಟಿಯಿದ್ದದ್ದನ್ನು ಶೆಟ್ಟರ್ ಒಂದೂವರೆ ಕೋಟಿಗೆ ಇಳಿಸಿದ್ದರು. ಅಂದರೆ 24 ಕೋಟಿಗೆ ಬದಲಾಗಿ 6 ಕೋಟಿಗೆ ಇಳಿಸಿದ್ದರು. ನಿರ್ದಿಷ್ಟ ಭೂಮಿಗಾಗಿ ಒತ್ತಾಯಿಸುವಂತಿಲ್ಲ ಎಂಬ ಕೋರ್ಟ್ ಆದೇಶವನ್ನೂ ಶೆಟ್ಟರ್ ಉಲ್ಲಂಘಿಸಿದ್ದರು!


ಸಿಡಿದೆದ್ದ ಒಕ್ಕಲಿಗ!

ಇಷ್ಟೆಲ್ಲ ಅಕ್ರಮಗಳ ಸರಮಾಲೆ ನಡೆಸಿಯೂ ನಾಲ್ಕೆಕರೆಯನ್ನು ಸ್ವಾತಂತ್ರ ಹೋರಾಟಗಾರನ ಮಗನ ಹೆಸರಿಗೆ ಮಂಜೂರು ಮಾಡಲು ಶೆಟ್ಟರ್ ಅಷ್ಟೊಂದು ಹಠಕ್ಕೆ ಬೀಳಲು ಕಾರಣನಾಗಿದ್ದು ಕರಾವಳಿಯ ಆರೆಸ್ಸೆಸ್ ಕಾರ್ಕೋಟಕ ಕಲ್ಲಡ್ಕ ಪ್ರಭಾಕರ ಭಟ್ಟ!

ಏಕೆಂದರೆ ಕಲ್ಲಡ್ಕ ಭಟ್ಟನ ಖಾಸಾ ತಮ್ಮನೇ ರುಡಾಲ್ಫ್ ಮ್ಯಾಸ್ಕೆರೆನ್ಹಾಸ್‌ನ ಪಾಲುದಾರನಾಗಿದ್ದ. ಕೊಳ್ಳೆಯ 80 ಕೋಟಿಯಲ್ಲಿ ಅರ್ಧ ಎಂದರೂ 40 ಕೋಟಿಯಷ್ಟು ಭಟ್ಟನ ಮೂಲಕ ಬಿಜೆಪಿ ಪಾಲಾಗಿತ್ತು. ನಾಮಕಾವಸ್ಥೆಗೆ ಸುಂದರೇಶ್‌ನನ್ನು ಮುಂದಿಟ್ಟುಕೊಂಡು ಆತನ ಬಾಯಿಗೆ ಚೂರುಪಾರು ಹಾಕಿದ್ದ ಖದೀಮ ಬಿಲ್ಡರ್ ಸರ್ಕಾ. ಕಟ್ಟಬೇಕಾಗಿದ್ದ 6 ಕೋಟಿಯನ್ನು ತನ್ನದೇ ಬ್ಯಾಂಕ ಖಾತೆಯಿಂದ ಪಾವತಿಸಿದ್ದ. ಅಲ್ಲಿ ಐಷಾರಾಮಿ ಟೌನ್‌ಶಿಪ್ ನಿರ್ಮಿಸಿ ಅದಕ್ಕೆ ಆಸ್ಕರ್ ಪತ್ನಿಯನ್ನು ಬೇನಾಮೀ ಪಾಲುದಾರರನ್ನಾಗಿಸಿದ್ದ!

ಈಗ ಅನ್ಯಾಯದ ವಿರುದ್ಧ ಒಕ್ಕಲಿಗರು ತಿರುಗಿ ಬಿದ್ದಿದ್ದಾರೆ. ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಪ್ರೊ. ನಾಗರಾಜ್ ಹುಟ್ಟಾ ನಿಷ್ಠೂರಿ ಮತ್ತು ಪಕ್ಕಾ ಹೋರಾಟಗಾರ. ಈಗಾಗಲೇ ಸರ್ಕಾರದ ಸಮಸ್ತರಿಗೂ ಮನವಿ ಕೊಟ್ಟಿದ್ದಾರೆ. ಒಕ್ಕಲಿಗರ ಸಂಘದ ಕಾರ್ಯಕಾರಿಣಿಯನ್ನೂ ಎಚ್ಚರಿಸಿದ್ದಾರೆ. ಸಂಘದ ನಿರ್ದೇಶಕರಾದ ಡಾ. ನಿಸರ್ಗ, ಎಂ.ಎ. ಆನಂದ್, ಕೃಷ್ಣಮೂರ್ತಿ, ಕಾಳೇಗೌಡ ಸೇರಿಕೊಂಡು ಜನಾಂಗದ ಮಂತ್ರಿ- ಶಾಸಕರ ಮೇಲೆ ಒತ್ತಡ ಹಾಕಿದ್ದಾರೆ. ಪಾಪ ಮುಖ್ಯಮಂತ್ರಿಗೆ ಉಭಯಸಂಕಟ. ಅತ್ತ ದರಿ ಇತ್ತ ಪುಲಿ ಎಂಬಂತೆ ಒಂದೆಡೆ ಆಸ್ಕರ್ ಪತ್ನಿ ಮತ್ತೊಂದೆಡೆ ಒಕ್ಕಲಿಗ ಶಾಸಕರ ಧಮಕಿ. ಶೆಟ್ಟರ್, ಬಿಜೆಪಿ, ಕಲ್ಲಡ್ಕ ಸೇರಿ ಇಟ್ಟ ಬತ್ತಿ ಯಾವ ಹೊತ್ತಿಗೆ ಸಿಡ್ಡು ಬುಡಕ್ಕೆ ಬರುತ್ತೊ...?

■ ರಾ. ಸೋಮನಾಥ್



ಸಚಿವ ಸಂಪುಟದ ಸಭೆಯಲ್ಲಿ ಪರಿಗಣಿಸಬೇಕಾದ ವಿಷಯ

ವಿಷಯ ಹಾಳೆ

ಇಲಾಖೆಯು ಕಡತ ಸಂಖ್ಯೆ ಆರ್‌ಡಿ 363 ಎಲ್‌ಜಿಎಕ್ಸ್ 2012.

ಸಚಿವ ಸಂಪುಟ ಟಿಪ್ಪಣಿಯನ್ನು ಸಲ್ಲಿಸಿದ ದಿನಾಂಕ 11.03.2013

ಸಚಿವ ಸಂಪುಟದ ಪ್ರಕರಣ ಸಂಖ್ಯೆ ಸಿ: 218/2013

ಸಚಿವ ಸಂಪುಟದ ಸಭೆಯ ದಿನಾಂಕ	ಕಾರ್ಯಸೂಚಿಯಲ್ಲಿರುವ ಕ್ರಮಸಂಖ್ಯೆ
25.02.2013	57
12.03.2013	43

ವಿಷಯ :
(99) ಶ್ರೀ ಎಸ್.ಸುಂದರೇಶ್ ಬಿನ್ ಎಸ್.ಸೂರ್ಯನಾರಾಯಣ ರಾವ್, ರಾಜಕೀಯ ಸಂತ್ರಸ್ತರು ಇವರಿಗೆ ಬದಲಿ ಜಮೀನು ಮಂಜೂರು ಮಾಡುವ ಬಗ್ಗೆ.

ಸಚಿವ ಸಂಪುಟದ ನಿರ್ಣಯ

1. ಉಚ್ಚ ನ್ಯಾಯಾಲಯದ ಆದೇಶದಂತೆ, ಅರ್ಜಿದಾರರಿಗೆ ಸಾದರಮಂಗಲದಲ್ಲಿ ಭೂಮಿ ಲಭ್ಯ ಇಲ್ಲದೇ ಇದ್ದಲ್ಲಿ ಹತ್ತಿರದ ಗ್ರಾಮದಲ್ಲಿ ಕೃಷಿ ಭೂಮಿಯನ್ನು ಮಂಜೂರು ಮಾಡಬೇಕಾಗಿರುತ್ತದೆ. ಶ್ರೀಗಂಧ ಕಾವಲು ಗ್ರಾಮದ ಜಮೀನಿನ ಮಾರ್ಗಸೂಚಿ ಬೆಲೆಯು ಸಾದರಮಂಗಲ ಗ್ರಾಮದ ಜಮೀನಿನ ಮಾರ್ಗಸೂಚಿ ಬೆಲೆಗಿಂತ ಕಡಿಮೆ ಇರುವುದರಿಂದ ಶ್ರೀಗಂಧ ಕಾವಲು ಹೊಸ ಸರ್ವೆ ನಂ.129 (ಹಳೆ ಸರ್ವೆ ನಂ.51)ರಲ್ಲಿ 4.00 ಎಕರೆ ಭೂಮಿಯನ್ನು ಮಂಜೂರು ಮಾಡಲು ನಿರ್ಣಯಿಸಲಾಗಿದೆ.
2. ಸದರಿ ಭೂಮಿಗೆ ಕೃಷಿ ಭೂಮಿಯ ಮಾರ್ಗದರ್ಶಿ ಬೆಲೆಯಂತೆ ದರ ನಿಗದಿಪಡಿಸುವುದು.

(ಜಗದೀಶ್ ಶೆಟ್ಟರ್)
ಮುಖ್ಯಮಂತ್ರಿ
12.03.2013

ಆದೇಶಕ್ಕೆ ಶೆಟ್ಟರ್ ಸಹಿ



ಶ್ರೀಗಂಧಕಾವಲು ಸೊತ್ತಿನ ನಕ್ಷೆ

ಮಳವಳ್ಳಿ ರೌಡಿ ಜನರಲ್ ಬಸವರಾಜ್ ಅರೆಸ್ಟ್


ಕೊಲೆ, ಕೊಲೆಯತ್ನ, ದರೋಡೆ, ಗ್ಯಾಂಬ್ಲಿಂಗ್ ಸೇರಿದಂತೆ 10ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಎ-1 ಆರೋಪಿಯಾಗಿದ್ದರೂ ಕಳೆದ 5 ವರ್ಷಗಳಿಂದ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸುತ್ತಲೇ ಭೂಗತ ಪಾತಕದಲ್ಲಿ ಆಕ್ಟಿವ್ ಆಗಿದ್ದ ಕುಖ್ಯಾತ ರೌಡಿ ಜನರಲ್ ಆಲಿಯಾಸ್ ಬಸವರಾಜ್‌ನನ್ನು ಬಂಧಿಸಿ ಜೈಲಿಗಟ್ಟುವಲ್ಲಿ ಮಳವಳ್ಳಿ ಪೊಲೀಸರು ಕೊನೆಗೂ ಯಶಸ್ವಿಯಾಗಿದ್ದಾರೆ. ಬೆಂಗಳೂರು ನಗರ, ಗ್ರಾಮಾಂತರ, ಮಂಡ್ಯ, ಮೈಸೂರು, ಕನಕಪುರ, ಹಾಸನ ಪೊಲೀಸರ ಪಟ್ಟಿಯಲ್ಲಿ ಈತ ಮೋಸ್ಟ್ ವಾಂಟೆಡ್ ಗಿರಾಕಿ. ಬೆಂಗಳೂರು ಭೂಗತ ಲೋಕದೊಂದಿಗೂ ಇವನ ನಂಟಿದೆ.

ಈತನೊಬ್ಬ ಮಹಾಚಾಣಾಕ್ಷ ಕ್ರಿಮಿನಲ್. ಯಾವುದೇ ಒಂದು ಅಪರಾಧಕ್ಕೆ ಕೈ ಇಟ್ಟನೆಂದರೆ, ಕೃತ್ಯ ಶುರು ಮಾಡುವ ಮುನ್ನವೇ ಅಲ್ಲಿಂದ ಎಸ್ಕೇಪಾಗುವ ಪ್ಲಾನನ್ನೂ ಸಿದ್ಧವಾಗಿಟ್ಟುಕೊಳ್ಳುತ್ತಿದ್ದ. ಹಾಗೆ ಪೇರಿಕಿತ್ತವನು, ಆ ಪ್ರಕರಣದಲ್ಲಿ ಪೊಲೀಸರು ಆತನನ್ನು ಹುಡುಕುವುದು ನಿಲ್ಲಿಸಿದ ನಂತರವಷ್ಟೆ ಮತ್ತೊಂದು ಕ್ರೈಮ್‌ಗೆ ಇಳಿಯುತ್ತಿದ್ದ. ಅಲ್ಲಿಯವರೆಗೆ ಆತನದು ಅಜ್ಞಾತ ಬದುಕು. ಈತನ ಕ್ರೈಮ್ ಕಾರ್ಯಸ್ಥಾನ ಮಳವಳ್ಳಿಯಾದರೂ ವರ್ಷಾನುಗಟ್ಟಲೆ ಆಶ್ರಯ ಪಡೆಯುತ್ತಿದ್ದದ್ದು ಬೆಂಗಳೂರಿನ ಕುಖ್ಯಾತ ರೌಡಿಗಳ ಅಡ್ಡೆಯಲ್ಲಿ. ತನ್ನ ಮೇಲಿನ ಹತ್ತಾರು ಕೇಸುಗಳು ಕೋರ್ಟಿನಲ್ಲಿ ನಡೆಯುತ್ತಿದ್ದರೂ ಒಂದಕ್ಕೂ ಹಾಜರಾದವನಲ್ಲ. ಇಂತಿಪ್ಪ ಜನರಲ್ ಬಸವರಾಜನ ನಸೀಬು ಜುಲೈ 22ಕ್ಕೆ ಭರ್ಜರಿಯಾಗೇ ಕೈಕೊಟ್ಟಿತ್ತು. ಅವತ್ತು ಪಕ್ಕಾ ಮಾಹಿತಿಯೊಂದಿಗೆ ಸಿನಿಮೀಯ ಸ್ಟೈಲಿನಲ್ಲಿ ತಮ್ಮ ತಂಡದೊಂದಿಗೆ ದಾಳಿಯಿಟ್ಟ ಡಿವೈಎಸ್ಪಿ ಶಿವಕುಮಾರ್, ಸಿಪಿಐ ರಾಜೇಶ್‌ರ ಪೊಲೀಸ್ ಟೀಮಿನ ಮುಂದೆ ಬಸವರಾಜನ ನಸೀಬು ವರ್ಕ್‌ಔಟ್ ಆಗಲೇ ಇಲ್ಲ.

ರೌಡಿ ಬಸವರಾಜನ ಅರೆಸ್ಟು ಅಚಾನಕ್ಕಾಗಿ ಆದಂತಹುದಲ್ಲ. ಅದಕ್ಕಾಗಿ ಭಾರೀ ತಾಲೀಮೆ ನಡೆದಿತ್ತು. ಇವನ ಉಪಟಳದಿಂದ ರೋಸಿಹೋಗಿದ್ದ ಜನರ ಅಹವಾಲು ಕೇಳಿಸಿಕೊಂಡ ಶಾಸಕ ಪಿ. ನರೇಂದ್ರಸ್ವಾಮಿ ತಿಂಗಳ ಹಿಂದಷ್ಟೇ ದಕ್ಷ ಡಿವೈಎಸ್ಪಿಯೊಬ್ಬರು ಮಳವಳ್ಳಿಗೆ ಬೇಕು ಎಂದು ಹಠ ಹಿಡಿದು ಶಿವಕುಮಾರ್ ಎಂಬ ಖಡಕ್ ಆಫೀಸರನ್ನು ಆಮದು ಮಾಡಿಸಿಕೊಂಡಿದ್ದರು. ಮಳವಳ್ಳಿಯ ಡಿವೈಎಸ್ಪಿಯಾಗಿ ಚಾರ್ಜ್ ತೆಗೆದುಕೊಂಡ ದಿನದಿಂದಲೇ ಶಿವಕುಮಾರ್ ಅಲ್ಲಿನ ಕುಖ್ಯಾತ ರೌಡಿಗಳ ಮಾಹಿತಿ ಕಲೆಹಾಕಿದ್ದರು. ಆ ಪಟ್ಟಿಯ ಚೊಚ್ಚಲ ಹೆಸರೇ ಜನರಲ್ ಬಸವರಾಜನದ್ದಾಗಿತ್ತು.

ನಟೋರಿಯಸ್ ರೌಡಿ

ಮಳವಳ್ಳಿಯ ಗಂಗಾಮತಸ್ಥ ಬೀದಿಯಲ್ಲಿರುವ ಬಸಪ್ಪ ಎಂಬುವರ ಮಗನೇ ಈ ಬಸವರಾಜ ಆಲಿಯಾಸ್ ಜನರಲ್. ಮಳವಳ್ಳಿ ಮತ್ತು ಸುತ್ತಮುತ್ತಲ ಹಲಗೂರು, ಬೆಳಕವಾಡಿ, ಶಿಂಷಾಗಳಲ್ಲಿ ತನ್ನ ಹೆಸರಿನಿಂದಲೇ ನಡುಕ ಹುಟ್ಟಿಸುವಂತ ನಟೋರಿಯಸ್ ಕ್ರಿಮಿ. ಮೊದಮೊದಲು ಗಂಗ ಚಿತ್ರಮಂದಿರದ ಬಳಿ ಅಡ್ಡೆ ಹಾಕುತ್ತಿದ್ದ ಜನರಲ್ ತನ್ನ ಕುಖ್ಯಾತಿಯಿಂದಲೇ ಹಲವು ಸಹಚರರನ್ನು ಸಂಪಾದಿಸಿಕೊಂಡಿದ್ದ. ಉತ್ತಲೆರಾಮ, ಸೀನ, ಮಹದೇವ, ಕಾಳ, ಕಾರುಮುತ್ತ ಮೊದಲಾದ ಚೇಲಾಗಳನ್ನು ಮುಂದಿಟ್ಟುಕೊಂಡು ಇಸ್ಪೀಟ್ ಆಡಿಸುವುದು, ಅಕ್ರಮ ಮರಳುಗಾರಿಕೆ, ಗೂಂಡಾಗಿರಿ, ಹಫ್ತಾ ವಸೂಲಿ ದಂಧೆ ನಡೆಸುತ್ತಿದ್ದ. ತನ್ನ ವಿರುದ್ಧ ಯಾರಾದರೂ ದನಿಯೆತ್ತಿದರೆ ಅವರ ಮೇಲೆ ಹಲ್ಲೆ ಗ್ಯಾರಂಟಿ ಎಂಬ ಭಯಾನಕ ವಾತಾವರಣವನ್ನೇ ಮಳವಳ್ಳಿಯಲ್ಲಿ ಹುಟ್ಟುಹಾಕಿದ್ದ. ಅಲ್ಲದೆ ತನಗೆ ಪ್ರತಿಸ್ಪರ್ಧಿಯಾಗಿದ್ದ ಮತ್ತೊಬ್ಬ ರೌಡಿ ಇಂಗ್ಲಿಷ್



ರೌಡಿ ಜನರಲ್ ಬಂಧಿಸಿರುವ ಡಿವೈಎಸ್ಪಿ ಶಿವಕುಮಾರ್ ತಮ್ಮ ತಂಡದೊಂದಿಗೆ

ಎಂಬಾತನ ಪುಂಡ ಪಡೆಯೊಂದಿಗೆ ನಡುರಸ್ತೆಯಲ್ಲೆ ಆಗಿಂದಾಗ್ಗೆ ಬಡಿದಾಡಿಕೊಳ್ಳುತ್ತ ನಗರದ ನೆಮ್ಮದಿಯನ್ನೆ ಹಾಳುಗೆಡವಿದ್ದ.

ಬಸವರಾಜನ ಕುಖ್ಯಾತಿ ಬೆಳೆದಂತೆ ಬೆಂಗಳೂರು ಭೂಗತಲೋಕದ ಲಿಂಕೂ ಆತನಿಗೆ ತಗುಲಿಕೊಂಡಿತ್ತು. ಪೊಲೀಸರು ಬೇಟೆಯಾಡುತ್ತಿದ್ದ ಬೆಂಗಳೂರಿನ ರೌಡಿಗಳಿಗೆ ಮಳವಳ್ಳಿಯಲ್ಲಿ ಶೆಲ್ಟರ್ ಕಲ್ಪಿಸುವ ನೆಪದಲ್ಲಿ ಕುಖ್ಯಾತ ರೌಡಿಗಳ ಗೆಳೆತನ ದಕ್ಕಿಸಿಕೊಂಡಿದ್ದ.


ಈತನ ವಿರುದ್ಧ ಮಳವಳ್ಳಿ ಠಾಣೆಯಲ್ಲಿ 44/02, 81/03 ಹಾಗೂ 34/08ರಡಿ ಒಟ್ಟು ಮೂರು 307 (ಕೊಲೆ ಯತ್ನ) ಪ್ರಕರಣಗಳು ಹಾಗೂ 123/05 ಹಾಗೂ 75/07 ರಡಿ ಜೀವ ಬೆದರಿಕೆಯ 506 ಸೆಕ್ಷನ್‌ನ ಎರಡು ಕೇಸುಗಳು ಸೇರಿದಂತೆ ಒಟ್ಟು 9 ಪ್ರಕರಣಗಳು ದಾಖಲಾಗಿದ್ದವು. ಬೆಂಗಳೂರಿನ ಚಿನ್ನಮ್ಮನ ಕೆರೆ ಅಚ್ಚುಕಟ್ಟು ಪ್ರದೇಶದಲ್ಲಿ ದರೋಡೆ ನಡೆಸಿದ್ದ ಈತ ಬೆಂಗಳೂರು ಸಿಸಿಬಿ ಪೊಲೀಸರ ವಾಂಟೆಡ್ ಲಿಸ್ಟ್‌ನಲ್ಲಿಯೂ ಇದ್ದಾನೆ. ರಾಜ್ಯದ ಹಲವು ಠಾಣಾ ವ್ಯಾಪ್ತಿಯಲ್ಲಿ ಈತನ ವಿರುದ್ಧ ಪ್ರಕರಣಗಳು ದಾಖಲಾಗಿದ್ದರಿಂದ ಎಲ್ಲೆಡೆ ಪೊಲೀಸರು ಅಲರ್ಟ್ ಆಗಿ ಬೆನ್ನತ್ತಿದ್ದರು. ಹಾಗಾಗಿ ಜನರಲ್ ಬಸವರಾಜ ಆಂಧ್ರ, ತಮಿಳುನಾಡಿನಲ್ಲೂ ಕೆಲಕಾಲ ತಲೆಮರೆಸಿಕೊಂಡಿದ್ದ. ಪೊಲೀಸ್ ಬೇಟೆ ತೀವ್ರವಾದ ನಂತರ ಇತ್ತೀಚೆಗೆ ನೇರವಾಗಿ ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗದೆ ತನ್ನ ಶಿಷ್ಯರ

ರಾಮಾಯಣ, ಭಾರತ ಹೆಣ್ಣಿನ ಗೋಳಿನ ಕತೆಯಂತಲ್ಲಾ

ನಮ್ಮ ರಾಮಾಯಣ ಮತ್ತು ಮಹಾಕಾವ್ಯಗಳಲ್ಲಿ ಹೆಣ್ಣಿನ ಹಿಂಸೆ ಇದೆ. ಸೂಕ್ಷ್ಮವಾಗಿ ನೋಡಿದರೆ ಹೆಣ್ಣಿನ ಗೋಳು ವಿಜೃಂಭಿಸಿದೆ. ಅವುಗಳನ್ನು ಓದಿಕೊಂಡು ಬೆಳೆದ ಮನಸ್ಸುಗಳು ಇಂದಿಗೂ ಕೂಡ ಹೆಣ್ಣಿನ ಮೇಲೆ ತಮ್ಮ ಆಕ್ರಮಣ ನಡೆಸುತ್ತಲೇ ಇವೆ ಎಂದು ಕುವೆಂಪು ವಿ.ವಿ.ಯ ಕುಲಸಚಿವೆ ಮಲ್ಲಿಕಾ ಘಂಟಿಯವರು ಗಂಟೆ ಹೊಡೆದಂತೆ ಹೇಳಿದ್ದಕ್ಕೆ ಪ್ರತಿಕ್ರಿಯೆಯಾಗಿ ನಮ್ಮ ಚೆಡ್ಡಿ ವೀರ ಚಿಮೂ ಛೀಮಾರಿ ಹಾಕಿದ್ದಾರಂತಲ್ಲಾ. ಚಿಮೂ ಪ್ರಕಾರ ಅಧರ್ಮ ಅತಿಯಾಗಿ, ಧರ್ಮ ಮಿತಿಯಾದಾಗ ಈ ಅಸಮತೋಲನವನ್ನು ಸರಿದೂಗಿಸಲು ಶ್ರೀಕೃಷ್ಣ ಹುಟ್ಟಿ ಬರುತ್ತಾನಂತೆ. ಆದರೆ ಏನು ಕಾರಣವೋ ಏನೋ ಇನ್ನೂ ಹುಟ್ಟಿ ಬಂದಿಲ್ಲ, ಅದಕ್ಕಾಗಿ ಹಿಂಸೆ ನಡೆಯುತ್ತಿದೆ. ಅದಕ್ಕೆ ರಾಮಾಯಣ ಮತ್ತು ಮಹಾಭಾರತವನ್ನು ದೂರುವುದು ಕುಲ ಸಚಿವೆಗೆ ಶೋಭೆ ತರುವ ಮಾತಲ್ಲ ಎಂದು ಚಿ.ಮೂ. ಕೆಂಡ ಕಾರಿದ್ದಾರಂತಲ್ಲಾ. ಚಿಮೂ ಕ್ಯಾತೆಯನ್ನ ಗೇಲಿ ಮಾಡಿರುವ ಕುವೆಂಪು ವಿ.ವಿ.ಯ ನಿರಂಕುಶಮತಿ ವಿದ್ಯಾರ್ಥಿಗಳು "ನಮ್ಮ ಮಲ್ಲಿಕಾ ಘಂಟಿ ಹೇಳಿರುವುದು ನೂರಕ್ಕೆ ನೂರು ಸತ್ಯ. ಮದುವೆಯಾಗುತ್ತೀಯ ಎಂದು ಚುಡಾಯಿಸಿದ ಹೆಂಗಸನ್ನು ಹಿಡಿದು ಮೂಗು ಮುಂದಲೆ ಕೊಯ್ದ ಪಾತಕಿಗಳು ಜಗತ್ತಿನ ಯಾವ ಕಾವ್ಯದಲ್ಲೂ ಇಲ್ಲ. ಹಾಗೆಯೇ ತುಂಬಿದ ಸಭೆಗೆ ಹೆಂಗಸನ್ನ ಎಳೆದು ತಂದು ಸೀರೆ ಬಿಚ್ಚಿ ಹಾಕಿದ ಪ್ರಸಂಗ ಕೂಡ ಜಗತ್ತಿನ ಯಾವ ಕಾವ್ಯದಲ್ಲೂ ಇಲ್ಲ" ಎಂದು ಆಡಿಕೊಳ್ಳುತ್ತಿದ್ದಾರಂತಲ್ಲಾ. ಇದನ್ನು ಕೇಳಿಸಿಕೊಂಡ ಚಿಮೂ ಅಭಿಮಾನಿಯೊಬ್ಬ "ಸೀರೆ ಎಳೆದರೇನಾಯ್ತು? ದ್ರೌಪದಿ ಲಂಗ ಇಕ್ಕಿದ್ದಳು ಗೊತ್ತೆ?" ಎಂದನಂತಲ್ಲಾ, ಥೂತ್ತೇರಿ!

* * *

ಮುಂದುವರಿದ ನಿರಂಕುಶಮತಿಗಳು "ನೋಡೀ ಇಡೀ ರಾಮಾಯಣವೇ ಹೆಣ್ಣಿನ ಗೋಳಿನದ್ದು. ಅದರಲ್ಲಿ ದಶರಥನೆಂಬ ವಯೋವೃದ್ಧನ ಮೂವರು ಹೆಂಡರು ಕೂಡ ಅಳುತ್ತಾರೆ. ಇದ್ದುದರಲ್ಲಿ ಕೈಕೆ ಅಳುವನ್ನು ದ್ವೇಷಾಸೂಯೆಗೆ ಪರಿವರ್ತಿಸಿಕೊಳ್ಳುತ್ತಾಳೆ. ಆಕೆ ಗಯ್ಯಾಳಿಯಾದರೂ ಅವಳಿಗೂ ಸುಖವಿಲ್ಲ. ಇನ್ನ ,ಅಣ್ಣನೊಡನೆ ಕಾಡಿಗೆ ಹೊರಟ ಲಕ್ಷ್ಮಣ ತನಗೂ ಒಬ್ಬ ಟೀನೇಜಿನ ಹೆಂಡತಿಯಿದ್ದಾಳೆ ಎಂದು ಅಪ್ಪಿತಪ್ಪಿಯೂ ನೆನಪಿಸಿಕೊಳ್ಳದೆ ಮೋದಿ ಹಿಮಾಲಯದ ಕಡೆ ಹೋದಂತೆ ಹೊರಟುಹೋದ. ಕಾಡಿಗೆ ಹೋದರೆ ಅಲ್ಲೂ ವಾಲಿ ಸುಗ್ರೀವನ ಸಮಸ್ಯೆಯಲ್ಲಿ ಹೆಣ್ಣಿನ ಗೋಳಿದೆ. ಅತ್ತ ಲಂಕೆಯಲ್ಲೂ ರಾವಣನ ಹೆಂಡತಿಯ ಗೋಳಂತೂ ಹೇಳತೀರದ್ದು. ಹಾಗಾಗಿ ಇಡೀ ರಾಮಾಯಣ ಗೋಳಿನ ಕಂತೆ. ಇದೆಲ್ಲಕ್ಕಿಂತ ಮುಖ್ಯವಾಗಿ ರಾಮ ಹೆಂಡತಿಯನ್ನು ನಡೆಸಿಕೊಂಡ ರೀತಿಗೆ ಕಡೆಯಲ್ಲಿ ಹೆಣ್ಣಿಗೆ ಬೆಂಕಿಯೇ ಮದ್ದಾಗಿ ಕಂಡಿದೆ. ಆ ಬೆಂಕಿ ಇನ್ನೂ ಹೆಣ್ಣನ್ನು ಸುಡುತ್ತಿದೆ. ಇದಕ್ಕೆ ಅಗ್ನಿ ಆರಾಧಕರ ರಕ್ಷಕನಾದ ಚಿಮೂ ಉತ್ತರಿಸಬೇಕೆ ಹೊರತು ಮಲ್ಲಿಕಾ ಘಂಟಿಯಲ್ಲಾ. ರಾಮಾಯಣವನ್ನು ಓದಿಕೊಂಡು ನೋಡಿಕೊಂಡು ಬೆಳೆದ ಭಾರತೀಯ ಮನಸ್ಸು, ಇವತ್ತಿಗೂ ಹೆಣ್ಣಿನ ವಿಷಯದಲ್ಲಿ ಜವಾಬ್ದಾರಿಯಿಂದ ನಡೆದುಕೊಳ್ಳುವುದನ್ನು ಕಲಿತಿಲ್ಲ. ಇದಕ್ಕೆ ಪಿ.ಆರ್. ಭಟ್ ಎಂಬ ವಿಕೃತ ಭಟ್ಟನ ಮನಸ್ಥಿತಿಯೇ ಸಾಕ್ಷಿ. ಮಹಿಳೆಯ



ಜುಟ್ಟು ಹಿಡಿದು ರೇಪ್ ಮಾಡಬೇಕೆಂದು ಹೇಳುವ ಈತ ನಿಜಕ್ಕೂ ದುಶ್ಶಾಸನ ಅಕ್ರಮ ಸಂತಾನದ ಸಂತತಿಯವನು" ಎಂದು ಜುಟ್ಟಿಲ್ಲದ ಮಹಿಳೆಯರು ಪ್ರತಿಭಟಿಸಿದರಂತಲ್ಲಾ, ಥೂತ್ತೇರಿ!!

* * *

ಮಲ್ಲಿಕಾ ಘಂಟಿಯವರ ಮಾತನ್ನು ಗಂಭೀರವಾಗಿ ಪರಿಗಣಿಸಿ ಸರಿಯಾದ ಉತ್ತರ ಪಡೆಯಬೇಕೆಂದು ಹಠ ಹಿಡಿದಿದ್ದಾರಂತಲ್ಲಾ ಸಮಾಧಿ ಸಂಶೋಧಕ ಚಿಮೂ ಅದೇ ವಿ.ವಿ. ಕ್ಯಾಂಪಸ್ಸಿನ ನಿರಂಕುಶಮತಿಗಳ ವ್ಯಾಖ್ಯಾನದ ಪ್ರಕಾರ ರಾಮಾಯಣ ಹೆಣ್ಣಿನ ಗೋಳಾಗಿ, ಮಹಾಭಾರತ ಗಂಡಿನ ಗೋಳಿನಂತೆ ಕಂಡರೂ ಇಡೀ ಮಹಾಭಾರತದಲ್ಲಿ ಒಳಗೊಳಗೇ ಅತ್ತವರೆಲ್ಲಾ ಹೆಂಗಸರೇ ಅಂತಲ್ಲಾ, ನಮ್ಮ ಭೈರಪ್ಪನವರ ಪ್ರಕಾರ ಕಣ್ಣಿಲ್ಲದ ಧೃತರಾಷ್ಟ್ರ ದಾರಿ ತೋರಲೆಂದು ಕೈ ಹಿಡಿದುಕೊಂಡ ಯಾವ ಹೆಂಗಸನ್ನೂ ಬಿಡಲಿಲ್ಲ. ಎಣಿಸಿ ನೋಡಿದ ನೂರೊಂದು ಮಕ್ಕಳಿದ್ದವು. ಇನ್ನ ಕಣ್ಣಿದ್ದ ಪಾಂಡು ರಾಜನದೂ ಅದೇ ... ಅವನ ಮಗನಲ್ಲದ ಅರ್ಜುನನಂತೂ ಯಾವ ಊರಿಗೆ ಹೋಗಲಿ ಅಲ್ಲೊ... ಹೆಣ್ಣಿರಲೇಬೇಕು. ಹೀಗಾಗಿ ಹುಟ್ಟಿದ ಮಕ್ಕಳು ದೊಡ್ಡವರಾಗಿ ಬಂದು ಎದು... ನಿಂತು "ಅಪ್ಪಾ" ಎಂದಾಗ ಅರ್ಜುನ ಸಿಟ್ಟುಗೊಂಡು "ಯಾರೋ ನಿನ್ನ... ಎನ್ನುತ್ತಿದ್ದ. ನಕುಲ ಸಹದೇವರಂತೂ ಮದುವೆಯನ್ನೇ ಆಗಲಿಲ್ಲ. ... ಹಾಲು ಸಿಗುವಾಗ ಹಸು, ಎಮ್ಮೆ ಕಟ್ಟಿ ಹೈರಾಣಾಗುವುದು ಯಾಕೆ ಎಂಬಂ... ಅವರ ಬದುಕು. ಇದ್ದುದರಲ್ಲಿ ಧರ್ಮರಾಯ ಪರವಾಗಿಲ್ಲ. ಆದ... ಹೆಂಡತಿಯನ್ನೇ ಪಣಕ್ಕಿಟ್ಟು ಜೂಜಾಡಿದವನು. ಇಂತಹ ಘಟನೆ ಈವ... ಎಲ್ಲೂ ನಡೆದಿಲ್ಲ. ಆದರೂ ಆತ ಧರ್ಮರಾಯ, ನ್ಯಾಯವಂತ, ನೀತಿವ... ಹೀಗೆ ಹೆಣ್ಣನ್ನು ಭೋಗದ, ಜೂಜಿನ ವಸ್ತುವಿನಂತೆ ನಡೆಸಿಕೊಂಡ ಮಹಾಭಾ... ದಾಯಾದಿ ಕಲಹವನ್ನು ಹೊತ್ತು ತಂದಿದೆ. ಇವತ್ತಿಗೂ ಹಳ್ಳಿಗಳ ದಾಯ... ಕಲಹದಲ್ಲಿ ಇದರ ವಾಸನೆಯಿದೆ. ಗಂಡನಿದ್ದೂ ಇಲ್ಲದಂತೆ ಬದು... ಮಹಾಭಾರತದ ಮಹಿಳೆಯರು, ಯುದ್ಧದಲ್ಲಿ ಗಂಡಸರೆಲ್ಲಾ ಸತ್ತ ನಂತರ ... ಹಾಗೇ ಇದ್ದರಂತಲ್ಲಾ. ಇದೆಲ್ಲಾ ಗೊತ್ತಿದ್ದೂ "ಮಲ್ಲಿಕಾ ಘಂಟಿ ಗಂಭೀರ... ಉತ್ತರಿಸಬೇಕು" ಎನ್ನುವ ಚಿಮೂಗೆ ಛೀಮಾರಿ ಹಾಕಬೇಕಾದದ್ದು ನ... ಕರ್ತವ್ಯವಲ್ಲವೆ ಎಂದರಂತಲ್ಲಾ, ಥೂತ್ತೇರಿ!!

* * *

ನಮ್ಮ ಅಪರೂಪದ ರಾಜಕಾರಣಿ ವೈ.ಎಸ್.ವಿ. ದತ್ತ ಚಿಕ್ಕಮಗಳ... ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಬೀರೂರಿನಲ್ಲಿ ಮಾಡಿ, ಯ... ಸ್ವಾಮೀಜಿಯನ್ನೂ ಕರೆದಿರಲಿಲ್ಲವಂತಲ್ಲಾ. ಅಷ್ಟೇ ಅಲ್ಲದೆ, ವೇದಿಕೆಯ ಮೇ... ಯಾವ ರಾಜಕಾರಣಿಯನ್ನೂ ಕೂರಿಸದೆ ಹೊಸ ಇತಿಹಾಸವನ್ನೇ ಬರೆದರಂ... ಸಮ್ಮೇಳನಾಧ್ಯಕ್ಷ ಪದವಿಯನ್ನು ಅತ್ಯಂತ ಸಂಕೋಚದಿಂದಲೇ ಒಪ್ಪಿಕೊ... ರಹಮತ್ ತರೀಕೆರೆಯವರು ಮೆರವಣಿಗೆಯಲ್ಲಿ ಒಲ್ಲದ ಮನಸ್ಸಿನಿಂದ ... ವಯಸ್ಸಿನಲ್ಲಿ ಮದುವೆಯಾಗುತ್ತಿರುವ ಗಂಡಿನಂತೆ ಕತ್ತು ಬಗ್ಗಿಸಿ ನಡೆಯುತ್ತಿ... ದತ್ತ ಥೇಟ್ ಮಧುಮಗನಂತೆ ಸಾಬರು ಕಂಡಕೂಡಲೇ ಕೈಬೀಸಿ ಮೆರವ... ಮುಖದಲ್ಲಿ ಸಾಗುತ್ತಿದ್ದರಂತಲ್ಲಾ. ಚಿಕ್ಕಮಗಳೂರ ಕಡೆಯಿಂದ ಬಂದಿದ್ದ ... ಪತ್ರಕರ್ತರು ಇಡೀ ಸಮ್ಮೇಳನದ ವಾರಸುದಾರರಂತೆ ವರ್ತಿಸಿದರಂ... ಅದೇನಾದರಾಗಲಿ, ದತ್ತನ ಸಾಹಸವನ್ನು ಇಡೀ ಕನ್ನಡ ಸಾಹಿತ್ಯ ಲೋ... ಗಂಭೀರವಾಗಿ ಪರಿಗಣಿಸಬೇಕಿದೆ. ಇತ್ತೀಚೆಗೆ ಎಲ್ಲೆಂದರಲ್ಲಿ ನಡೆಯುತ್ತಿ... ಸಾಹಿತ್ಯ ಸಮ್ಮೇಳನಗಳು ತಮ್ಮ ಸಾಹಿತ್ಯಕ ಮೌಲ್ಯಗಳನ್ನು ಬಿಟ್ಟುಕೊ... ಸಣ್ಣಪುಟ್ಟ ಸ್ವಾಮಿಗಳು, ಸುಡುಗಾಡು ಸಿದ್ಧರು, ಪುಡಿ ರಾಜಕಾರಣಿಗಳ... ವೇದಿಕೆಯಲ್ಲಿ ಕೂರಿಸಿ ಹಾಸ್ಯಗೋಷ್ಠಿಗಳನ್ನೇ ಏರ್ಪಡಿಸುತ್ತಿವೆ. ಇ... ಸಮಯದಲ್ಲಿ ದತ್ತನ ಧೈರ್ಯ ಮೆಚ್ಚುವಂತದ್ದೆ. ಈ ಹಿಂದೆ ಕಡೂರಿ... ಕೃಷ್ಣಮೂರ್ತಿ ಕಾಲದಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ, ಪಂಚಾಯ್ತಿ ಮ... ರಾಜಕಾರಣಿಯೊಬ್ಬ ಭಾಷಣ ಬಿಗಿಯುತ್ತ "ಇವತ್ತು ನಮ್ಮ ಕನ್ನಡ ಸಾಹಿತ... ಜಗಳ ಆಡದ ಬುಟ್ಟು, ಒಗ್ಗಟ್ಟಾಗಿ ಬರದ್ರೆ ಇನ್ನೂ ಒಂದು ಜಾನಪ...

ಮಳವಳ್ಳಿ ರೌಡಿ ಹಾವಳಿಗೆ ಬ್ರೇಕ್!

ುತ ಸೈಜಿನ ಸಿಟಿ ಮಳವಳ್ಳಿಯಲ್ಲಿ ಇತ್ತೀಚೆಗೆ ರೌಡಿ ಹಾವಳಿ, ಅಪರಾಧ ಚಟುವಟಿಕೆಗಳು ಹದ್ದುಮೀರಿ ್ದವು. ಬೃಹತ್ ಬೆಂಗಳೂರಿನ ಪಾತಕ ಕ್ರಿಮಿಗಳಿಂದ ಸೋಂಕಿತರಾದ ಸ್ಥಳೀಯ ಕ್ರಿಮಿನಲ್‌ಗಳ ಅಬ್ಬರದಿಂದಾಗಿ ಮ್ಮದಿಯಿಂದ ಬದುಕುವುದೇ ದುಸ್ತರವೆನಿಸುವ ವಾತಾವರಣ ನಿರ್ಮಾಣವಾಗಿತ್ತು. ಆದರೆ ಶಾಸಕ ರೇಂದ್ರಸ್ವಾಮಿಯವರ ಪ್ರಾಮಾಣಿಕ ಕಾಳಜಿ ಇವುಗಳಿಗೆಲ್ಲ ಬ್ರೇಕ್ ಹಾಕಿದೆ. ಈ ನಿಟ್ಟಿನಲ್ಲಿ ಅವರು ಮೊದಲು ಕೆಲಸವೆಂದರೆ ತನ್ನ ವ್ಯಾಪ್ತಿಯ ಅಷ್ಟೂ ಠಾಣೆಗಳಲ್ಲಿದ್ದ ಸುಂಗಣ್ಣ ಪೊಲೀಸ್ ಅಧಿಕಾರಿಗಳನ್ನು ಎತ್ತಂಗಡಿ ಖಡಕ್ ಆಫೀಸರ್‌ಗಳನ್ನು ಹಾಕಿಸಿಕೊಂಡದ್ದು. ಆ ಕಂತಿನಲ್ಲಿ ಬಂದವರೇ ಡಿವೈಎಸ್ಪಿ ಶಿವಕುಮಾರ್. ಯಾವ ಮುಲಾಜುಗಳಿಲ್ಲದೆ ಅಪರಾಧಿಗಳಿಗೆ ಪೊಲೀಸ್ ಬೂಟಿನ ರುಚಿ ತೋರಿಸುತ್ತಿದ್ದಾರೆ.

ುಗೂರು ವ್ಯಾಪ್ತಿಯ ಜೆಡಿಎಸ್ ಗ್ರಾ.ಪಂ. ಸದಸ್ಯ ನವೀನ ಎಂಬಾತನ ಹಾವಳಿ ವಿಪರೀತವಾಗಿತ್ತು. ನವೀನನ ರ್ಭಟ ಎಂತಹದ್ದೆಂದರೆ ಒಮ್ಮೆ ತನ್ನ ಮಾತು ಕೇಳಲಿಲ್ಲ ಎಂಬ ಕ್ಷುಲ್ಲಕ ಕಾರಣಕ್ಕೆ ಗ್ರಾ.ಪಂ. ಮಹಿಳಾ ೊಬ್ಬರಿಗೆ ತುಂಬಿದ ಸಭೆಯಲ್ಲೆ ವಾಚಾಮಗೋಚರ ನಿಂದಿಸಿದ್ದಲ್ಲದೆ 'ನನ್ನ ಕೆಲಸ ಮಾಡಿಕೊಡದಿದ್ದರೆ ನಿನಗೊಂದು ಣಿಸುತ್ತೇನೆ' ಎಂಬ ಬೆದರಿಕೆ ಹಾಕಿದ್ದ. ಅಷ್ಟಾದರೂ ಆ ಹೆಂಗಸು ಪೊಲೀಸ್ ಕಂಪ್ಲೆಂಟ್ ಕೊಟ್ಟಿರಲಿಲ್ಲ. ವರೆ ಹಲಗೂರು ಠಾಣೆಯ ಸಬ್‌ಇನ್ಸ್‌ಪೆಕ್ಟರ್‌ಗೇ ಆವಾಜ್ ಹಾಕಿಕೊಂಡು ಮೆರೆದಾಡುತ್ತಿದ್ದ. ಜೊತೆಗೆ ಲಿಯಾಕತ್ ಅಲಿ ಅಲಿಯಾಸ್ ಪಿಳ್ಳು ಎಂಬ ಪುಂಡ ಪಟಾಲಂ ಕಟ್ಟಿಕೊಂಡು ಪೊಲೀಸ್ ಠಾಣೆ ಮೇ ತಡರಾತ್ರಿಯವರೆಗೂ ರಾಜಾರೋಷವಾಗಿ ಗುಂಡು ಹಾಕುತ್ತಾ ಗಲಾಟೆ ಮಾಡುವಷ್ಟು ಮೀರಿದ್ದರು. ಪಕ್ಷದ ಅಧಿನಾಯಕರ ಕೃಪಾಕಟಾಕ್ಷ ನವೀನ ಹಾಗೂ ಪಿಳ್ಳು ಗ್ಯಾಂಗಿಗೆ ಇದ್ದುದ್ದರಿಂದ ಅವರ ಪುಂಡಾಟಿಕೆ ೇರಿತ್ತು.

ಳವಳ್ಳಿ ವಿಭಾಗಕ್ಕೆ ಡಿವೈಎಸ್ಪಿಯಾಗಿ ಶಿವಕುಮಾರ್ ಬಂದಿದ್ದೇ ತಡ ಅಂತಹ ನವೀನ ಮತ್ತು ಪಿಳ್ಳು ಪಟಾಲಂಗೆ ುಚಿ ತೋರಿಸಿ ಅವರ ರೌಡಿಸಂ ಅಟ್ಟಹಾಸಕ್ಕೆ ಬ್ರೇಕ್ ಬಿಗಿದಿದ್ದಾರೆ. ಈಗ ಕುಖ್ಯಾತ ರೌಡಿ ಜನರಲ್ ಾಜನ ಹೆಡೆಮುರಿ ಕಟ್ಟುವ ಮೂಲಕ ಮಳವಳ್ಳಿಯ ಜನ ನೆಮ್ಮದಿಯ ನಿಟ್ಟುಸಿರು ಬಿಡುವಂತೆ ಮಾಡಿದ್ದಾರೆ.


ಕ 'ಜನರಲ್ ಬಸವರಾಜ್' ಹೆಸರು ಟ್ಟುಕೊಂಡು ಹಾವಳಿ ಮಾಡಿಸುತ್ತಿದ್ದ. ಇವನ ಳ ನಿಯಂತ್ರಿಸಲಾಗದೆ ಖುದ್ದು ಮಳವಳ್ಳಿ ಪೊಲೀಸರೆ ಗಡೀಪಾರು ಮಾಡುವಂತೆ ಕಾರಿಗಳಿಗೆ ವಿನಂತಿಸಿಕೊಂಡಿದ್ದರು. ತಕ್ಕಮಟ್ಟಿಗೆ ಯವಾಗಿ ಮತ್ತು ಆರ್ಥಿಕವಾಗಿ ್ಥನಾಗಿರುವ ಜನರಲ್ ಬಸವರಾಜ ಪೊಲೀಸರಿಗೆ ಸಿನ್ನುತ್ತಿರಲಿಲ್ಲ ಎಂಬುದಕ್ಕೆ ಇದಕ್ಕಿಂತ ಸಾಕ್ಷಿ ಈ ಕುರಿತು ಜಿಲ್ಲಾಧಿಕಾರಿಗಳ ಲಯದಲ್ಲಿ ನಡೆದ ಎಂಎಜಿ (2) 29/2010 ುರು ವಿಚಾರಣೆಗೂ ಹಾಜರಾಗಿರಲಿಲ್ಲ. ವಿಧ ಪ್ರಕರಣಗಳಲ್ಲಿ ಪ್ರಮುಖ ಆರೋಪಿಯಾಗಿದ್ದರೂ 2008ರಿಂದ ಕೋರ್ಟ್ ಮೆಟ್ಟಿಲನ್ನೇ ಈತ ಹತ್ತಿರಲಿಲ್ಲ. ಬೇಸತ್ತು ಹೋದ ನ್ಯಾಯಾಲಯವೇ ಈತನನ್ನು ಬಂಧಿಸಿ ತರುವಂತೆ ಮಳವಳ್ಳಿ ಟೌನ್ ಪೊಲೀಸರಿಗೆ ಆದೇಶಿಸಿತ್ತು. ಆದರೂ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸುತ್ತಿದ್ದ ಬಸವರಾಜ ಸಣ್ಣ ಸುಳಿವೂ ಕೊಡದಂತೆ ಮಳವಳ್ಳಿಗೆ ಹೋಗಿಬಂದು ಮಾಡುತ್ತಲೇ ಇದ್ದ.

ಮುಚ್ಚಿದ ಮನೆಯಲ್ಲೇ ಅಂದರ್

ಪೊಲೀಸ್ ಮತ್ತು ನ್ಯಾಯಾಲಯಗಳಿಗೆ ಈತ ಅಜ್ಞಾತ ಆಸಾಮಿಯಾದರೂ ಮಳವಳ್ಳಿ ಸುತ್ತಮುತ್ತ ಇಸ್ಪೀಟ್ ಮತ್ತು ಹಫ್ತಾ ವಸೂಲಿ ದಂಧೆಯಲ್ಲಿ ಸಕ್ರಿಯನಾಗೇ ಇದ್ದ. ಅಲ್ಲದೆ ತನ್ನ ಸಹಚರರು, ತಂದೆ ಹಾಗೂ ಭಾವಂದಿರ ಜೊತೆ ಸತತವಾಗಿ ಸಂಪರ್ಕದಲ್ಲಿದ್ದ. ಬಂಧಿಸುವಂತೆ ನ್ಯಾಯಾಲಯದಿಂದ ಒತ್ತಡ ಇದ್ದುದರಿಂದ ಅವನ ತಂದೆ ಮತ್ತು ಭಾವಂದಿರ ಮೊಬೈಲ್‌ಗಳಿಗೆ ಕಿವಿಯಾನಿಸಿ ಕೂತಿದ್ದ ಡಿವೈಎಸ್ಪಿ ಶಿವಕುಮಾರ್‌ರ ಪೊಲೀಸ್ ಟೀಮು ಭರ್ಜರಿ ಬಲೆ ಬೀಸಿ ಕಾಯುತ್ತಿತ್ತು. ಆ ಬಲೆಗೆ ಜುಲೈ 22 ರಂದು ಬಸವರಾಜ ತಾನೇ ಬಂದು ತಗುಲಿಹಾಕಿಕೊಂಡಿದ್ದ.

ಆ ದಿನ ರೌಡಿ ಜನರಲ್ ಅಲಿಯಾಸ್ ಬಸವರಾಜು ಮಳವಳ್ಳಿಯಲ್ಲೇ ಇದ್ದಾನೆಂಬ ಖಚಿತ ಮಾಹಿತಿ ಪೊಲೀಸರಿಗೆ ಸಿಕ್ಕಿತ್ತು. ಸಕಲ ಸನ್ನದ್ಧರಾದ ಡಿವೈಎಸ್ಪಿ ಶಿವಕುಮಾರ್ ಹಾಗೂ ಸಿಪಿಐ ರಾಜೇಶ್ ನೇತೃತ್ವ ಮಳವಳ್ಳಿ ಪೊಲೀಸರ ತಂಡ ಗಂಗಾಮತಸ್ಥರ ಬೀದಿಯಲ್ಲಿರುವ ಬಸವರಾಜನ ಮನೆಯ ಮೇಲೆ ದಾಳಿ ಮಾಡಿದ್ದರು. ಆದರೆ ಬಸವರಾಜನ ಮನೆಗೆ ಬೀಗ ಹಾಕಿತ್ತು. ತಮಗೆ ಸಿಕ್ಕ ಮಾಹಿತಿಯನ್ನು ಶಪಿಸುತ್ತಾ ಮನೆಯಲ್ಲಿ ಯಾರೂ ಇಲ್ಲವೆಂದುಕೊಂಡ ಪೊಲೀಸರು ಇನ್ನೇನು ಹೊರಡಬೇಕೆನ್ನುವಷ್ಟರಲ್ಲಿ ಮನೆಯ ಒಳಗಿಂದ ಫ್ಯಾನ್ ಶಬ್ದ ಕೇಳಿಸಿತ್ತು. ಬೀಗ ಹಾಕಿರುವ ಮನೆಯಲ್ಲಿ ಫ್ಯಾನ್ ಶಬ್ದ ಬರಲು ಹೇಗೆ ಸಾಧ್ಯ? ಎಂಬ ಅನುಮಾನ ಪೊಲೀಸ್ ತಲೆಗಳನ್ನು ಹೊಕ್ಕುತ್ತಿದ್ದಂತೆಯೇ ಬೀಗ ಒಡೆದು ಮನೆಯೊಳಗೆ ನುಗ್ಗಿದಾಗ ರೌಡಿ ಬಸವರಾಜನ ತಂದೆ ಬಸಪ್ಪ ಹಾಗೂ ಭಾವಂದಿರು ಥರಗುಡುತ್ತಾ ನಿಂತಿದ್ದರು.

ರೌಡಿ ಬಸವರಾಜ್ ಎಲ್ಲಿ ಎಂದು ಪೊಲೀಸರು ವಿಚಾರಿಸಿದಾಗ ಅವನ ತಂದೆ, ಭಾವಂದಿರು 'ಆತ ಇಲ್ಲಿಗೆ ಬಂದೇ ಇಲ್ಲ'ವೆಂಬ ಚಂದಮಾಮನ ಕಥೆ ಕಟ್ಟಿದ್ದರು. ಪೊಲೀಸರಿಗೆ ಸುಳ್ಳಿನ ವಾಸನೆ ಹಿಡಿಯಲು ಬಹಳ ಸಮಯವೇನೂ ಬೇಕಾಗಲಿಲ್ಲ. ಅವರ ಬಳಿ ಇದ್ದ ಮೊಬೈಲ್ ಫೋನ್‌ಗಳನ್ನು ಚೆಕ್ ಮಾಡಿದಾಗ ರೌಡಿ ಜನರಲ್ ಫೋನ್ ಮಾಡಿದ ಕಾಲ್ ಹಿಸ್ಟರಿ ಸಿಕ್ಕಿತ್ತು. ಕೂಡಲೇ ಪೊಲೀಸರು ತಮ್ಮ ತಪಾಸಣೆಯನ್ನು ಮತ್ತಷ್ಟೂ ಚುರುಕುಗೊಳಿಸಿದ್ದರು. ಆಗ ಅದೇ ಮನೆಯ ಕೆಳಭಾಗದಲ್ಲಿದ್ದ ಮತ್ತೊಂದು ಮನೆಗೆ ಬೀಗ ಹಾಕಿದ್ದು ಪೊಲೀಸರ ಗಮನಕ್ಕೆ ಬಂದಿತ್ತು. ವಿಚಾರಿಸಿದಾಗ 'ಆ ಮನೆಯನ್ನು ಬೇರೆಯವರಿಗೆ ಬಾಡಿಗೆ ನೀಡಿದ್ದೇವೆ. ಅವರೆಲ್ಲಾ



ನರೇಂದ್ರಸ್ವಾಮಿ

ಊರಿಗೆ ಹೋಗಿದ್ದಾರೆ' ಎಂದು ಮತ್ತೊಂದು ಹಸೀ ಸುಳ್ಳನ್ನು ರೌಡಿ ಜನರಲ್‌ನ ಅಪ್ಪ ಹಾಗೂ ಭಾವಂದಿರು ಹರಿಬಿಟ್ಟಿದ್ದರು. ಅದಾಗಲೇ ಒಂದು ಮೋಸದ ಬೀಗ ಕಂಡಿದ್ದ ಪೊಲೀಸರು ಈಗ ಮತ್ತೊಂದು ಬೀಗದ ಕಥೆಯನ್ನು ನಂಬುವ ಸ್ಥಿತಿಯಲ್ಲಿ ಇರಲೇ ಇಲ್ಲ. ಬೀಗವನ್ನು ಒಡೆಯುವಂತೆ ಡಿವೈಎಸ್ಪಿ ಶಿವಕುಮಾರ್ ತಮ್ಮ ಸಿಬ್ಬಂದಿಗೆ ಹೇಳಿದ್ದರು. ಇದಿಷ್ಟೂ ವ್ಯವಹಾರಕ್ಕೆ ಕಿವಿಯಾನಿಸಿ ಒಳಗೇ ಕೂತಿದ್ದ ರೌಡಿ ಜನರಲ್‌ಗೆ ತಾನು ಪೊಲೀಸರಿಗೆ ಸಿಕ್ಕಿ ಬಿದ್ದಿರುವುದು ಖಾತ್ರಿಯಾಗಿತ್ತು. ಮತ್ತೇನಾದರು ಅತಿಬುದ್ಧಿವಂತಿಕೆ ತೋರಲು ಹೋದರೆ ಎನ್‌ಕೌಂಟರ್ ಹೆಣವಾಗುವ ಭೀತಿಯೂ ಅವನನ್ನು ಆವರಿಸಿತ್ತು. ಹಾಗಾಗಿ ಪೊಲೀಸರು ಬಾಗಿಲು ಮುರಿಯುವ ಮುನ್ನವೇ ತಾನೇ ಮನೆಯಿಂದ ಹೊರಗೆ ಬಂದು ಪೊಲೀಸರಿಗೆ ಶರಣಾಗಿದ್ದ.

■ ಮಂಡ್ಯ ನಾಗೇಶ್

ಥೂತ್ತೇರಿ

ವಡಿಬಹುದು" ಎಂದಿದ್ದ. ದತ್ತನ ಈ ಕ್ರಮದಿಂದ ದೆ ಇಂತಹ ಅನಾಹುತಗಳನ್ನು ಅವಾಯ್ಡ್ ಬಹುದಂತಲ್ಲಾ, ಥೂತ್ತೇರಿ!!

* * *

ರ್ಕಾವತಿಯಲ್ಲಿ ಅಕ್ರಮ ನಡೆದಿದೆ, ಅದಕ್ಕಾಗಿ ಸಿ.ಬಿ.ಐ. ಯೇ ಆಗಬೇಕೆಂದು ಶೆಟ್ಟರ ಬಿಜೆಪಿ ಟೀಮು ಳುತ್ತಿದ್ದರೆ, ಸಿದ್ದು ಟೀಮು ನ್ಯಾಯಾಂಗ ತನಿಖೆಯಾದರೆ ರಲ್ಲಾ ಸಿಕ್ಕಿ ಬೀಳುತ್ತೀರಿ ಎಂದು ಬೊಬ್ಬೆ ಡೆಯುತ್ತಿದೆಯಂತಲ್ಲಾ. ತಮಾಷೆಯ ಸಂಗತಿ ಎಂದರೆ ಕೇಂದ್ರ ಸರಕಾರದ ಕಾವಲಿನಲ್ಲಿದೆ. ಹಾಗಾಗಿ ಟಕದ ಕಾಂಗ್ರೆಗಳಿಗೆ ಪ್ರಾಣಸಂಕಟ. ಇನ್ನ ನ್ಯಾಯಾಂಗ ಕರ್ನಾಟಕ ಸರಕಾರದ ಸನಿಹದಲ್ಲೇ ಇದೆ. ಇದರಿಂದ ುಗಳಿಗೆ ನಡುಕ. ಹೀಗಿರಲಾಗಿ ಎರಡೂ ತನಿಖಾ ಗಳ ಜಗಳ ತಾರಕಕ್ಕೇರಿ ಕೊನೆಗೆ ಯಾವ ತನಿಖೆಯೂ ದೆ ಅರ್ಕಾವತಿಯ ಅತಂತ್ರ ಫಲಾನುಭವಿಗಳು ಮ್ಮಳವಾಗುವುದರ ಬದಲಾಗಿ ಅತಂತ್ರವಾಗುವಂತೆ ಾಂಗ ತನಿಖೆಯೇ ನಡೆಯಲಿದೆಯಂತಲ್ಲಾ. ಇನ್ನೂ ಷೆಯ ಸಂಗತಿಯೆಂದರೆ, ನಮ್ಮ ಎಣ್ಣೆಗಾಣದ ಶೆಟ್ಟರು ದ ಅಕ್ರಮ ಭೂ ಮಂಜೂರಾತಿಯಲ್ಲಿ ದಿದ್ದಾರಂತಲ್ಲಾ, ಆದರೂ ಶೆಟ್ಟರ ಧ್ವನಿ ನೋಡಿದರೆ ಮ್ಮ ಪ್ರಾಮಾಣಿಕರಿರಬಹುದೆಂಬ ಗುಮಾನಿ ಮೂಡಿದೆಯಲ್ಲಾ, ಬಿಜೆಪಿಗಳ ಕರಾಮತ್ತೆ ಅದು. ಭ್ರಷ್ಟತೆ, ಚಾರ, ಅಕ್ರಮ ಭೂ ವ್ಯವಹಾರದ ವಿಷಯದಲ್ಲಿ ದ ದನಿಯಲ್ಲಿ ಕೂಗುವುದು, ಈ ಕೂಗಿನ ಹೊಡೆತದಲ್ಲಿ ಅಕ್ರಮವನ್ನೇ ಮರೆತು ಬಿಡುವುದು. ಈ ಶೆಟ್ಟರು ಹಾಗೆಯೇ. ಎಂಬತ್ತು ಕೋಟಿ ರೂ. ಮೌಲ್ಯದ ್, ಎಕರೆ ಕೃಷಿಯೇತರ ಭೂಮಿಯನ್ನ ಭೂ ಜೂರಾತಿ ಕಾಯಿದ್ದೆಗೆ ವಿರುದ್ಧವಾಗಿ ಕೃಷಿಗಾಗಿ ಮಂಜೂರು ಿದ್ದಾರೆ. ಇಂತಹದೇ ಕೆಲಸವನ್ನು ಸಿದ್ದರಾಮಯ್ಯ ಏಕೆ ಡಿರಬಾರದು. ಅಪರಾಧ ಸಾಬೀತಾದರೆ ನಾನೂ ನೀನೂ ೇ ಅಲ್ಲವೆ. ಇದೇ ಅಲ್ಲವೆ ಆನಾದಿ ಕಾಲದಿಂದಲೂ ಾ. ಓಕೆ?- ಜೈ ಅರ್ಕಾವತಿ! ಥೂತ್ತೇರಿ!! ■

ಸರ್ ಗಂಗಾರಾಮ್, ಆಧುನಿಕ ಲಾಹೋರ್‌ನ ಪಿತಾಮಹ

ಜೊತೆಗಿರುವ ಜನರನ್ನು ಮನುಷ್ಯ ಕುಲದ ಸಂಬಂಧಿಗಳಂತೆ ನೋಡಲಾಗದ ಪರಿಸ್ಥಿತಿ ಸುತ್ತಲೂ ಮುತ್ತಿರುವುದು ವಿಷಾದ ಹುಟ್ಟಿಸುತ್ತಿದೆ. ಫೇಸ್‌ಬುಕ್‌ನಲ್ಲಿ ಮುಸ್ಲಿಮರ ಬಗ್ಗೆ, ಮಹಿಳೆಯ ಬಗ್ಗೆ 'ಸುಶಿಕ್ಷಿತ' ಸನಾತನಿಗಳು ಕಾರಿಕೊಳ್ಳುತ್ತಿರುವ ಪರಿ ಎಲ್ಲರಲ್ಲೂ ಅಷ್ಟೇ ದಿಗಿಲು ಹುಟ್ಟಿಸುತ್ತಿದೆಯೋ ಇಲ್ಲವೋ ಗೊತ್ತಾಗದೇ ತಳಮಳವಾಗುತ್ತಿದೆ. ಭಾರತ ಮತ್ತು ಪಾಕಿಸ್ತಾನ ವಿಭಜನೆಯ ಸಮಯವು ಮನುಷ್ಯರಲ್ಲಿ ಮನುಷ್ಯತ್ವದ ಬಗ್ಗೆಯೇ ಅನುಮಾನ ಹುಟ್ಟಿಸಿದ ಸಂದರ್ಭವಾಗಿತ್ತು. ಆ ಕಾಲದ ಒಂದು ಸಂಗತಿಯನ್ನು ಇಲ್ಲಿ ಕಾಣಿಸುವುದು ಸೂಕ್ತ.

ಸರ್ ಗಂಗಾರಾಮ್ (1851-1927) ವೃತ್ತಿಯಲ್ಲಿ ಒಬ್ಬ ಸಿವಿಲ್ ಇಂಜಿನಿಯರ್ ಆಗಿದ್ದು, ತನ್ನ ಕಾಲದ ಒಬ್ಬ ಮಾನವೀಯ ವ್ಯಕ್ತಿತ್ವದ ಹಣವಂತನೆಂದು ಖ್ಯಾತಿಯಾಗಿದ್ದರು. ಸಾಯುವ ಮುನ್ನ (1925) ರೆನಾಲ್ ಖುರ್ದ್‌ನಲ್ಲಿ ರೆನಾಲಾ ಹೈಡ್ರಲ್ ಪವರ್ ಪ್ಲಾಂಟ್‌ಅನ್ನು ಸ್ಥಾಪಿಸಿದ್ದರು.

ಪಂಜಾಬ್‌ನ ಲೋಕೋಪಯೋಗಿ ಸೇವೆಯಲ್ಲಿ ಕೆಲಕಾಲ ಸೇವೆ ಸಲ್ಲಿಸಿದ ನಂತರ 1873ರಲ್ಲಿ ಕೃಷಿ ಮಾಡಲು ಶುರು ಮಾಡಿದರು. ಸರ್ಕಾರದಿಂದ ಮಾಂಟ್ಗೊಮೆರಿ ಜಿಲ್ಲೆಯಲ್ಲಿ 50,000 ಎಕರೆಯಷ್ಟು ಬಂಜರು ಭೂಮಿಯನ್ನು ಭೋಗ್ಯಕ್ಕೆ ತೆಗೆದುಕೊಂಡು, ತನ್ನ ಸ್ವಂತ ಖರ್ಚಿನಲ್ಲಿ ನೂರಾರು ಮೈಲುಗಳ ದೂರದ ಜಲವಿದ್ಯುತ್ ಸ್ಥಾವರದಿಂದ ನೀರು ಹಾಯಿಸಿದರು. 3 ವರ್ಷಗಳಲ್ಲಿ ಅಲ್ಲಿ ಹಸಿರು ನಳನಳಿಸಿತು. ಇಡೀ ದೇಶದಲ್ಲಿ ಈ ಪ್ರಮಾಣದ ಖಾಸಗಿ ಪ್ರಯೋಗವನ್ನು ಯಾರೂ ಕೇಳಿರಲಿಲ್ಲ. ಸರ್ ಗಂಗಾರಾಮ್ ಇದರಿಂದ ಅಪಾರ ಹಣ ಸಂಪಾದಿಸಿದರು. ಸಂಪಾದನೆಯಲ್ಲಿ ಹೆಚ್ಚಿನ ಪಾಲನ್ನು ದಾನಧರ್ಮಗಳಿಗೆ ವಿನಿಯೋಗಿಸಿದ್ದು ಅವರ ವಿಶೇಷ.



ಪಂಜಾಬ್‌ನ ಗವರ್ನರ್ ಆಗಿದ್ದ ಸರ್ ಮಾಲ್ಕಂ ಹೈಲಿ ಇದನ್ನು ಬಣ್ಣಿಸಿದ್ದು ಹೀಗೆ: 'ಆತ ಒಬ್ಬ ಹೀರೋನಂತೆ ಗೆದ್ದ, ಸಂತನಂತೆ ಇತರರಿಗೆ ಕೊಟ್ಟ'. ಗಂಗಾರಾಮ್ ಇಂಜಿನಿಯರ್ ಆಗಿ ಮತ್ತು ಕೊಡುಗೈ ದಾನಿಯಾಗಿ ಎಲ್ಲರ ಮನಸ್ಸನ್ನು ಗೆದ್ದಿದ್ದರು.

ಲಾಹೋರ್‌ನ ಜನರಲ್ ಪೋಸ್ಟ್ ಆಫೀಸ್, ಲಾಹೋರ್ ಮ್ಯೂಸಿಯಂ, ಐಚಿಸನ್ ಕಾಲೇಜ್, ಮೇಯೋ ಸ್ಕೂಲ್ ಆಫ್ ಆರ್ಟ್ಸ್ (ಈಗಿನ ಎನ್‌ಸಿಎ), ಗಂಗಾರಾಂ ಆಸ್ಪತ್ರೆ, ಲೇಡಿ ಮೆಕ್‌ಲಗಾನ್ ಬಾಲಕಿಯರ ಪ್ರೌಢಶಾಲೆ, ವಿಶ್ವವಿದ್ಯಾಲಯದ ಕಾಲೇಜಿನ ರಸಾಯನಶಾಸ್ತ್ರ ವಿಭಾಗ, ಮೇಯೋ ಆಸ್ಪತ್ರೆಯ ಆಲ್ಬರ್ಟ್ ವಿಕ್ಟರ್ ವಿಭಾಗ, ಹೈಲಿ ವಾಣಿಜ್ಯ ಕಾಲೇಜು, ವಿಕಲಚೇತನರಿಗೆ ರವಿ ರಸ್ತೆ ಆಸ್ಪತ್ರೆ, ಮಾಲ್ ರಸ್ತೆಯ ಗಂಗಾರಾಂ ಟ್ರಸ್ಟ್‌ನ ಕಚೇರಿ, ಲೇಡಿ ಮೇನಾರ್ಡ್ ಕೈಗಾರಿಕಾ ಶಾಲೆ ಇವೆಲ್ಲವುಗಳನ್ನೂ ಗಂಗಾರಾಮ್‌ರೇ ವಿನ್ಯಾಸಗೊಳಿಸಿದ್ದರು ಮತ್ತು ಕಟ್ಟಿಸಿದ್ದರು. ಲಾಹೋರ್‌ನ ಅತ್ಯುತ್ತಮ ಬಡಾವಣೆಯಾಗಿದ್ದ ಮಾಡೆಲ್ ಟೌನ್‌ಅನ್ನು ಮತ್ತು ಪಠಾಣ್‌ಕೋಟ್ ಮತ್ತು ಅಮೃತಸರದ ನಡುವಿನ ರೈಲ್ವೇ ಹಳಿಯ ಕಾಮಗಾರಿಯೂ ಅವರದ್ದಾಗಿತ್ತು. ಇವುಗಳಲ್ಲಿ ಗಂಗಾರಾಮ್ ಆಸ್ಪತ್ರೆ, ಲೇಡಿ ಮೆಕ್‌ಲಗಾನ್ ಶಾಲೆ ಮತ್ತು ರೆನಾಲಾ ಖುರ್ದ್ ಪವರ್ ಹೌಸ್‌ಗೆ ತಮ್ಮ ಸ್ವಂತದ ಹಣ ಹಾಕಿದ್ದರು.

ತನ್ನ ವೃತ್ತಿಯಿಂದ 1903ರಲ್ಲಿ ಗಂಗಾರಾಮ್ ನಿವೃತ್ತರಾದರು. ಕೊನೆಗೆ 1927ರ ಜುಲೈ 10ರಂದು ಲಂಡನ್‌ನಲ್ಲಿ ತೀರಿಕೊಂಡರು. ಅಲ್ಲೇ ಅಂತ್ಯ ಸಂಸ್ಕಾರ ಮುಗಿಸಿ, ಚಿತಾಭಸ್ಮವನ್ನು ಭಾರತಕ್ಕೆ ತರಲಾಯಿತು. ಗಂಗಾನದಿಯಲ್ಲಿ ಅದನ್ನು ಬಿಟ್ಟು, ಲಾಹೋರ್‌ನ ರಾವಿ ನದಿಯ ದಂಡೆಯಲ್ಲಿ ಒಂದಷ್ಟನ್ನು ಹೂಳಲಾಯಿತು.


ಲಾಹೋರ್‌ನ ಮಾಲ್ ರಸ್ತೆಯಲ್ಲಿ ಗಂಗಾರಾಮ್‌ರ ಪ್ರತಿಮೆಯನ್ನೂ ನಿಲ್ಲಿಸಲಾಗಿತ್ತು. ಪ್ರಸಿದ್ಧ ಉರ್ದು ಲೇಖಕ ಸಾದತ್ ಹಸನ್ ಮಾಂಟೋ, ದೇಶ ವಿಭಜನೆಯ ಕುರಿತ ತನ್ನ ಕಥೆಗಳಲ್ಲಿ ಅದರ ಕುರಿತು ಬರೆದಿದ್ದಾರೆ. ಒಮ್ಮೆ ಲಾಹೋರ್‌ನ ಬೀದಿಗಳಲ್ಲಿ ಕೋಮು ದ್ವೇಷದಿಂದ ಉನ್ಮತ್ತರಾಗಿ ತಿರುಗುತ್ತಿದ್ದ ಗುಂಪು, ಹಿಂದೂಗಳ ಮೇಲೆ ದಾಳಿ ನಡೆಸಿ ಗಂಗಾರಾಮ್‌ರ ಪ್ರತಿಮೆಯ ಹತ್ತಿರಕ್ಕೆ ಬರುತ್ತಾರೆ. ಮೊದಲು ಪ್ರತಿಮೆಯತ್ತ ಕಲ್ಲುಗಳನ್ನು ತೂರುತ್ತಾರೆ. ನಂತರ ಅದರ ಮುಖಕ್ಕೆ ಡಾಂಬರು ಬಳಿಯುತ್ತಾರೆ. ಆ ನಂತರ ಒಬ್ಬಾತ ಹಳೆಯ ಚಪ್ಪಲಿಗಳದೊಂದು ಹಾರವನ್ನು ಮಾಡಿ, ಗಂಗಾರಾಮ್‌ರ ಪ್ರತಿಮೆಗೆ ಹಾಕಲು, ಮೇಲೆ ಹತ್ತುತ್ತಾನೆ.

ಅಷ್ಟರಲ್ಲಿ ಪೊಲೀಸರು ಬಂದು ಜನರನ್ನು ಚದುರಿಸಲು ಗೋಲೀಬಾರ್ ಮಾಡುತ್ತಾರೆ. ಪ್ರತಿಮೆಯನ್ನೇರಿದ್ದ ವ್ಯಕ್ತಿಗೆ ಕೆಳಕ್ಕೆ ಬಿದ್ದು ಪೆಟ್ಟಾಗುತ್ತದೆ. ಗಲಭೆ ಮಾಡುತ್ತಿದ್ದ ಗುಂಪಿನಲ್ಲಿದ್ದವರು ಕೂಡಲೇ ಕಿರುಚುತ್ತಾರೆ 'ಎತ್ತಿಕೊಳ್ಳಿ, ಆತನನ್ನು ಕೂಡಲೇ ಗಂಗಾರಾಮ್ ಆಸ್ಪತ್ರೆಗೆ ಸೇರಿಸಿ'. ■

ರಂಜನೆ ಬೋಧನೆ ಪ್ರಚೋದನೆ ಲಂಕೇಶ್


ಅತ್ಯಾಚಾರಿ ಭಟ್ಟನನ್ನು ಬಂಧಿಸಬೇಕು

ನರಹಂತಕ ನರೇಂದ್ರ ಮೋದಿ ಚುನಾವಣೆಯಲ್ಲಿ ಗೆದ್ದು ಪ್ರಧಾನಿ ಆಗಿದ್ದೇ ತಡ, ಆತನ ಹಿಂದೂತ್ವವಾದಿ ಬೆಂಬಲಿಗರ ಅಟ್ಟಹಾಸ ಎಲ್ಲೆಡೆ ಮಿತಿಮೀರಿದೆ. ಅದರಲ್ಲೂ ಅಂತರಜಾಲದಲ್ಲಿನ ಸಾಮಾಜಿಕ ತಾಣಗಳಲ್ಲಿ ಚಡ್ಡಿಗಳ ಅರ್ಭಟ ಲಂಗುಲಗಾಮಿಲ್ಲದೆ ಸಾಗಿದೆ. ಕೇಂದ್ರದಲ್ಲಿ ದೀನಾನಾಥ್ ಭಾತ್ರ ಎಂಬಾತ ಶಾಲಾ ಪಠ್ಯಗಳನ್ನು ಕೇಸರೀಕರಣ ಮಾಡಲು ಸಜ್ಜಾಗುತ್ತಿರುವಾಗಲೇ ಐಸಿಎಚ್‌ಆರ್ ಸಂಸ್ಥೆಗೆ ಮುಖ್ಯಸ್ಥನಾಗಿ ಮೋದಿ ಸರ್ಕಾರದಿಂದ ನೇಮಕಗೊಂಡಿರುವ ಸುದರ್ಶನ ರಾವ್ ಎಂಬಾತ ಜಾತಿವ್ಯವಸ್ಥೆಯನ್ನು ಕೊಂಡಾಡುತ್ತಿದ್ದಾನೆ. ತಮ್ಮವನೇ ಪ್ರಧಾನಿ ಆಗಿರುವಾಗ, ತಮ್ಮವರೇ ಅಧಿಕಾರದ ಸೂತ್ರ ಹಿಡಿದಿರುವಾಗ ತಮ್ಮ ಸಿದ್ಧಾಂತವನ್ನು ವಿರೋಧಿಸುವವರನ್ನು ಯಾಕೆ ಸುಮ್ಮನೆ ಬಿಡಬೇಕು ಎಂಬಂತೆ ಚೆಡ್ಡಿಗಳು ವರ್ತಿಸಲಾರಂಭಿಸಿದ್ದಾರೆ. ಇಡೀ ದೇಶವೇ ಹುಚ್ಚರ ಸಂತೆಯಂತೆ ಕಾಣುತ್ತಿದೆ.





ಇಂತಹ ಹುಚ್ಚರ ಸಂತೆಯಲ್ಲಿ ಕೆಲಕಾಲದಿಂದ ಸಕ್ರಿಯವಾಗಿರುವವನು ವಿ.ಆರ್.ಭಟ್ಟ ಎಂಬ ಕೋಮು ಕ್ರಿಮಿ. ತನ್ನನ್ನು ಲೇಖಕ, ಪತ್ರಕರ್ತ, ಗೀತ ರಚನೆಕಾರ, ಕಾರ್ಪೊರೇಟ್ ಟ್ರೈನರ್ ಎಂದೆಲ್ಲ ಕರೆದುಕೊಳ್ಳುವ ಈ ಭಟ್ಟ ಅಪ್ಪಟ ಕೋಮುವಾದಿ, ವಿಷ ಜಂತು. ತನ್ನ ಬ್ಲಾಗ್ ಮತ್ತು ಫೇಸ್‌ಬುಕ್ ಅಕೌಂಟಿನಲ್ಲಿ ಸಂಸ್ಕೃತದ ಶ್ಲೋಕಗಳನ್ನು ಪುಂಖಾನುಪುಂಖವಾಗಿ ಹರಿಬಿಡುವ ಈತ ಹಿಂದೂ ಧರ್ಮವನ್ನು ವಿರೋಧಿಸುವವರ ವಿರುದ್ಧ ಮಾತ್ರ ಅಸಹ್ಯ ಪದಗಳನ್ನು ಉಪಯೋಗಿಸುತ್ತಾನೆ. ಪ್ರಗತಿಪರರು, ಜಾತ್ಯತೀತರು, ಹಿಂದುಳಿದ ವರ್ಗಗಳು, ದಲಿತರು, ಮಹಿಳೆಯರು, ಎಡಪಂಥೀಯರು ಎಂದರೆ ಈತನಿಗೆ ಪರಮ ದ್ವೇಷ. ಅವರೆಲ್ಲರ ವಿರುದ್ಧ 'ಕಡಿ ಬಡಿ ಹೊಡಿ' ನಿಲುವನ್ನು ಹೊಂದಿರುವವನು.



ದೂರು ಕೊಡುತ್ತಿರುವ ಪ್ರಭಾ

ಇಂತಹ ಮನುಷ್ಯವಿರೋಧಿ ಭಟ್ಟನ ತದ್ವಿರುದ್ಧದ ನಿಲುವು ಪ್ರಭಾ ಎನ್ ಅವರದ್ದು.

ಅಪ್ಪಟ ಮಾನವತಾವಾದಿಯಾದ ಪ್ರಭಾ ಹಲವು ದಶಕಗಳಿಂದ ಮಹಿಳೆಯರ-ದಲಿತರ-ಶೋಷಿತರ ಉದ್ಧಾರಕ್ಕಾಗಿ ಪ್ರಾಮಾಣಿಕವಾಗಿ ಹಗಲೂ ರಾತ್ರಿ ಎನ್ನದೆ ದುಡಿಯುತ್ತಿರುವವರು. ಅವರು ಭಾರತ ಜ್ಞಾನವಿಜ್ಞಾನ ಸಮಿತಿಯಲ್ಲಿ ಸಕ್ರಿಯವಾಗಿರುವವರು. ಈ ಸಮಿತಿ ಹುಟ್ಟಿಕೊಂಡಿದ್ದು 1990 ರಲ್ಲಿ, ದೇಶದಲ್ಲಿ ಸಾಕ್ಷರತೆ ಮತ್ತು ವೈಜ್ಞಾನಿಕ ಮನೋಭಾವವನ್ನು ಹೆಚ್ಚಿಸಲೆಂದು ಎಡಪಂಥೀಯ ಸಂಘಟನೆಗಳು ಈ ಸಮಿತಿಯನ್ನು ಹುಟ್ಟು ಹಾಕಿದ್ದರು. ಅಂದಿನಿಂದ ಇವತ್ತಿನವರೆಗೂ ಆ ಸಮಿತಿ ದೇಶದಾದ್ಯಂತ ಕೆಲಸ ಮಾಡುತ್ತಾ ಬಂದಿದೆ.

ಇಂತಹ ಹಿನ್ನೆಲೆಯಿಂದ ಬಂದಿರುವ ಪ್ರಭಾ ಅವರು ಇತ್ತೀಚೆಗೆ ತಮ್ಮ ಫೇಸ್‌ಬುಕ್ ಪುಟದಲ್ಲಿ ಒಂದು ಅಭಿಪ್ರಾಯವನ್ನು ಮಂಡಿಸಿದ್ದರು. ಅದು ಹೀಗಿತ್ತು:

"ವೈಜ್ಞಾನಿಕ ಸಂಶೋಧನೆಗಳನ್ನು ನಡೆಸುವಾಗ ನೇರ ರಾಸಾಯನಿಕ ಪರಿಣಾಮಗಳ ಕಾರಣಗಳಿಗೋ ಇಲ್ಲ ಅಡ್ಡ ಪರಿಣಾಮಗಳಿಗೋ ಅಪೂರ್ವ ವಿಜ್ಞಾನಿಗಳು ಬಲಿಯಾಗಿಬಿಡುತ್ತಾರೆ. ಪ್ರಾಜೆಕ್ಟುಗಳ ನಿರ್ಮಾಣದಲ್ಲಿ ತೊಡಗಿದ ಇಂಜಿನಿಯರುಗಳು ಎಷ್ಟೋ ಬಾರಿ ಪ್ರಾಣ ಕೊಟ್ಟಿರುತ್ತಾರೆ. ರೋಗಿಗಳ ಉಪಚಾರದಲ್ಲಿ ತೊಡಗಿದ ವೈದ್ಯರು ಹಲವು ಬಾರಿ ವಿವಿಧ ರೀತಿಯ ಸೋಂಕುಗಳಿಗೆ ಸಿಲುಕಿ ಮಡಿದಿರುತ್ತಾರೆ. ಪ್ರಾಜೆಕ್ಟು - ಕಾರ್ಖಾನೆಗಳಲ್ಲಿ ದುಡಿಯುವ ಕಾರ್ಮಿಕರ ಸಾವುಗಳಂತೂ ಸಂಪ್ರದಾಯವೇ ಆಗಿಹೋಗಿವೆ. ಹೊಲಗದ್ದೆಗಳಲ್ಲಿ ದುಡಿಯುವ ರೈತರು-ಕೂಲಿಕಾರರ ಮರಣಗಳು ದೈನಂದಿನ ಧಾರಾವಾಹಿಗಳೇ ಆಗಿಬಿಟ್ಟಿವೆ. ಇವರೆಲ್ಲರ ಪರಿಶ್ರಮದಿಂದ ಜಗತ್ತಿಗೊಂದು ನಾಗರಿಕ ಸ್ಥಾನ-ಮಾನ ಸಿಕ್ಕಿದೆ.

ಆದರೆ, ಹುಲುಕಡ್ಡಿ ನಾರಿನ ಪ್ರಯೋಜನವನ್ನೂ ಸಮಾಜಕ್ಕೆ ದಕ್ಕಿಸಿಕೊಡದ ಈ ಅನುತ್ಪಾದಕ ಪುರೋಹಿತಶಾಹಿ ಇವರೆಲ್ಲರ ಜುಟ್ಟನ್ನ ಇಂದಿಗೂ ತನ್ನ ಕಪಿಮುಷ್ಟಿಯಲ್ಲಿ ಒಟ್ಟಿಗೆ ಹೇಗೆ ಹಿಡಿದಿಟ್ಟುಕೊಂಡಿದೆ ನೋಡಿ... ಶಾಲಾ-ಕಾಲೇಜುಗಳ ಶಂಕುಸ್ಥಾಪನೆಗೆ ಇವರ ಗಂಟೆ ನುಡಿಯಬೇಕು, ಆಸ್ಪತ್ರೆಗಳ ಉದ್ಘಾಟನೆಗೆ ಇವರ ಪೂಜಾಕೈಂಕರ್ಯ ಬೇಕು, ಪ್ರಾಜೆಕ್ಟುಗಳಂತು ಇವರ ಉಪಸ್ಥಿತಿಯಲ್ಲಿಯೇ ಗುದ್ದಲಿಪೂಜೆ ನೆರವೇರಿಸಿಕೊಳ್ಳಬೇಕು, ಮುಖ್ಯಮಂತ್ರಿಗಳು-ಪ್ರಧಾನ ಮಂತ್ರಿಗಳೂ ಇವರಿಂದ ನೈವೇದ್ಯ ಪಡೆದೇ, ಮೊದಲು ಇವರಿಂದ ಕಂಕಣ ಕಟ್ಟಿಸಿಕೊಂಡೇ ಕುರ್ಚಿ ಏರಬೇಕು. ಎಲ್ಲಾ ಬಿಡಿ. ವಿಜ್ಞಾನಿಗಳ ನೂರಾರು ವರ್ಷಗಳ ಪರಿಶ್ರಮದ ಫಲವಾಗಿ ಉದಯಿಸಿರುವ ಕ್ಷಿಪಣಿಗಳನ್ನು ಉಡಾಯಿಸಲೂ ಇವರ ಹೋಮ-ಹವನ ಬೇಕು. ಇವುಗಳನ್ನು ನೋಡಿದಾಗ ಮನಸ್ಸು ಮುದುಡಿ ಹೋಗುತ್ತದೆ. ಶ್ರಮಸಂಸ್ಕೃತಿಗೆ, ವೈಜ್ಞಾನಿಕ ಚಿಂತನೆಗೆ ಬೆಲೆ

>>>>13ನೇ ಪುಟಕ್ಕೆ

ಕುವೆಂಪು ಅವರನ್ನೂ ಲೇವಡಿ ಮಾಡುತ್ತಾನೀತ

"ಕುವೆಂಪು ಕನ್ನಡ ನಾಡು ಕಂಡ ಅತ್ಯುತ್ತಮ ಕವಿ, ಎರಡನೆ ರಾಷ್ಟ್ರಕವಿ, ಜ್ಞಾನಪೀಠ ಪ್ರಶಸ್ತಿಯನ್ನು ಪಡೆದವರು. 'ವಿಶ್ವಮಾನವ' ಪರಿಕಲ್ಪನೆಯನ್ನೂ ಸಾಹಿತ್ಯದ ಮೂಲಕ ಸಮಾಜಕ್ಕೆ ತಲುಪಿಸಿದವರು" ಎಂದೆಲ್ಲ ಯಾರೇ ಎಷ್ಟೇ ಕೊಂಡಾಡಲಿ, ಪುರೋಹಿತಶಾಹಿಗಳಿಗೆ ಅವರನ್ನು ಕಂಡರಾಗದು. ಕುವೆಂಪು ಬದುಕಿದ್ದಾಗಿನಿಂದಲೂ ಅವರ ವಿರುದ್ಧ ವಿಪ್ರೋತ್ತಮರು ಕೆಂಡಕಾರುತ್ತಲೇ ಬಂದಿದ್ದಾರೆ.



ಅಂತಹವಲ್ಲಿ ಈ ಅತ್ಯಾಚಾರಿ ಭಟ್ಟನೂ ಒಬ್ಬ. ಆತ ಕುವೆಂಪು ಬಗ್ಗೆ ತನ್ನ ಬ್ಲಾಗ್‌ನಲ್ಲಿ ಹೀಗೆ ಬರೆದಿದ್ದಾನೆ:

"ಇಂದು ಹೇಳಿಕೇಳಿ 'ಬುದ್ಧಿಜೀವಿಗಳ'ಕಾಲ. ಪುರೋಹಿತ ಎಂಬುದರ ಅರ್ಥವೇ ಗೊತ್ತಿಲ್ಲದ ಅನೇಕರು ಪಂಕ್ತಿಭೇದ ಮಾಡಿದರು ಎಂಬ ಕಾರಣಕ್ಕೆ 'ಪುರೋಹಿತಶಾಹಿ' ಎನ್ನುತ್ತಾರೆ. ಅಯ್ಯಪ್ಪ ಭಕ್ತರ ಮಡಿ-ವ್ರತ ಇವುಗಳನ್ನೆಲ್ಲಾ ಒಪ್ಪಿಕೊಳ್ಳುವ ಆ ಜನರಿಗೆ ಪುರೋಹಿತರ ವಂಶಗಳ ಮೇಲೆ ಮಾತ್ರ ಕಣ್ಣು! ತಮ್ಮ ವ್ರತ ಕೆಟ್ಟು ಹೋಗುತ್ತದೆ ಎಂಬ ಕಾರಣಕ್ಕೆ ಅವರು ಪ್ರತ್ಯೇಕ ಊಟದ ಸಾಲಿನಲ್ಲಿ ಕುಳಿತರೆ, ಅವರಿಗೆ 'ಸ್ಪೆಶಲ್ ಊಟ' ಬರುತ್ತದೆ-ತಮಗೆ ಸಾದಾ ಊಟ ಬರುತ್ತದೆ ಎಂಬ ಭಾವನೆ! ಇದನ್ನೆಲ್ಲ ಹುಟ್ಟಿಸಿದ ಮಹಾನ್ ಸಾಹಿತಿಗಳಲ್ಲಿ ಬಹುದೊಡ್ಡ 'ಮೇಧಾವಿ'ಯೆಂದರೆ ಕುವೆಂಪು.

ಕುವೆಂಪು ಸಾಹಿತ್ಯದಲ್ಲಿ, ಕವನಗಳಲ್ಲಿ ಅದರ ವಾಸನೆ ಢಾಳಾಗಿ ಘಳಿಡುತ್ತದೆ! ಅವರು ಬರೆದ 'ನೂರು ದೇವರನೆಲ್ಲಾ ನೂಕಾಚೆ ದೂರ' ಎಂಬ ಹಾಡೇ ಸಾಕು. ಅರ್ಥವಾದವರೂ ಒಪ್ಪಿದರು, ಅರ್ಥವಾಗದವರೂ ಒಪ್ಪಿದರು. ಸಿ.ಅಶ್ವತ್ಥ್ ಥರದ ದಡ್ಡ ಶಿಖಾಮಣಿಗಳು ಅದನ್ನೇ ಹಾಡಿ ಕುಣಿದರು! ಭೇಶ್ ಭೇಶ್.

ಕಾಳಿದಾಸ ಕುರುಬನಾಗಿರಲಿಲ್ಲ, ಜನ ಹಾಗೆ ಕಥೆಕಟ್ಟಿದ್ದಾರೆ ಎಂದು ಬರೆದರೆ ಕೆಲವರು ಕೂಗುತ್ತಾರೆ, ಇನ್ನು ಕೆಲವರು ಹಾರುತ್ತಾರೆ, ಮತ್ತೆ ಕೆಲವರು ಕಚ್ಚುತ್ತಾರೆ, ಇನ್ನು ಕೆಲವರು ಬೆಚ್ಚುತ್ತಾರೆ! ಆದರೆ ಸತ್ಯ ಸುಳ್ಳಾಗುವುದು ಸಾಧ್ಯವಿಲ್ಲ; ಯಾಕೆಂದರೆ ಅದು ಇತಿಹಾಸ!"

ಇಂತಹ ಭಟ್ಟನನ್ನು ಸಿದ್ದರಾಮಯ್ಯನವರ ಸರ್ಕಾರ ಜೈಲಿಗೆ ದಬ್ಬುವುದೆಂದು? ಇದು ನಾಡಿನ ಪ್ರಜ್ಞಾವಂತರೆಲ್ಲರ ಪ್ರಶ್ನೆ.

ಮುಸಲ್ಮಾನರ ವಿರುದ್ಧ ಕಾರಿಕೊಂಡಿರುವ ಭಟ್ಟ

ಮೊನ್ನೆಮೊನ್ನೆಯವರೆಗೂ ಈ ವಿಕೃತ ವಿ.ಆರ್.ಭಟ್ಟ ಯಾರೆಂದು ಚೆಡ್ಡಿವಲಯದ ಹೊರಗೆ ಯಾರಿಗೂ ಗೊತ್ತಿರಲಿಲ್ಲ, ಆತ ಸಾಮಾಜಿಕ ಕಾರ್ಯಕರ್ತೆ ಪ್ರಭಾ ಅವರಿಗೆ 'ಅತ್ಯಾಚಾರ' ಬೆದರಿಕೆ ಹಾಕಿದ ನಂತರ ಆತ ಎಲ್ಲರಿಂದ ಉಗಿಸಿಕೊಳ್ಳಲಾರಂಭಿಸಿದ. ಆತನನ್ನು ಬಂಧಿಸಬೇಕೆಂಬ ಕೂಗ ರಾಜ್ಯಾದ್ಯಂತ ಕೇಳಿಬರಲಾರಂಭಿಸಿತು.


ನನ್ನ ಮೂರ್ನಾಲ್ಕು ಈಮೇಲ್ ಅಕೌಂಟುಗಳಿಗೆ ಬರುವ ಮೆಸ್ಸೇಜುಗಳನ್ನು ನೋಡುವ ನಾನು ಫೇಸ್‌ಬುಕ್ ಅಕೌಂಟಿಗೆ ಬರುವ ಮೆಸ್ಸೇಜುಗಳನ್ನು ಗಮನಿಸುವುದಿಲ್ಲ. ಆದರೆ ಮೊನ್ನೆ ಈತನ ಬಗ್ಗೆ ಫೇಸ್‌ಬುಕ್‌ನಲ್ಲಿ ಚರ್ಚೆ ನಡೆಯುತ್ತಿದ್ದರಿಂದ ಯಾರಾದರೂ ಈತನ ಬಗೆಗಿನ ಮಾಹಿತಿಯನ್ನು ಮೆಸೇಜ್ ಮಾಡಿರಬಹುದೆಂದು ಮೆಸ್ಸೇಜ್ ಬಾಕ್ಸ್ ನೋಡಿದೆ.

ಅಚ್ಚರಿ ಎಂಬಂತೆ ಭಟ್ಟನ ಬಗ್ಗೆ ಇತರರಿರಲಿ, ಸ್ವತಃ ಭಟ್ಟನೇ ಜುಲೈ 14ರಂದು ನನಗೊಂದು ಮೆಸ್ಸೇಜ್ ಕಳುಹಿಸಿದ್ದ. ಅದು ಮುಸಲ್ಮಾನರನ್ನು ಕುರಿತ ಮೆಸ್ಸೇಜ್ ಆಗಿತ್ತು.

ಈತ ಎಂತಹ ಆರೆಸ್ಸೆಸ್ ಸಿದ್ಧಾಂತಿ ಎಂದರೆ ಈತನ ದೇಹದ ಪ್ರತಿ ಕಣದಲ್ಲೂ ಹಿಂದೂತ್ವ ತುಂಬಿಕೊಂಡಿದ್ದು ಅವನಲ್ಲಿ ಇತರರ ಬಗ್ಗೆ ಸಹಾನುಭೂತಿ ಇರಲಿ, ಮನುಷ್ಯತ್ವಕ್ಕೆ ಜಾಗವೇ ಇಲ್ಲದಂತಾಗಿದೆ. ಅದು ಆತ ಕಳುಹಿಸಿರುವ ಮೆಸ್ಸೇಜ್‌ನಲ್ಲೂ ವ್ಯಕ್ತವಾಗಿದೆ. ಅದು ಹೀಗಿದೆ:

"ಅತ್ಯಂತ ಶಾಂತ ಧರ್ಮವೆಂದು ಮುಸಲ್ಮಾನರು ಹೆಮ್ಮೆಯಿಂದ ಹೇಳಿಕೊಳ್ಳುವ ಈ ಮತಧರ್ಮ ಜಗತ್ತನ್ನು ಬಿಟ್ಟು ಹೋಗಬೇಕು. ಅಲ್ಲಿಯವರೆಗೆ ಯಾರಿಗೂ ನೆಮ್ಮದಿಯಿರಲು ಸಾಧ್ಯವೇ ಇಲ್ಲ. ಈ ಮತಧರ್ಮದ ಅನುಯಾಯಿಗಳು ಕಣ್ಣಿದ್ದೂ ಕುರುಡರು, ಕಿವಿಯಿದ್ದೂ ಕಿವುಡರು, ಬಾಯಿದ್ದೂ ಮೂಕರು, ಮೂಗಿದ್ದೂ ನಿರಾಘ್ರಾಣಿಗಳು. ಹತ್ತು ಇಂದ್ರಿಯಗಳಿದ್ದೇನು ಪ್ರಯೋಜನ? ಮನಸ್ಸೆಂಬ ಹನ್ನೊಂದನೆಯ ಇಂದ್ರಿಯದ ಸೂತ್ರ ವ್ಯಾಪ್ತಿಯನ್ನೇ ಅರಿಯದ ಗಾಢಾಂಧಕಾರಿಗಳು. ತಮ್ಮಲ್ಲೇ ಕೆಲವರು ನಡೆಸುತ್ತಿರುವ ಎಲ್ಲಾ ಕ್ರೂರ ಮತ್ತು ಅಮಾನುಷ ಕೃತ್ಯಗಳನ್ನೆಲ್ಲಾ 'ಅಲ್ಲಾಹುವಿನ ಇಚ್ಛೆ' ಎಂದು ಒಂದೇ ಮಾತಿನಲ್ಲಿ ಸಮರ್ಥಿಸಿಕೊಳ್ಳುವ ರಾಕ್ಷಸರು. ಮಾನವೀಯತೆ ಎಂದರೇನು ಎಂಬುದನ್ನೇ ಅರಿಯದೇ, ಯಾರೋ ಒಬ್ಬಾತ ಹೇಳಿದ ಷರಿಯತ್ತುಗಳನ್ನೇ ಪರಿಪಾಲಿಸುವ ಸಲುವಾಗಿ ಜಗತ್ತಿನಾದ್ಯಂತ ಇರುವ ಜನರನ್ನು ತಮ್ಮ ಹಾದಿಗೆ ತಾವಿರಲು ಬಿಡದೇ ಬಲವಂತದಿಂದ ಮತಾಂತರಿಸುವ ಹುನ್ನಾರವುಳ್ಳ ಕೊಳೆತ ಹುಣ್ಣಿನ ಮನಸ್ಸಿನವರು. "ತಿನ್ನುವ ಆಹಾರಗಳಲ್ಲಿ ಬದಲಾವಣೆ ತಂದುಕೊಳ್ಳಿ ಉದ್ಧಾರವಾಗ್ತೀರಿ" ಅಂದರೆ "ನಮ್ಮ ಆಹಾರಕ್ಕೂ ಹಿಂದೂ ಮತಾಂಧರು ಕಲ್ಲು ಹಾಕುತ್ತಾರೆ" ಎಂದು ಆರೋಪಿಸುವ ಜನ. ಒಂದಾನೊಂದು ಕಾಲಕ್ಕೆ ಯಾವ ಕೆಟ್ಟ ಘಳಿಗೆಯಲ್ಲಿ ಕೇರಳದ ರಾಜ ಇವರಿಗೆ ಆಸರೆ ನೀಡಿದನೋ ತಿಳಿಯದು, ಅಂದಿನಿಂದ ದೇಶದ ಗ್ರಹಗತಿಗೆ ಕಲಿ ಕಾಲಿಟ್ಟಿದ್ದು ನಿಜ! ದೇಶದಲ್ಲಿ ಎಲ್ಲೇ ನೋಡಿ, ನಡೆಯುವ ಬಹುತೇಕ ಕುಕೃತ್ಯಗಳ ಹಿಂದೆ ಮಾಸ್ಟರ್ ಮೈಂಡ್ ಎನಿಸಿಕೊಳ್ಳುವವರು ದನ ತಿನ್ನೋ ಸಾಬಿಗಳು. ಹೀಗಾಗಿ ಹಿಂದೂ ಸನಾತನಿಗಳು ಎಚ್ಚೆತ್ತುಕೊಳ್ಳಬೇಕು. ಅವರ ಶಾಂತ ಮತಧರ್ಮ ಅವರವರ ಮನೆಗಳ ಒಳಗೇ ಅವರು ಆಚರಿಸಿಕೊಳ್ಳಲಿ. ಭಾರತದಲ್ಲಿ ಗೋವನ್ನು ಕಡಿಯುವುದು, ಬಾಂಬ್ ಹಾಕುವುದು, ಜೆಹಾದ್-ಲವ್ ಜೆಹಾದ್ ಮೂಲಕ ಮತಾಂತರಿಸುವುದು, ಬುರ್ಖಾ ತೊಡುವುದು, ಮಸೀದಿಗಳಲ್ಲಿ ಮೈಕಿಟ್ಟು ಕೂಗುವುದು ಇದನ್ನೆಲ್ಲ ಆದಷ್ಟು ಶೀಘ್ರ ನಿಲ್ಲಿಸಬೇಕು. ಜಗತ್ತಿನಲ್ಲಿ ಎಂದು ಈ ಮತಧರ್ಮ ಅಳಿದುಹೋಗುತ್ತದೋ ಅಂದಿಗೆ ಶಾಂತಿ ನೆಲೆಸುತ್ತದೆ; ಅಲ್ಲಿಯವರೆಗೂ ಮಾನವರು ಶಾಂತಿ- ನೆಮ್ಮದಿಯಿಂದ ಜೀವಿಸಲು ಸಾಧ್ಯವೇ ಇಲ್ಲ."

ತಾನು ಪ್ರತಿಪಾದಿಸುವ ಸನಾತನ ಹಿಂದೂ ಧರ್ಮದ ಬಗ್ಗೆ ಟೀಕೆ ಅಲ್ಲ, ಕಿಂಚಿತ್ ವಿಮರ್ಶೆಯನ್ನೂ ಸಹಿಸದ ಭಟ್ಟ ಪರ ಧರ್ಮದ ಬಗ್ಗೆ ಮಾತ್ರ ಲಂಗುಲಗಾಮಿಲ್ಲದೆ ಕಾರಿಕೊಂಡಿದ್ದಾನೆ. ಮಾತ್ರವಲ್ಲ ಇದೇ ಮೆಸ್ಸೇಜನ್ನು ಆತ ಇತರರಿಗೂ ಕಳುಹಿಸಿರುವ



ಸಾಧ್ಯತೆ ಇದೆ. ಅಂದರೆ ಈತ ಫೇಸ್‌ಬುಕ್ ಎಂಬ ಅಂತರಜಾಲದ ಮೂಲಕ ಕೋಮು ವೈಶಮ್ಯವನ್ನು ಹಬ್ಬುವ, ಶಾಂತಿಯನ್ನು ಕದಡುವ ಕುತಂತ್ರವನ್ನು ಮಾಡುತ್ತಿದ್ದಾನೆ.

ಈಗ ಭಟ್ಟ ನನಗೆ ಕಳುಹಿಸಿದ್ದ ಮೆಸ್ಸೇಜ್‌ಅನ್ನು ಡಿಲೀಟ್ ಮಾಡಿದ್ದಾನಾದರೂ ಅದರ ಪ್ರತಿಯನ್ನು ನಾನು ಇಟ್ಟುಕೊಂಡಿದ್ದೇನೆ. ನಾಳೆ, ಶುಕ್ರವಾರ ಆತನ ವಿರುದ್ಧ ದೂರು ನೀಡಲಿದ್ದೇನೆ. ಇದು ನಮ್ಮ ಲಂಕೇಶ್ ಬಳಗದ ನಿರ್ಧಾರ.


ರಾಜ್ಯದ ಪ್ರಜ್ಞಾವಂತರ, ಜಾತ್ಯತೀತರ, ಶಾಂತಿಪ್ರಿಯರ ಬೆಂಬಲ ನಮ್ಮ ಬಳಗಕ್ಕೆ ಇರಲಿ ಎಂದು ಆಶಿಸುತ್ತೇವೆ.

● ಗೌರಿ

ಮಲ್ಲಿಕಾ ಘಂಟಿ ವಿರುದ್ಧವೂ ಒಡಕಾರಿದ ಚೆಡ್ಡಿಗಳು



...ಮಂಪು ವಿಶ್ವವಿದ್ಯಾಲಯದ ಕುಲಸಚಿವೆಯಾಗಿರುವ ...ಬರಹಗಾರ್ತಿ ಮಲ್ಲಿಕಾ ಘಂಟಿಯವರು ಇತ್ತೀಚೆಗೆ ...ಲ್ಲಿ ಎನ್.ಎಸ್.ಯು.ಐ ಸಂಘಟನೆಯು ...ರ ಮೇಲಿನ ಲೈಂಗಿಕ ದೌರ್ಜನ್ಯ ತಡೆಗಟ್ಟುವ ... ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ



...ಸಿ ಹಲವು ಮಾತುಗಳನ್ನು ಆಡಿದ್ದರು. ಅಂದಿನ ...“ಅತ್ಯಾಚಾರ, ಶೋಷಣೆ ಪುರಾತನಕಾಲದಿಂದಲೂ ...ಸಮಸ್ಯೆ. ಈಗ ಆಧುನಿಕ ಸಮಸ್ಯೆಯಾಗಿ ಕಾಡುತ್ತಿದೆ. ... ಬಿಟ್ಟು ಇನ್ನೂ ಕೆಲವರು ಆಧುನಿಕ ಭಾರತಕ್ಕೆ ... ಪುರಾಣದಲ್ಲಿನ ದುರ್ಯೋಧನ, ದುಶ್ಯಾಸನರು ...ಲ್ಲಿ ಇನ್ನೂ ಜೀವಂತವಾಗಿದ್ದಾರೆ. ಸೀತೆಯ ಅಗ್ನಿ ...ಮತ್ತು ದ್ರೌಪದಿಯ ವಸ್ತ್ರಾಪಹರಣ ಮಹಿಳೆ ಮೇಲಿನ ...ಕ್ಕೆ ಉದಾಹರಣೆಗಳು. ಪುರಾಣ ಬಿಟ್ಟು ಆಧುನಿಕ ... ಬಂದರೆ ಮಾತ್ರ ನಾಗರಿಕರಾಗಿ ಬದುಕಬಹುದು” ...ಹೇಳಿದರೆಂದು ಹಲವು ನ್ಯೂಸ್ ಚಾನೆಲ್ ಸುವರ್ಣ ...ಗಳು ವರದಿ ಮಾಡಿದ್ದವು ಮತ್ತು ಆ ವರದಿಯನ್ನು ...ಅಂತರಜಾಲದಲ್ಲೂ ಪ್ರಕಟಿಸಿತ್ತು.

...ನ್ನು ಕಂಡು ಅತ್ಯಾಚಾರಿ ಭಟ್ಟನ ಮನೋಸ್ಥಿತಿಯನ್ನೇ ...ಹೊಂದಿರುವ ಶಂಕರ್ ಬಿ ಗೌಡ ಎಂಬಾತ ಪ್ರತಿಕ್ರಿಯಿಸಿರುವುದು ಹೀಗೆ (ಅಕ್ಷರ ದೋಷಗಳ ಸಮೇತ ಆತನ ವಿಕೃತ ಭಾಷೆಯನ್ನು ಹಾಗೆಯೇ ನೀಡಲಾಗಿದೆ): “ಜನ ನಿನಗೆ ಚಾಪಲಿಯಲಿ ಒಡೆಯುವುಧು ಗರೆಂಟೀ.....ತು ಮುಂಡೆ........ಪಾಪಿ ಬೇವಾರ್ಸಿ......ಏನೇ ನೀನು ರಾಮಾಯನಧ ಬಗೆ ತಿಳಿದು ಕೊಂಡಿಧಿಯ....ಹಲ್ಕಾ ಬೇವಾರ್ಸಿ...... ನಿನ ಮಹಿಳೆ ಎಂಧು ಕಾರ್ಯುವುಧಕೆ ಲಾಯಕಿಲ್ಲ....ನೀನು ದೊಡ್ಡ ವೇಶ್ಯೆ....ತು ನಿನ ಮುಕಾಕೆ ಬೆಂಕಿ ಹಕ್ಕ.....ಕಾಂಗ್ರೆಸ್ ಪಕ್ಷಕೆ ಕರೆಕ್ಟ್ ಆಗಿಧಿಯ.....ಯಾರಾ ಹತಿರ ನೀನು ಮಲಗಿಧೆ ಡಗಾರ್....ಬೇವಾರ್ಸಿ.....ನಿನಗೆ ಎಸ್ಟು ಗಂಡಂಧಿರು...... ಇವಳಿಗೆ ಏನು ಬಂತು ರೋಗ......ಕಾಂಗ್ರೆಸ್ ಪಕ್ಷಕೆ ಸರಿಯಾಧ ಸೂರ್ಪನಿಕೆ......ಇವಳನು ಮನೆಗೆ ಕಳಿಸಬೇಕು...........ಇವಳು ಅಧೆ ಪೋಸ್ಟ್‌ನ್ಲಿ ಇಧಾರೆ ಹೆಣ್ಣು ಮಾಕಳ್ಳನು ಮಾರಿಬಿಡುತಳೆ......ಇವಳ ವಿರುಧಾ ಸರಕಾರಕೆ ಕಂಪ್ಲೇಂಟ್ ಮಾಡಬೇಕು....”

ಸುವರ್ಣಾ ನ್ಯೂಸ್ ಕೂಡ ಇಂತಹ ಕಾಮೆಂಟ್‌ಗಳನ್ನು ನಿಯಂತ್ರಿಸದೆ ಅವನ್ನೆಲ್ಲ ಹಸಿಹಸಿಯಾಗಿ ಪ್ರಕಟಿಸಿದೆ.

ಅಂದಹಾಗೆ ಈ ಶಂಕರ್ ಬಿ ಗೌಡ ಎಂಬಾತ ಯಾವುದೋ ಕೆಲಸವಿಲ್ಲದ ಪೋಕರಿ ಪಡ್ಡೆಯಲ್ಲ, ಬದಲಾಗಿ ಮಧ್ಯವಯಸ್ಕನಾದ ಈತ ಓರ್ವ ಸುಶಿಕ್ಷಿತ ಮೆಕಾನಿಕಲ್ ಇಂಜಿನಿಯರ್! ಸೇಂಟ್ ಜೋಸೆಫ್ಸ್ ಹೈಸ್ಕೂಲಿನಲ್ಲಿ ಓದಿದ್ದ ಈತ ಕಾಸ್ಮೋಪಾಲಿಟನ್ ನಗರವಾದ ಬೆಂಗಳೂರಿನ ನಿವಾಸಿ!! ಇದೆಲ್ಲಕ್ಕಿಂತ ಮುಖ್ಯವಾಗಿ ತಾನು ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಕೆಲಸ ಮಾಡುತ್ತಿರುವುದಾಗಿ ತನ್ನ ಫೇಸ್‌ಬುಕ್‌ನಲ್ಲಿ ಹೇಳಿಕೊಂಡಿದ್ದಾನೆ. ಈತನಡಿ ಕಲಿಯುವುದಕ್ಕೆ ಹೋಗುವ ಮಕ್ಕಳ ಪಾಡನ್ನು ಯೋಚಿಸಿದರೇ ಹೆದರಿಕೆ ಆಗುವುದಿಲ್ಲವೆ?

‘ಅತ್ಯಾಚಾರಿ’ ಭಟ್ಟನ ತರಹ ಈ ‘ಬೇವರ್ಸಿ’ ಗೌಡನೂ ಆರೆಸ್ಸೆಸ್ ಭಕ್ತನೇ. ಈತ ತನ್ನ ಫೇಸ್‌ಬುಕ್‌ನಲ್ಲಿ ಆರೆಸ್ಸೆಸ್ ಬಗ್ಗೆ ಹೀಗೆ ದಾಖಲಿಸಿದ್ದಾನೆ: “ನಮ್ಮ ದೇಶದ ಮೇಲೆ ತೀವ್ರ ಜಾಗರಣೆ ಇಟ್ಟಿರುವ ಸಂಘಟನೆಯೇ ಆರೆಸ್ಸೆಸ್!”

ಭಟ್ಟ ಮತ್ತು ಗೌಡನನ್ನು ನೋಡಿದ ನಂತರ ಆರೆಸ್ಸೆಸ್ ಅದೆಂತಹ ಭಯಾನಕ ಕ್ರಿಮಿಗಳನ್ನು ಹುಟ್ಟುಹಾಕುತ್ತಿದೆ ಎಂಬುದು ಅರ್ಥವಾಗುತ್ತದಲ್ಲವೇ? ■

ಸಿದ್ದು ವಿರುದ್ಧವೂ ಚೀರಾಡಿದ



ಕಳೆದ ವರ್ಷ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಮಣ್ಣುಮುಕ್ಕಿ ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿದ್ದೇ ತಡ, ಅತ್ಯಾಚಾರಿ ಭಟ್ಟನ ಖಾಕಿ ಚೆಡ್ಡಿಯಲ್ಲಿ ಉರಿಹತ್ತಿಕೊಂಡಿತು. ಅದರಲ್ಲೂ ಸಿದ್ದರಾಮಯ್ಯನವರು ಬಡವರಿಗೆಂದು ‘ಅನ್ನ ಭಾಗ್ಯ’ ಯೋಜನೆಯನ್ನು ಘೋಷಿಸಿದ್ದೇ ತಡ ಭಟ್ಟ ಕೆಂಡಕಾರಲು ಶುರುಮಾಡಿದ.

ಆತನ ಟೀಕಾ ಪ್ರವರ ಹೀಗಿತ್ತು:

““ಕುಳಿತು ಉಂಡರೆ ಕುಡಿಕೆ ಹೊನ್ನು ಸಾಲದು” ಎಂಬ ಗಾದೆಯನ್ನು ನಮ್ಮ ಪೂರ್ವಜ-ಪ್ರಾಜ್ಞರು ಮಾಡಿಟ್ಟು ಹೋದರು, ಅದರಂತೇ ರೂಪಾಯಿಗೆ ಕೆಜಿ ಅಕ್ಕಿ ಕೊಡುವ ಅಥವಾ ಪಡೆಯುವ ಕಾರ್ಯ ಎಲ್ಲಿಯವರೆಗೆ ಶಾಶ್ವತವಾಗಿದ್ದೀತು? ಅಂತಹ ಯೋಜನೆಗಳನ್ನು ಜಾರಿಯಲ್ಲಿಡಲು ವಿದೇಶೀಯ ಮೂಲಗಳಿಂದ ಸರಕಾರ ಪಡೆಯುವ ಸಾಲದಿಂದ ಭಾರತ ಎಂದಿಗೆ ಮುಕ್ತವಾದೀತು?! ಅಥವಾ ಸಾಲದ ಶೂಲ ದೇಶದ ಬೆನ್ನೆಲುಬಿಗೇ ನಾಟಿ ದೇಶ ಮರಳಿ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವ ಸ್ಥಿತಿ ಬಂದೀತೇ? ಗೊತ್ತಿಲ್ಲ, ಆಳಸಿಗಳಾಗಿ ಬದಲಾಗುವ ಜನರನ್ನು ಮತ್ತೆ ಕೆಲಸಗಳತ್ತ ಗಮನ ಹರಿಸುವಂತೇ ಮಾಡುವುದು ಸರಕಾರಕ್ಕೆ ಸಾಧ್ಯವೇ? ಉತ್ತರವಿಲ್ಲ, ನಮ್ಮ ದುಡಿಮೆಯನ್ನು ನಾವು ಮಾಡಿಕೊಳ್ಳಬೇಕು, ನಮ್ಮ ಅನ್ನವನ್ನು ನಾವೇ ಸಂಪಾದಿಸಿಕೊಳ್ಳಬೇಕು ಎಂಬ ಭಾರತೀಯ ಮೂಲ ಸಂಸ್ಕೃತಿಯ ಸಂದೇಶವನ್ನೇ ಕಡೆಗಣಿಸಿ, ದೇಶೋದ್ಧಾರದ ನೆಪವೊಡ್ಡಿ, ಕೆಲಸಿಗರಲ್ಲಿ ಮೈಗಳ್ಳತನ ಹೆಚ್ಚಿಸುತ್ತಿರುವ ಆಳರಸರಿಗೆ, ಭವಿಷ್ಯದ ದಿನಗಳ ದೂರಾಲೋಚನೆ ಇಲ್ಲವೆಂಬುದಂತೂ ಸ್ಪಷ್ಟ; ಇದೇ ಗತಿಯ-ಇದೇ ಸ್ಥಿತಿಯ-ಇದೇ ರೀತಿಯ ಯೋಜನೆಗಳು ಮುಂದರಿದರೆ, ದೇಶ ಮುಂದೊಮ್ಮೆ ಅನುಭವಿಸಲಿಕ್ಕಿದೆ: ತುಂಬಲಾರದ ನಷ್ಟ!” ಇದಾದ ನಂತರ ಸಿದ್ದು ಸರ್ಕಾರ ಮುಸಲ್ಮಾನರಿಗೆ ಶಾದಿ ಭಾಗ್ಯ ಯೋಜನೆಯನ್ನು ಪ್ರಕಟಿಸಿದ್ದು ಈ ಭಟ್ಟನಲ್ಲಿ ಎಂತಹ ಉಗ್ರ ಕೋಪ ಹುಟ್ಟಿ ಹಾಕಿತು ನೋಡಿ:

“ಸಿದ್ದು ಸರ್ಕಾರ ಇದನ್ನೊಂದು ಮಾಡುವುದು ಬಾಕಿ ಇತ್ತು! ಪಾಪ ಬೆಳಗ್ಗೆ ಬೆಳಗ್ಗೆ ಎದ್ದು ಗಂಟಲು ಹರಿದ ಹಾಗೆ (ಇನ್ನೂ ಹೇಳಬೇಕೆಂದರೆ ಸಾಮಾನು ಕತ್ತರಿಸಲ್ಪಟ್ಟ ಹಂದಿಯ ಹಾಗೆ) ಕೂಗಿ ಎಲ್ಲರ ನೆಮ್ಮದಿ ಕೆಡಿಸುವವರಿಗೆ ಇಷ್ಟಾದರೂ ಬೇಡವೇ? ಛೆ ಛೆ ಕಾಂಗ್ರೈ ಸರ್ಕಾರ ಬದುಕಬೇಕಲ್ಲಾ?”

ಇದು ವಿಕೃತ ಮನಸ್ಸಲ್ಲದೆ ಇನ್ನೇನು? ■



‘ಕೈ-ಕಾಲುಗಳು ಮಟ್ಟಸವಾಗಿರಬಾರದು’

ಹಿಂದೂತ್ವವಾದಿಗಳನ್ನು ವಿರೋಧಿಸುತ್ತಾ ಬಂದಿರುವ ಹಿರಿಯ ಬರಹಗಾರ ಅನಂತಮೂರ್ತಿಯವರನ್ನು ಮೋದಿ ಪಡೆಯವರು ನಿಂದಿಸುತ್ತಿರುವುದು ಎಲ್ಲರಿಗೂ ಗೊತ್ತು. ಆದರೆ ಈ ವಿಕೃತ ಭಟ್ಟ ಅವರೆಲ್ಲರನ್ನೂ ಮೀರಿ ಒಂದು ಹೆಜ್ಜೆ ಮುಂದೆ ಹೋಗಿದ್ದಾನೆ.

ಆತ ಫೇಸ್‌ಬುಕ್‌ನಲ್ಲಿ ಅನಂತಮೂರ್ತಿ ಮತ್ತು ಯೋಗೀಶ್ ಮಾಸ್ಟರ್ ಬಗ್ಗೆ ಹೀಗೆ ಕಾರಿಕೊಂಡಿದ್ದಾನೆ:

“‘ಢುಂಢಿ’ಯನ್ನು ಅನುಮೋದಿಸುವ ಅನಂತಮೂರ್ತಿ ಮತ್ತು ಬಳಗದವರ ಬಗ್ಗೆ ಹೇವರಿಕೆ ಉಂಟಾಗಿದೆ. ಗಡ್ಡದ ಮೂರ್ತಿಗೆ ವಯಸ್ಸಾಗ್ತಾ ಆಗ್ತಾ ಅರಳುಮರುಳು ಬಂದುಬಿಟ್ಟದೆ. ಹಿಂದೂ ದೇವತೆಗಳ ವಿರುದ್ಧ ಹೀನಾಯವಾಗಿ ನಡೆದುಕೊಳ್ಳುವ ಜನರನ್ನು ಅನುಮೋದಿಸುವ ಅನಂತಮೂರ್ತಿ ಮತ್ತವರ ಬಾಲಬಡುಕರಿಗೆ ಜನ ಬುದ್ಧಿಕಲಿಸಬೇಕಾದ ಕಾಲ ಬಂದುಬಿಟ್ಟದೆ. ಯೋಗೇಶ್ ಮಾಸ್ಟರ್‌ನ ಜೊತೆಗೆ ಅನಂತಮೂರ್ತಿಯನ್ನೂ ಒಂದು ಸಲ ಒಳಗೆ ಇರಿಸಿದ್ದರೆ ಬಹಳ ಚೆನ್ನಾಗಿರುತ್ತಿತ್ತು ಎಂಬುದು ಕನ್ನಡ ಸಾಹಿತ್ಯ ಲೋಕದ ಬಲಪಂಥೀಯ ಮತ್ತು ಯಾವ ಪಂಥವೂ ಅಲ್ಲದ ನಡುಪಂಥೀಯರ ಅಂಬೋಣ.

ಎಲ್ಲರಿಗೂ ಗೊತ್ತಿರುವ ಅಪ್ಪಟ ಸತ್ಯಸಂಗತಿಯೆಂದರೆ ಕನ್ನಡದಕ್ಕೆ ಸಂದ ಮೊದಲ ನಾಲ್ಕು ಜ್ಞಾನಪೀಠಗಳನ್ನು ಬಿಟ್ಟರೆ ಮಿಕ್ಕುಳಿದವು ಕೇವಲ ಲಾಬಿಗಳಿಂದ ಹೊಡೆದುಕೊಂಡಂಥವು; ಪ್ರಶಸ್ತಿಗಳ ಲಾಬಿ ಇಲ್ಲಿ ಈ ರೀತಿ ಇರುವಾಗ ದೂರದ ಮ್ಯಾನ್ ಬುಕರ್ ಪ್ರಶಸ್ತಿಗಳಿಗೂ ಕೊಕ್ಕೆಹಾಕಿ ತಮ್ಮೆಡೆಗೆ ಬಗ್ಗುವಂತೇ ಶತಾಯಗತಾಯ ಪ್ರಯತ್ನಿಸುವ ಜನ ಇದ್ದಾರೆ. ಆಗಾಗ ಜನರ ಗಮನವನ್ನು ತಮ್ಮೆಡೆಗೆ ಸೆಳೆಯಲು ತಲೆಹಿಂಡುಕನಂತೇ ವರ್ತಿಸುತ್ತಾರೆ.

ಹಿಂದೂ ದೇವತೆಗಳ ವಿರುದ್ಧ ಬರೆಯುವ ಜನರ ಕೈಯನ್ನೋ ಕಾಲನ್ನೋ ಮೊದಲು ಸ್ಥಾನಪಲ್ಲಟಗೊಳಿಸಬೇಕೆಂಬುದು ಅಖಿಲ ಭಾರತ ಹಿಂದೂ ಮಹಾ ಸಭಾದವರ ಹೇಳಿಕೆ; ಇದಕ್ಕೆ ನನ್ನಂತಹ ಅನೇಕರ ಅನುಮೋದನೆಯಿದೆ. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಂಡು ಅಖಂಡ ಭಾರತದ ಮಹಾಸಮುದಾಯವೊಂದರ ಸಹಸ್ರಮಾನಗಳ ನಂಬಿಕೆಗಳಿಗೆ, ಭಾವನೆಗಳಿಗೆ ಧಕ್ಕೆಯನ್ನುಂಟುಮಾಡುವಾತ ಯಾರೇ ಆಗಲಿ ಆತನ ಕೈ-ಕಾಲುಗಳು ಮಟ್ಟಸವಾಗಿರಬಾರದು ಎಂಬುದೇ ಹಲವರ ಅಭಿಪ್ರಾಯ. ಇದರಿಂದ ಹಲವರು ಪಾಠ ಕಲಿಯುತ್ತಾರೆ; ಮತ್ತೆ ಅಂತಹ ಇತಿಹಾಸ ಪುನರಾವರ್ತನೆಗೊಳ್ಳುವುದು ತಪ್ಪುತ್ತದೆ.

ಸುಮ್ನೇ ಕಣ್ಣೆ ಕಟ್ಟೆ ಕಾಡೇಗೂಡೇ ಆಡುತ್ತಾ ಜಾಮೀನಿನ ಮೇಲೆ ಕೇಸು ನಡೆಸಿ ಯೋಗೇಶ್ ಎಂಬ ಆ ತಲೆಹಿಡುಕನನ್ನು ಯಾವ ಶಿಕ್ಷೆಯನ್ನೂ ವಿಧಿಸದೇ ಬಿಟ್ಟುಬಿಡುತ್ತಾರೆ-ಇದಕ್ಕೆ ‘ಬುದ್ಧಿಜೀವಿಗಳಾ’ದ ಅನಂತಮೂರ್ತಿ ಬಳಗದ ಬೆಂಬಲವಿರುತ್ತದೆ. ಪ್ರಕೃತ ಕೇಸಿನಲ್ಲಿ ಜಾಮೀನಿನಲ್ಲಿ ಹೊರಗೆ ಬಂದ ಲೇಖಕ ಯೋಗೇಶ್ ಮಾಸ್ಟರ್ ಎಂಬಾತ ಹಿಂದೂ ಜನತೆಯಲ್ಲಿ ಸಾರ್ವಜನಿಕವಾಗಿ ಕ್ಷಮೆ ಕೇಳಬೇಕು, ಆತನ ‘ಢುಂಢಿ’ ಕೃತಿಯನ್ನು ಪ್ರಕಟಿಸಿದ ಸಂಸ್ಥೆಗೂ ದಂಡ ವಿಧಿಸಬೇಕು. ‘ಢುಂಢಿ’ಯ ಎಲ್ಲಾ ಪ್ರತಿಗಳನ್ನೂ ಸುಟ್ಟುಹಾಕಬೇಕು. ಮತ್ತೆ ಅಂತಹ ಕೃತಿಗಳು ಸಮಾಜದಲ್ಲಿ ಬರದಂತೇ ಹಿಂದೂ ಸಮಾಜದ ನೇತಾರರು ನೋಡಿಕೊಳ್ಳುವ ವ್ಯವಸ್ಥೆಯಾಗಬೇಕೆಂಬುದು ನಮ್ಮಂತಹ ಅನೇಕರ ಅಪೇಕ್ಷೆ ಮತ್ತು ನಿರೀಕ್ಷೆಯಾಗಿದೆ.”

ಇನ್ನೊಮ್ಮೆ ಇದೇ ಅನಂತಮೂರ್ತಿಯವರ ಬಗ್ಗೆ ಭಟ್ಟ ಹೀಗೆ ಆಶಿಸಿದ್ದಾನೆ: “ಅಜ್ಞಾನವೇ ಮೂರ್ತಿವೆತ್ತ ದೇಶಕ್ಕೆ ಭಾರವಾದ ‘ಅನಂತಮೂತಿ’ಗೆ ಶ್ರೀದೇವರು ಬಹುಬೇಗ ಟಿಕೆಟ್ ಕೊಟ್ಟು ಕರೆಸಿಕೊಳ್ಳಲಿ ಎಂದು ಪ್ರಜ್ಞಾವಂತರೆಲ್ಲ ಹಾರೈಸುತ್ತಿದ್ದಾರೆ. ಸುವರ್ಣ ನ್ಯೂಸ್‌ನಲ್ಲಿ ಆತನ ಹಲುಬುವಿಕೆಯನ್ನು ಕಂಡವರು ಕಲ್ಲುಹೊಡೆದು ಸಾಯಿಸದಿದ್ದರೆ ಸಾಕು!”

ಮೋದಿಯನ್ನು ವಿರೋಧಿಸುವವರಿಗೆಲ್ಲ “ಅನಂತಮೂರ್ತಿ ಎಂಬ ಪಡಪೋಶಿಯೇ ಚೋರಗುರು” ಎನ್ನುತ್ತಾನೆ ವಿಕೃತ ಭಟ್ಟ.

ಅನಂತಮೂರ್ತಿಯವರ ಬಗ್ಗೆ ಮಾತ್ರವಲ್ಲ ದೇವನೂರು ಮಹಾದೇವ ಅವರ ವಿರುದ್ಧವೂ ಈತ ಕೆಂಡಕಾರಿಕೊಂಡಿದ್ದಾನೆ. ಈ ವಿಪ್ರ ಭಟ್ಟನ ಪ್ರಕಾರ ದೇವನೂರರ ದೆ ಸೀಳಿದರೂ ‘ಅಕ್ಷರ ಜ್ಞಾನ ಹೊರಬೀಳುವುದಿಲ್ಲ’ವಂತೆ.

ಅನಂತಮೂರ್ತಿ, ದೇವನೂರು ಮತ್ತು ಇತರೆ ಹಿಂದುತ್ವ ವಿರೋಧಿಗಳಿಗೆ ಎಂತಹ ಪಾಠ ಕಲಿಸಬೇಕೆಂದೂ ಭಟ್ಟ ಸೂಚಿಸಿದ್ದಾನೆ. “ಸನಾತನ ಹಿಂದೂ ಸಾರ್ವಜನಿಕರು ಇಂಥವರನ್ನೆಲ್ಲಾ ಹಿಡಿದು ನಡುಬೀದಿಯಲ್ಲಿ ಅಡ್ಡಡ್ಡ ಕಟ್ಟಿಹಾಕಿ, ಮೈಸೂರು ರಸ್ತೆಯಲ್ಲಿ ಹರಿಯುವ ವೃಷಭಾವತಿ ನದಿಯ ನೀರಿನಿಂದ ಅಭಿಷೇಕ ಮಾಡಬೇಕು” ಎಂದು ಭಟ್ಟ ಕರೆ ಕೊಟ್ಟಿದ್ದಾನೆ.

ಇವನಿಗೆ ಎಂತಹ ಎಕ್ಕಡದಲ್ಲಿ ಬಡಿದರೆ ಬುದ್ಧಿ ಬಂದೀತು? ■

ಭಟ್ಟ ಮಾನಸಿಕ ರೋಗಿ

...ಲೇದರಿ ಪ್ರಭಾ ಅವರು ಫೇಸ್‌ಬುಕ್‌ನಲ್ಲಿ ವ್ಯಕ್ತಪಡಿಸಿದ್ದ ಅಭಿಪ್ರಾಯದ ಬಗ್ಗೆ ಅವಹೇಳನಕಾರಿ ಪ್ರತಿಕ್ರಿಯೆ ...ಪಿ.ಆರ್.ಭಟ್ಟ ಎಂಬವನ ಬಗ್ಗೆ ಚಂದ್ರಾಲೇ ಔಟ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಇದನ್ನು ...ಂದ ಪತ್ರಕರ್ತರೊಬ್ಬರು ನನಗೆ ಫೋನ್ ಮಾಡಿ “ಈ ದೂರಿನ ಹಿಂದೆ ನೀವಿದ್ದಿರಂತೆ ಹೌದಾ?” ಎಂದು ... ಇಂತಹ ಪ್ರಶ್ನೆ ಕೇಳುವವರಿಗೊಂದು ಸಣ್ಣ ಸ್ಪಷ್ಟನೆ:

...ರಿನ ಹಿಂದೆ ಅಲ್ಲ, ಮುಂದೆ ಇದ್ದೇನೆ. ಪ್ರಭಾ ಅವರನ್ನು ಬಲ್ಲ ನಾನು, ಅವರಿಗೆ ನಿನ್ನೆಯೇ ಫೋನ್ ಮಾಡಿದ್ದೆ. ...ಳಿಗ್ಗೆ ನಮ್ಮ ಕಚೇರಿಗೆ ಬಂದಿದ್ದರು. ನಾನೇ ದೂರು ಬರೆದು ಕೊಟ್ಟಿದ್ದೆ. ಸಂಬಂಧಿತ ಪೊಲೀಸ್ ಅಧಿಕಾರಿಗಳ ...ಮಾತನಾಡಿದ್ದೇನೆ, ಸೈಬರ್ ಅಪರಾಧ ವಿಭಾಗದ ಪೊಲೀಸ್ ಅಧಿಕಾರಿಯವರಿಗೂ ತಿಳಿಸಿದ್ದೇನೆ. ಇದು ಕೇವಲ ...ಬರ ಮಾನದ ಪ್ರಶ್ನೆಯಲ್ಲ, ಇದರಲ್ಲಿ ನಮ್ಮೆಲ್ಲರ ಮಾನದ ಪ್ರಶ್ನೆ ಇದೆ.

...ವ್ಯಕ್ತಿ ಮಾನಸಿಕ ರೋಗಿ ರೀತಿ ಕಾಣುತ್ತಿದ್ದಾನೆ. ನಾನು ವಿವೇಕಾನಂದರ ಬಗ್ಗೆ ... ಈತ ಕೆಟ್ಟದಾಗಿ ಪ್ರತಿಕ್ರಿಯಿಸಿದ್ದ, ನನ್ನನ್ನು ‘ತಲೆಕೆಟ್ಟವ, ತಲೆ ಹಿಡುಕ’ ...ಬರೆದು ಫೋನ್ ಮಾಡಿದ್ದ, ದೂರು ಕೊಡಬೇಕೆಂದಿದ್ದವನು ಸುಮ್ಮನಾದೆ. ...ೋಗ ಉಲ್ಬಣವಾದಂತಿದೆ. ಈತ ಯಾರನ್ನೋ ರೇಪ್ ಮಾಡುವ ಮೊದಲೇ ...ಕ್ಕೆ ನೀಡಿ ಗುಣಪಡಿಸುವುದು ಆತನ ಹಿತದೃಷ್ಟಿಯಿಂದಲೇ ಒಳ್ಳೆಯದು. ...ನ್ನು ಪೊಲೀಸರು ನೀಡಬೇಕು. ಈ ರೀತಿ ಸೋಷಿಯಲ್ ಮೀಡಿಯಾಗಳಲ್ಲಿ ...ಕಾರಿಯಾಗಿ ಬರೆಯುವವರ ವಿರುದ್ಧ ದಯವಿಟ್ಟು ಸ್ಥಳೀಯ ಪೊಲೀಸ್ ... ದೂರು ನೀಡಬೇಕೆಂದು ನನ್ನ ಕಳಕಳಿಯ ಕೋರಿಕೆ. ಪೊಲೀಸರು ...ಸ್ಪಂದಿಸದೆ ಹೋದರೆ ಅದನ್ನೇ ಸೋಷಿಯಲ್ ಮೀಡಿಯಾ ಮೂಲಕವೇ ...ತಿಸಿ.



• ದಿನೇಶ್ ಅಮಿನ್ ಮಟ್ಟು

ಹಿರಿಯರಾದ ಎಚ್‌ಎಲ್‌ಕೆ ಅವರನ್ನೂ ಬಿಡದ ಭಟ್ಟ




ಕಳೆದ ವರ್ಷ ಮಂಡ್ಯದಲ್ಲಿ ನಡೆದ ಸಭೆಯೊಂದರಲ್ಲಿ ಈ ನಾಡಿನ ಪ್ರಜ್ಞಾವಂತರು ಮೆಚ್ಚುವ ಚಿಂತಕರಾದ ಹಿರಿಯ ಜೀವಿ ಎಚ್.ಎಲ್. ಕೇಶವಮೂರ್ತಿಯವರು ಮಾತನಾಡಿ " ಗುಜರಾತಿನಲ್ಲಿ ನರಮೇಧ ನಡೆಸಿದ ನರೇಂದ್ರ ಮೋದಿಗಿಂತ ಆದಿ ಶಂಕರಾಚಾರ್ಯ ದೊಡ್ಡ ಕೊಲೆಗಡುಕ. ಒಂಬತ್ತನೆ ಶತಮಾನದ ಆದಿ ಶಂಕರಾಚಾರ್ಯ ಅವರನ್ನು ಹಿಂದೂ ಧರ್ಮ ಪುನರುತ್ಥಾನ ಮಾಡಿದ ಮಹಾನ್ ದಾರ್ಶನಿಕ ಎಂದು ಹಲವರು ಬಣ್ಣಿಸುತ್ತಾರೆ. ಆದರೆ, ವಾಸ್ತವದಲ್ಲಿ ಶಂಕರಾಚಾರ್ಯ ಅಂದಿನ ಕಾಲದಲ್ಲೇ ಸಾವಿರಾರು ಬೌದ್ಧರನ್ನು ಕೊಲೆ ಮಾಡಿಸಿದ್ದಲ್ಲದೆ ಬೌದ್ಧಸ್ತೂಪಗಳನ್ನು ನಾಶಪಡಿಸಿದ್ದರು. ಎಲ್ಲೆಡೆ ಹಿಂದೂ ಧರ್ಮ ಸ್ಥಾಪನೆ, ಪುನರುತ್ಥಾನ ಹೆಸರಿನಲ್ಲಿ ಅನ್ಯಾಯ ಎಸಗಲಾಗಿತ್ತು, ಒಂದು ಧರ್ಮದ ಉದ್ಧಾರಕ್ಕಾಗಿ ಇನ್ನೊಂದು ಧರ್ಮ ನಾಶಪಡಿಸುವುದು ಎಷ್ಟು ಸರಿ?" ಎಂದಿದ್ದರು.

ಶಂಕರಾಚಾರ್ಯನನ್ನು ಕೇಶವಮೂರ್ತಿಯವರು ವಿಮರ್ಶಿಸಿದ್ದು ಭಟ್ಟನಿಗೆ ಸರಿಕಾಣಲಿಲ್ಲ, ಎಲ್ಲಿಯ 'ಶ್ರೇಷ್ಠ ಬ್ರಾಹ್ಮಣ' ಶಂಕರಾಚಾರ್ಯ, ಎಲ್ಲಿಯ 'ನೀಚ ಶೂದ್ರ' ಕೇಶವಮೂರ್ತಿ ಎನ್ನಿಸಿರಬೇಕು ಆತನಿಗೆ. ಆಗ ಈ ಉತ್ತಮ ಜಾತಿಯ ಬ್ರಾಹ್ಮಣ ಭಟ್ಟ ಕೇಶವಮೂರ್ತಿಯವರ ವಿರುದ್ಧ ಕೆಂಡಕಾರಿಕೊಂಡಿದ್ದು ಹೀಗೆ:

"ಮಹಾತ್ಮರ ಬಗ್ಗೆ ಪ್ರಸಿದ್ಧ ವ್ಯಕ್ತಿಗಳ ಬಗ್ಗೆ ಇಲ್ಲದ್ದನ್ನು ಹೇಳಿ ಗುಲ್ಲೆಬ್ಬಿಸಿ, ಗಾಳಿಯಲ್ಲಿ ತಾವೊಂದಷ್ಟು ಕುಖ್ಯಾತರಾಗುವುದು ನವಯುಗದ ಕೆಲವರ ಜಾಯಮಾನ. ಕಳೆದ ವರ್ಷ ಅವನ್ಯಾರೋ ಬಿಕನಾಸಿ ಪ್ರೊ.ಭಗವಾನಂತೆ, ಅಂವ ಶಂಕರರ ಬಗ್ಗೆ ಇಲ್ಲದ್ದನ್ನು ಬರೆದ. ಈಗ ಇವನ್ಯಾರೋ ಕೇಶವಮೂರ್ತಿಯಂತೆ ಬರೆದಿದ್ದಾನೆ. ಇವರನ್ನೆಲ್ಲ ಪ್ರೊಫೆಸರ್ ಅಂತ ಕರೆಯುವುದು ಸರಸ್ವತಿಗೆ ಮಾಡುವ ಅಪಮಾನ. ಇಂತ ಹುಚ್ಚು ಕುನ್ನಿಗಳನ್ನು ಹಚಗುಟ್ಟಬೇಕೇ ಹೊರತು ಇವರನ್ನೆಲ್ಲ ಎಂಟರ್‌ಟೇನ್ ಮಾಡಬಾರದು. ಈ 'ಪ್ರೊಫೆಸರ್' ಇನ್ನೂ ಯಾರ ಮೇಲೂ ಗೌಪ್ಯವಾಗಿ ಅತ್ಯಾಚಾರ ನಡೆಸಿಲ್ಲ ಎಂಬುದು ನನಗೇಕೋ ಡೌಟು. ಯಾಕೆಂದರೆ ಯಾರು ಭ್ರಷ್ಟರೋ, ಯಾರು ಬೀದಿನಾಯಿಗಳೋ ಅವರೆಲ್ಲ ಬರೆಯುವುದು ಹೀಗೇ. ಇಂಥವರನ್ನೆಲ್ಲ ಬೀದಿಯಲ್ಲಿ ಅಡ್ಡಡ್ಡ ನಿಲ್ಲಿಸಿ ಉದ್ದುದ್ದ ಬಟ್ಟರೆ ಮಾತ್ರ ಇಂತಹ ಬರಹಗಳೆಲ್ಲ ಬಂದ್ ಆಗುತ್ತವೆ."

ಇದು ಭಟ್ಟನ 'ಅತ್ಯಾಚಾರ' ಎಸಗುವ ಪ್ರವೃತ್ತಿಗೆ ಮತ್ತೊಂದು ಉದಾಹರಣೆಯಷ್ಟೇ. ■



ಸೈಬರ್ ರೇಪ್ ಮಟ್ಟಹಾಕಿ..

ಮೊನ್ನೆ ಸಾಮಾಜಿಕ ಜಾಲತಾಣ ಫೇಸ್‌ಬುಕ್‌ನಲ್ಲಿ ದಶಕಗಳಿಂದ ಜನಪರ, ಮಹಿಳಾಪರ ಹೋರಾಟಗಳಲ್ಲಿ ಕ್ರಿಯಾಶೀಲರಾಗಿರುವ ಎನ್.ಪ್ರಭಾ ಒಂದು ಸ್ಟೇಟಸ್ ಹಾಕಿದ್ದರು. ಹಲವು ಜನರ ಸಂಶೋಧನೆ-ಪ್ರಯತ್ನದ ಫಲವಾಗಿ ಉಪಗ್ರಹ, ರಾಕೆಟ್, ಮಂಗಳಯಾನ, ಚಂದ್ರಯಾನಗಳಂತಹ ವೈಜ್ಞಾನಿಕ ಆವಿಷ್ಕಾರಗಳಾಗಿರುವ ಕಾಲದಲ್ಲಿ ಮಂತ್ರತಂತ್ರಹೋಮಹವನ ಎಂದು ಪುರೋಹಿತಶಾಹಿಗಳು ಹಳ್ಳಿಯಿಂದ ದಿಲ್ಲಿ ದರಬಾರಿನವರೆಗೂ ಹರಡಿಕೊಂಡಿರುವುದು ಆಧುನಿಕ ಸಮಾಜದ ದುರಂತ ಎಂದು ಬಣ್ಣಿಸಿದ್ದರು.

ಈ ಟೀಕೆಯಿಂದ ಕೆರಳಿದ ವಿ.ಆರ್.ಭಟ್ ಎಂಬ ವ್ಯಕ್ತಿ ಕೂಡಲೇ 'ಎದೆಗೆ ಬಿದ್ದ ಅಕ್ಷರಗಳನ್ನು ಹೇಳಿದ ಓರಾಟಗಾರ್ತಿ'ಗೆ ಯಾರಾದರೂ ಒಬ್ಬ ರೇಪಿಸ್ಟ್ ಜುಟ್ಟು ಹಿಡಿದು ರೇಪ್ ಮಾಡಬೇಕೆಂದು ಅಪ್ಪಣೆ ಕೊಡಿಸಿದ!

ಗಮನಿಸಿ, ಯಾರೋ ಅನಾಮಧೇಯ ಹೀಗೆ ಬರೆಯಲಿಲ್ಲ, ಓದಿ ನೌಕರಸ್ಥನಾಗಿ ಮಧ್ಯವಯಸ್ಸು ದಾಟುತ್ತಿರುವ ಒಬ್ಬ ಸುಶಿಕ್ಷಿತ ವ್ಯಕ್ತಿ ಎಲ್ಲರೂ ಓದಲೆಂದು ಬಹಿರಂಗವಾಗಿ ಹೀಗೆ ಕಾಮೆಂಟಿಸಿದ್ದ. ಆತನನ್ನು ಬೆಂಬಲಿಸಿ ಹಲವರು ಮತ್ತಷ್ಟು ಬರೆದರು.

ದಶಕಗಳಿಂದ ಸಾರ್ವಜನಿಕ ಜೀವನದಲ್ಲಿ ತೊಡಗಿಕೊಂಡ ಮಹಿಳೆ ನೇರವಾಗಿ ಪ್ರಶ್ನಿಸಿದ್ದಕ್ಕೆ ಬಂದ ದುಷ್ಟ ಪ್ರತಿಕ್ರಿಯೆಗಳನ್ನು ಗಮನಿಸಿದರೆ ಸೈಬರ್ ಲೋಕಕ್ಕೆ ಅಮರಿಕೊಂಡ ಸನಾತನ ಸಂಸ್ಕೃತಿಯೆಂಬ ವೈರಸ್‌ನ ಪರಿಚಯವಾಗುತ್ತದೆ. ಪುರಾತನ ನಾಗರಿಕತೆಯ ಈ ಮಹಾನ್ ದೇಶ ಮಹಿಳೆ 'ಭಾರತೀಯ ನಾರಿ'ಯಂತಿದ್ದರೆ ಕಿರೀಟಗಳ ತಲೆಗೆ ಕಟ್ಟುತ್ತದೆ. ಅದೇ ವಾಸ್ತವದ ಹುಳುಕುಗಳ ತೋರಿಸತೊಡಗಿದರೆ ಕೆರಳಿ ಮಾನಭಂಗಕ್ಕೆ ಯತ್ನಿಸುತ್ತದೆ.

ಆದರೆ 'ಹೆಂಗಸ್ರದ್ದು ಹೆಚ್ಚಾಯ್ತು' ಎಂದು ಹೆಚ್ಚಾದದ್ದನ್ನು ಕಡಿಮೆ ಮಾಡಲು ಚೆಡ್ಡಿ ಬಿಚ್ಚಿ ಹೊರಟಿರುವ ಈ ಎಲ್ಲ ಬಾಲಕರಿಗೆ ಹೆದರಬಾರದು. ಬದಲಾಗಿ ಅವರನ್ನು ಪೂರಾ ಬೆತ್ತಲಾಗಿಸಿ, ಅವರು ಸೇರಬೇಕಾದ ಜಾಗ ತಲುಪಿಸುವುದೊಂದೇ ಈಗ ಉಳಿದಿರುವ ದಾರಿ. 'ಹಿತ ವಚನ, ಮಿತ ವಚನ, ಮೃದು ವಚನ'ಗಳನ್ನು ಪ್ರತಿಪಾದಿಸುವ ಸನಾತನಿಗಳ ಮುಖವಾಡ ಕಳಚುವ; ಶೀಲ-ಅಶ್ಲೀಲಗಳ, ಮಾನ-ಅವಮಾನದ ವ್ಯಾಖ್ಯೆ ಬದಲಿಸುವ ಜವಾಬುದಾರಿಯೂ ನಮ್ಮ ಮೇಲೇ ಇದೆ. ಇಲ್ಲದಿದ್ದರೆ ಮತ್ತೆ ಮರ್ಯಾದೆಗಂಜಿ ಮೌನಕ್ಕೆ ಶರಣಾದ ತ್ರೇತಾಯುಗದ ರಾಮರಾಜ್ಯಕ್ಕೆ ಮರಳಬೇಕಾಗುತ್ತದೆ.

ಮಹಿಳಾ ಒಕ್ಕೂಟವು ಈ ಸಂದರ್ಭದಲ್ಲಿ ಸೈಬರ್ ಅತ್ಯಾಚಾರ ಬೆದರಿಕೆಗೆ ಒಳಗಾದ ಅಸಂಖ್ಯ ಹೆಣ್ಣುಮಕ್ಕಳು ಹಾಗೂ ಅವರ ಬೆದರಿಕೆಗೆ ಮಣಿಯದೆ ನಿಂತು ಕೇಸು ಹಾಕಿರುವ ದಿಟ್ಟ ಗೆಳತಿಯ ಪರವಾಗಿ ನಿಲ್ಲುತ್ತದೆ. ಜೊತೆಗೆ ರೇಪ್ ಎಂಬ ಹುಚ್ಚುನಾಯಿ ಕಡಿತಕ್ಕೊಳಗಾದ ಸಮಾಜಕ್ಕೆ ಸೂಕ್ತ ಚಿಕಿತ್ಸೆ ನೀಡಿ ಸೈಬರ್ ಅತ್ಯಾಚಾರ ಎಸಗಿದವರಿಗೆ ತಕ್ಕ ಶಿಕ್ಷೆಯಾಗಬೇಕೆಂದು ಬಯಸುತ್ತದೆ.

● ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ

ಭಟ್ಟನ ವಿಕೃತ ಫೇಸ್‌ಬುಕ್ ಮಿತ್ರರು

ಅತ್ಯಾಚಾರಿ ಭಟ್ಟ ತನ್ನ ಫೇಸ್‌ಬುಕ್‌ನಲ್ಲಿ 'ಗೋ ಮಾಂಸ ತಿಂದರೆ ಕ್ಯಾನ್ಸರ್ ಬರುತ್ತೆ!' ಎಂಬ ವರದಿಯನ್ನು ಪೋಸ್ಟ್ ಮಾಡಿದ್ದ. ಭಟ್ಟನ ಸದರಿ ಪೋಸ್ಟ್‌ಗೆ ಆತನ ಹಲವು ಫೇಸ್‌ಬುಕ್ ಮಿತ್ರರು ಪ್ರತಿಕ್ರಿಯಿಸಿರುವುದು ಹೀಗೆ:

ಶಕುಂತಲಾ ಐಯರ್: ಅವರಿಗೆ (ಅಂದರೆ ಗೋ ಮಾಂಸ ತಿನ್ನುವ ಮುಸಲ್ಮಾನರಿಗೆ) ಯಾಕೆ ಎಚ್ಚರಿಕೆ ಕೊಡುತ್ತಿದ್ದೀರಿ?

ಶಶಿಧರ್ ಸಂಪಿಗೆ: ಮುಸಲ್ಮಾನರು ಇಂತಹ ಎಚ್ಚರಿಕೆ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ, ಅವರು ಗೋಮಾತೆಯನ್ನು ತಿನ್ನುವುದನ್ನು ನಿಲ್ಲಿಸುವುದಿಲ್ಲ.

ಮಲ್ಲಿಕಾರ್ಜುನ್ ಚೌಕಾಶಿ: ಅವರವರು ಮಾಡಿದ ಕರ್ಮ ಅವರೆ ಅನುಭವಿಸ ಬೇಕು ಅಂತಾರಲ್ಲ ಅದು ಸುಳ್ಳಲ್ಲ.

ಸುಧಾಕರ್ ಅಪ್ಪು: ಸೂಪರ್. ಇಂಥವರಿಗೆ ಏಡ್ಸ್ ಬರಬೇಕು.

ಬದ್ರಿ ವೀರ: ಬರ್ಲಿ ಬಿಡಿ.

ಶ್ಯಾಮಸುಂದರ್ ಎಸ್ ಸುಬ್ಬರಾಮಯ್ಯ: ಕ್ಯಾನ್ಸರ್ ಅಲ್ಲ ಏನೇ ಬರಲಿ ಗೋಮಾಂಸ ತಿನ್ನುವುದು ನಮ್ಮ ಜನ್ಮಸಿದ್ಧ ಹಕ್ಕು ಅಂತಾರವರು.

ವಸಂತ್ ಕುಮಾರ್: ಕೊಂದ ಪಾಪ...

ಪ್ರದೀಪ್ ಶೆಟ್ಟಿ: ಕ್ಯಾನ್ಸರ್ ಆಂದ್ರೆ ರಕ್ತಕಾರಿ ಸಾಯ್ತಾರೆ... ಊರ್ಕಡೆ ಹೇಳ್ತಾರೆ ದೇವರ್ ಶಾಪ ಕೊಟ್ರೆ ರಕ್ತಕಾರಿ ಸಾಯ್ತ್ಯ ಅನ್ನೊ ಆಡುಭಾಷೆ. ನಿಜ ಅನ್ಸುತ್ತೆ

ಜನರ ಸಾವನ್ನೂ ಆನಂದಿಸುವ ಈ ಜನರ ಮನಸ್ಥಿತಿಯ ಬಗ್ಗೆ ಏನನ್ನುವುದು? ■

ಅಶ್ಲೀಲ ಮನುಷ್ಯರು



ಭಾರತ ಜ್ಞಾನ ವಿಜ್ಞಾನ ಸಮಿತಿಯ ರಾಜ್ಯ ಕಾರ್ಯದರ್ಶಿಯಾದ ಪ್ರಭಾ ಎನ್ ಅವರು ಅಂತರ್ಜಾಲ ತಾಣ ಫೇಸ್‌ಬುಕ್ ಸ್ಟೇಟಸ್‌ನಲ್ಲಿ 'ವೈಜ್ಞಾನಿಕ ಮನೋಭಾವ ಮತ್ತು ಪುರೋಹಿತಶಾಹಿಯಿಂದ ಇದಕ್ಕಿರುವ ಸವಾಲುಗಳು' ಎಂಬ ಕುರಿತು ತಮ್ಮ ಅನಿಸಿಕೆ ವ್ಯಕ್ತಪಡಿಸಿದ್ದರು. ಇದರ ಕುರಿತು ಅನೇಕರು ತಮ್ಮ ಅನಿಸಿಕೆ ಅಭಿಪ್ರಾಯಗಳನ್ನು ಪ್ರತಿಸ್ಪಂದನೆಯಾಗಿ ಹಂಚಿಕೊಂಡಿದ್ದರು. ಈ ಅನಿಸಿಕೆಗಳಿಗೆ ಸಂವೇದನಾಶೀಲತೆ ಮತ್ತು ಪ್ರಬುದ್ಧತೆಯಿಂದ ಸ್ಪಂದಿಸುವ ಬದಲು ವಿ.ಆರ್.ಭಟ್ ಎಂಬ ಫೇಸ್‌ಬುಕ್ ಬಳಕೆದಾರ ಪ್ರಭಾ ಎನ್ ತರಹದ ಸಂಸ್ಕೃತಿ ವಿರೋಧಿ ಹೆಂಗಸರನ್ನು ಬಹಿರಂಗವಾಗಿ ಅತ್ಯಾಚಾರ ಮಾಡಬೇಕೆಂದು ಕರೆ ನೀಡಿರುತ್ತಾನೆ. ಇಂತಹ ಅಶ್ಲೀಲ ಮಹಿಳಾ ವಿರೋಧಿ ಕಾಮೆಂಟನ್ನು ವಿರೋಧಿಸಿ ನೂರಾರು ಫೇಸ್‌ಬುಕ್ ಬಳಕೆದಾರರು ವಿ.ಆರ್.ಭಟ್‌ನನ್ನು ಖಂಡಿಸಿದ್ದಾರೆ.

ಇತಿಹಾಸದುದ್ದಕ್ಕೂ ಸಂಸ್ಕೃತಿ ರಕ್ಷಣೆ ಹೆಸರಿನಲ್ಲಿ ಬೌದ್ಧ ನ್ಯಾಯ, ವೈಶೇಷಿಕ, ಇತ್ಯಾದಿ ಜನಪರವಾದ, ಮಹಿಳಾಪರವಾದ ಧ್ವನಿಗಳನ್ನು ನಾಶಮಾಡಲಾಗಿದೆ. ಈ ಪ್ರಕರಣವು ವಿಜ್ಞಾನ ಮತ್ತು ವೈಜ್ಞಾನಿಕ ಮನೋಭಾವನೆಗಳ ಮೇಲೆ ಕೋಮುವಾದಿ ಶಕ್ತಿಗಳು ಸಮಾಜದಲ್ಲಿ ನಡೆಸುತ್ತಿರುವ ದಾಳಿಗಳಿಗೆ ಉದಾಹರಣೆಯಂತಿದೆ. ಇಂತಹ ದಾಳಿಗಳಿಗೆ ಧೃತಿಗೆಡದೆ, ವಿರೋಧಗಳನ್ನು ಮೆಟ್ಟಿ ನಿಂತಿಯೇ ಭಾರತ ಜ್ಞಾನ ವಿಜ್ಞಾನ ಸಮಿತಿಯು ತನ್ನ 30 ವರ್ಷಗಳಿಗೂ ಹೆಚ್ಚಿನ ಅವಧಿಯಲ್ಲಿ ರಾಜ್ಯದಾದ್ಯಂತ ಮೂಢನಂಬಿಕೆ ತೊಡೆದುಹಾಕಿ ವೈಜ್ಞಾನಿಕ ಮನೋಭಾವ ಮತ್ತು ವೈಚಾರಿಕತೆ ಬೆಳೆಸಲು ಶ್ರಮಿಸುತ್ತಾ ಬಂದಿದೆ.

ಈ ಹಿನ್ನೆಲೆಯಲ್ಲಿ ಭಾರತ ಜ್ಞಾನ ವಿಜ್ಞಾನ ಸಮಿತಿಯು ಇಂತಹ ವೈಜ್ಞಾನಿಕ ಮನೋಭಾವ ವಿರೋಧಿ ಮನಸ್ಥಿತಿಯನ್ನು ಖಂಡಿಸುತ್ತದೆ ಹಾಗೂ ರಾಜ್ಯದಾದ್ಯಂತ ತನ್ನೆಲ್ಲ ಘಟಕಗಳು ಇದನ್ನು ಪ್ರತಿಭಟಿಸಲು ಕರೆ ನೀಡುತ್ತದೆ. ತಕ್ಷಣವೇ ವಿ.ಆರ್.ಭಟ್ ಎಂಬ ವಿಕೃತ ಮನಸ್ಥಿತಿಯ ಸಂಸ್ಕೃತಿ ರಕ್ಷಕನನ್ನು ಬಂಧಿಸಿ ಶಿಕ್ಷೆಗೆ ಗುರಿಪಡಿಸಬೇಕೆಂದು ಭಾರತ ಜ್ಞಾನ ವಿಜ್ಞಾನ ಸಮಿತಿ ಆಗ್ರಹಿಸುತ್ತದೆ.

● ಭಾರತ ಜ್ಞಾನವಿಜ್ಞಾನ ಸಮಿತಿ, ಕರ್ನಾಟಕ ಪರವಾ
ಜೈಕುಮಾರ್ ಹೆಚ್.ಎಸ್ (ಜಂಟಿ ಕಾರ್ಯದರ್ಶಿ) ಮತ್ತು ಎನ್.ಪ್ರಭಾ (ಕಾರ್ಯದರ್ಶಿ

ಮುಸಲ್ಮಾನರ ವಿರುದ್ಧ ಹಗೆ

ನಮ್ಮ ಈಗಿನ ಅತ್ಯುತ್ತಮ ಯುವ ಬರಹಗಾರರಲ್ಲಿ ಬಿ.ಎಂ.ಬಶೀರ್ ಪ್ರಮುಖರು. ಸದಾ ಸೌಮ್ಯ ಭಾವನೆಯಿಂದ ಹತ್ತಾರು ವಿಷಯಗಳ ಬಗ್ಗೆ ಬರೆಯುವ ಬಶೀರ್ ಜಾತ್ಯತೀತ ನಿಲುವನ್ನು ಹೊಂದಿರುವವರು. ಆದರೆ ಅದನ್ನೆಲ್ಲ ಈ ಅತ್ಯಾಚಾರಿ ಭಟ್ಟನಿಗೆ ಸಹಿಸಲಾದೀತೆ? ಆತ ಬಶೀರ್ ಬರೆದದ್ದಕ್ಕೆಲ್ಲ ಅಸಹ್ಯವಾಗಿ ಪ್ರತಿಕ್ರಿಯಿಸಲಾರಂಭಿಸಿದ. ಆತನ



ಒಂದು ಪ್ರತಿಕ್ರಿಯೆ ಹೀಗಿತ್ತು: "ದಯಮಾಡಿ ಕನ್ನಡದ ಎಲ್ಲಾ ಹಿಂದೂ ಸನಾತನ ಜನ ಈತನನ್ನು (ಬಶೀರ್) ಗಮನಿಸಬೇಕು. ಸನಾತನ ಧರ್ಮದ ವಿರುದ್ಧ ಅವಹೇಳನಕಾರಿ ಕಥೆಗಳನ್ನು ಕಟ್ಟುವ ಈತನಿಗೆ ಲದ್ದಿಜೀವಿಗಳ ಬೆಂಬಲವಿದೆ. ಪ್ರತಿನಿತ್ಯ ಈತನ ಪ್ರತಿ ಹೆಜ್ಜೆಯಲ್ಲೂ ಸನಾತನ ಧರ್ಮವನ್ನೂ ಗೋಮಾತೆಯನ್ನೂ ಜರಿಯುವ ಕಚೇರಿಗೆ ನುಗ್ಗಿ ಈತನನ್ನು ಹೊರಗೆಳೆದು ನಾಲ್ಕು ತದುಕಬೇಕಾದ ದಿನ ಹತ್ತಿರವಿದೆ."

ಬಶೀರ್ ಅವರು ಭಟ್ಟನ ಇಂತಹ ಕಾಮೆಂಟ್ಸ್‌ಗಳನ್ನು ಸಹಜವಾಗಿಯೇ ಡಿಲೀಟ್ ಮಾಡಿದರು. ಅದನ್ನು ಕಂಡು ರೇಗಿದ ಭಟ್ಟ ಹೀಗೆ ಬಶೀರರನ್ನು ಪ್ರಶ್ನಿಸಿದ್ದ: "ಕಲ್ಪಿಟ್ ಬೋಸುಡಿ. ನೀನ್ಯಾರಯ್ಯಾ ಹಿಂದೂತ್ವದ ಬಗ್ಗೆ ಹೇಳುವ್ರುದಕ್ಕೆ? ನಿನ್ನ ಕಚೇರಿಗೆ ನುಗ್ಗಿ ನಿನ್ನನ್ನು ಬೀದಿಗೆಳೆದು ಕಚ್ಚೆ ಹರಿಯುವ ಕಾಲಕ್ಕೆ ಕಾಲ ಸನ್ನಿಹಿತವಾಗಿದೆ! ನನ್ನ ಕಾಮೆಂಟ್ಸ್ ಯಾಕೆ ಡಿಲೀಟ್ ಮಾಡ್ತೀಯ ಮಿಂಡಿರಿಗುಟ್ಟಿದವನೆ?"

ಆಗಲೂ ಬಶೀರ್ ತಾಳ್ಮೆ ಕಳೆದುಕೊಳ್ಳದೆ ಹೀಗೆ ಉತ್ತರ ಕೊಟ್ಟಿದ್ದರು: "ಭಟ್ಟರೇ, ನಿಮ್ಮಂತಹ ಸುಸಂಸ್ಕೃತ ಭಟ್ಟರು ನನ್ನ ಫೇಸ್‌ಬುಕ್ ಗೆಳೆಯರ ಪಟ್ಟಿಯಲ್ಲಿರೋದು ನಿಮಗೆ ಶೋಭೆಯಲ್ಲ, ನಿಮ್ಮ ಮಡಿ ಮೈಲಿಗೆಗೆ ತೊಂದರೆಯಾದೀತು. ನಿಮ್ಮನ್ನು ಬ್ಲಾಕ್ ಮಾಡ್ತಾ ಇದ್ದೇನೆ."

ಈಗ ಹೇಳಿ, ಆರೆಸ್ಸೆಸ್ ಸಂಸ್ಕೃತಿಯ ಭಟ್ಟ ಸಭ್ಯನೋ? ಜಾತ್ಯತೀತ ಬಶೀರ್ ಸಭ್ಯರೋ! ■

...ಪ್ಪು ಚುಕ್ಕೆಗಳ ಸುಳಿಯಲ್ಲಿ...

...5ನೇ ಪುಟದಿಂದ

...ಜಿಯಮ್) ಮಂಜುನಾಥ್ ಅವರ ...ಕಾತಿಯ ತಮ್ಮ ಶಿಫಾರಸ್ಸನ್ನು ...ಸಿಕೊಂಡಿದ್ದು, ಅವರ ನೇಮಕಾತಿಗಾಗಿ ಪಟ್ಟು ...ಡ್ದಾರೆ. ಈ ಮೂಲಕ ನ್ಯಾಯಾಂಗ ...ಕಾತಿಯ ವಿಷಯದಲ್ಲಿ ಜಡ್ಜ್‌ಗಳ ...ಜಿಯಮ್ ಹಾಗೂ ಸರ್ಕಾರದ ನಡುವೆ ...ಯುತ್ತಿರುವ ಶೀತಲ ಸಮರಕ್ಕೆ ಹೊಸದೊಂದು ...ಡ ಸೇರ್ಪಡೆಯಾದಂತಾಗಿದೆ.

...ಜಾಪ್ರಭುತ್ವ ವ್ಯವಸ್ಥೆಯಲ್ಲಿ ನ್ಯಾಯಾಂಗದ ಮೇಲೆ ...ತ್ತರ ಜವಾಬ್ದಾರಿಯಿದೆ. ಸಂವಿಧಾನಬದ್ಧ, ...ನುಬದ್ಧ ಆಡಳಿತವನ್ನು ನಿರ್ವಹಿಸುವ ಹೊಣೆ ...ರುವ ಕಾರ್ಯಾಂಗ ಮತ್ತು ಶಾಸಕಾಂಗಗಳಲ್ಲಿ ...ದೋಷ ಕಂಡುಬಂದಾಗ ಅಂಥಾ ...ದೋಷಗಳನ್ನು ಸಂವಿಧಾನಬದ್ಧವಾಗಿ ನಿರ್ವಹಿಸಿ, ...ಗಳನ್ನು ಸರಿಪಡಿಸುವ ಅಧಿಕಾರವನ್ನು ನ್ಯಾಯಾಂಗ ...ಡಿದೆ.

...ಅಂಥಾ ಗುರುತರ ಜವಾಬ್ದಾರಿಯುತ ...ಲ್ಲಿರುವ ನ್ಯಾಯಾಂಗದಲ್ಲಿ ಭ್ರಷ್ಟಾಚಾರ ಮತ್ತು ...ಯ ಹಸ್ತಕ್ಷೇಪ ಮನೆಮಾಡಿದರೆ ನಮ್ಮ ವ್ಯವಸ್ಥೆಗೆ ...ಮ್ಮ ಅಧೋಗತಿ ಕಟ್ಟಿಟ್ಟ ಬುತ್ತಿ.

ನಮ್ಮ ಸಂವಿಧಾನದ 124ನೇ ಕಲಂನಲ್ಲಿ ಸುಪ್ರೀಂ ...ರ್ಟ್ ಜಡ್ಜ್‌ಗಳ ನೇಮಕಾತಿಯ ಬಗ್ಗೆ ಹಾಗೂ ...ನೇ ಕಲಂನಲ್ಲಿ ಹೈಕೋರ್ಟ್ ಜಡ್ಜ್‌ಗಳ ...ಕಾತಿ ಬಗ್ಗೆ ನಿರ್ದೇಶನ ನೀಡುತ್ತವೆ. ...ಪತಿಯವರು ಇತರೆ ಜಡ್ಜ್‌ಗಳೊಂದಿಗೆ ...ಲೋಚನೆ ನಡೆಸಿ ಈ ಮೇಲೆ ಹೆಸರಿಸಲಾದ ...ಗಳಿಗೆ ಜಡ್ಜ್‌ಗಳನ್ನು ನೇಮಕ ಮಾಡುತ್ತಾರೆ' ...ಬುದು ಅದರ ಸಾರಾಂಶ. ಮೇಲ್ನೋಟಕ್ಕೇ ...ವಂತೆ ಈ ನಿರ್ದೇಶನ ಅಸಮರ್ಪಕವಾಗಿದೆ ...ಬುದರಲ್ಲಿ ಎರಡು ಮಾತಿಲ್ಲ.

...ಇದು ಥಿಯರಿಯ ಮಾತಾಯಿತು. ಆಚರಣೆಯಲ್ಲಿ ...ಕ್ಕೆ ಮೊದಲು ಈ ಜಡ್ಜ್‌ಗಳನ್ನು ನೇಮಕ ಮಾಡುವ ಪ್ರಕ್ರಿಯೆ ರಾಷ್ಟ್ರಪತಿಯ ಮೂಲಕ ಕಾರ್ಯಾಂಗದ ಕೈಯಲ್ಲಿತ್ತು. ಉನ್ನತ ಜಡ್ಜ್‌ಗಳ ನೇಮಕಾತಿ ವಿಷಯದಲ್ಲಿ ಕಾರ್ಯಾಂಗ ಮತ್ತು ನ್ಯಾಯಾಂಗಗಳ ನಡುವೆ ತಿಕ್ಕಾಟ ನಡೆದ ಪರಿಣಾಮ ಈ ವಿಷಯ ಸುಪ್ರೀಂಕೋರ್ಟ್ ಮೆಟ್ಟಿಲೇರಿ ಅಂತಿಮವಾಗಿ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಾಧೀಶರು ಇತರೆ ನ್ಯಾಯಾಧೀಶರೊಂದಿಗೆ ಸಮಾಲೋಚನೆ ನಡೆಸಿ ಹುದ್ದೆಗಳಿಗೆ ನೇಮಕಾತಿ ಶಿಫಾರಸ್ಸು ಮಾಡುವ ಕೊಲಿಜಿಯಂ ವ್ಯವಸ್ಥೆ ಜಾರಿಯಲ್ಲಿದೆ.

ಒಂದು ವಿಷಯವನ್ನು ನಾವು ನೆನಪಿನಲ್ಲಿಡಬೇಕು. ನ್ಯಾಯಾಂಗದಲ್ಲಿ ಅತ್ಯಂತ ಕೀಲಕ ಪಾತ್ರ ನಿರ್ವಹಿಸುವವರು ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್‌ಗಳ ನ್ಯಾಯಮೂರ್ತಿಗಳು. ಇಂಥಾ ಉನ್ನತ ಹಂತದ ನ್ಯಾಯಾಧೀಶರನ್ನು ನೇಮಕ ಮಾಡುವ ಈಗಿನ ಹಾಲಿ ವ್ಯವಸ್ಥೆಗೆ ಯಾವುದೇ ಉತ್ತರದಾಯಿತ್ವವಿಲ್ಲ, ಅತ್ಯಂತ ರಹಸ್ಯವಾಗಿ ನಡೆಯುವ ಈ ನೇಮಕಾತಿ ಪ್ರಕ್ರಿಯೆಗೆ ಪಾರದರ್ಶಕತೆ ಎಂಬ ಮಾತು ಅನ್ವಯಿಸುವುದೇ ಇಲ್ಲ ಎಂದರೆ ಆಶ್ಚರ್ಯವೆನಿಸುತ್ತಿದೆಯೆ? ಭಾರತದ ಪ್ರಜಾಪ್ರಭುತ್ವದಲ್ಲಿ ಇವೆಲ್ಲವೂ ಸುಲಭ ಸಾಧ್ಯ!!

ಕಟ್ಜು ಅವರ ಈ ವಿವಾದಾತ್ಮಕ ಬ್ಲಾಗ್ ಬರಹಕ್ಕೆ ಕಾರ್ಪೋರೇಟ್ ಮಾಧ್ಯಮಗಳು ಗಾಳಿ ಊದಿ ದೊಡ್ಡ ವಿವಾದವನ್ನಾಗಿಸಿವೆ. ಆಡಳಿತಾರೂಢ ಬಿಜೆಪಿ ಪಕ್ಷ ಹಿಂದಿನ ಯುಪಿಎ ಪಕ್ಷವನ್ನು ಜರಿಯುತ್ತಾ ತಮ್ಮ ಅಜೆಂಡಾವನ್ನು ಮುನ್ನೆಲೆಗೆ ತರಲು ಹವಣಿಸುತ್ತಿದೆ. ಹಾಗೆ ನೋಡಿದರೆ ಕೇಂದ್ರ ಸರ್ಕಾರಕ್ಕೂ ಕಾರ್ಪೋರೇಟ್ ಮಾಧ್ಯಮಗಳಿಗೂ ಇರುವುದು ಒಂದೇ ಕಾಮನ್ ಅಜೆಂಡಾ.

ಕಾರ್ಪೋರೇಟ್ ಧಣಿಗಳು ಸರ್ಕಾರಗಳ ಸಕ್ರಿಯ ಬೆಂಬಲದೊಂದಿಗೆ ಎಲ್ಲ ಕಾನೂನುಗಳನ್ನು ಗಾಳಿಗೆ ತೂರಿ ಈ ದೇಶದ ಸಂಪತ್ತು, ಸಂಪನ್ಮೂಲಗಳನ್ನು ಲೂಟಿ ಹೊಡೆಯುವ ಪ್ರಕ್ರಿಯೆಗೆ – ತನ್ನೆಲ್ಲಾ ಮಿತಿಗಳ ನಡುವೆಯೂ – ತಡೆ ಒಡ್ಡುತ್ತಿರುವುದು ನ್ಯಾಯಾಂಗವೇ. ಹೀಗಾಗಿ ನ್ಯಾಯಾಂಗದ ಉನ್ನತ ಹುದ್ದೆಗಳಿಗೆ ತಮಗೆ ಬೇಕಾದ ಮಂದಿಯನ್ನು ಪ್ರತಿಷ್ಠಾಪಿಸುವುದು ಈಗ ಸರ್ಕಾರಕ್ಕೂ ಕಾರ್ಪೋರೇಟ್ ಧಣಿಗಳಿಗೂ ಒಂದು ತುರ್ತು ಅಜೆಂಡಾ ಆಗಿದೆ. ಆದ್ದರಿಂದಲೇ ಭ್ರಷ್ಟಾಚಾರದ ನೇಮಕಾತಿಗಳ ಸಂಗತಿ ಈಗ ಹೆಚ್ಚು ಚಾಲ್ತಿ ಪಡೆದುಕೊಳ್ಳುತ್ತಿದೆ.

ಆದರೆ ಈ ದೇಶದಲ್ಲಿ ಕಾನೂನು ವ್ಯವಸ್ಥೆಯನ್ನು ಬಯಸುವ ಯಾರೇ ಆಗಲಿ, ಈ ದುಷ್ಟ ಪ್ರಯತ್ನಕ್ಕೆ ತಡೆಯೊಡ್ಡಿ ನ್ಯಾಯಾಂಗದ ಪಾರದರ್ಶಕತೆ ಮತ್ತು ಸ್ವಾಯತ್ತತೆಗಳ ಗಂಭೀರ ಪ್ರಶ್ನೆಗಳನ್ನು ಚರ್ಚೆಗೆ ತಂದು, ಪ್ರಜಾತಂತ್ರಕ್ಕೆ ತಕ್ಕುದಾದ ನೇಮಕಾತಿ ವ್ಯವಸ್ಥೆಯ ಜಾರಿಗಾಗಿ ಒತ್ತಾಯಿಸಲು ಇದು ಸಕಾಲ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಅಶೋಕ್ ಕುಮಾರ್-ಅಂಥೋಣಿ ಸ್ವಾಮಿ



ಈ ಅಶೋಕ್‌ಕುಮಾರ್ ಅವರ ಮೂಲ ಹೆಸರು ಅಂಥೋಣಿ ಸ್ವಾಮಿ. ಈ ಹೆಸರೇ ಸೂಚಿಸುವಂತೆ ಇವರ ತಂದೆ ತಾಯಿಗಳು ಕ್ರೈಸ್ತ ಧರ್ಮ ಅನುಯಾಯಿಗಳು. ತಮ್ಮ ವ್ಯಾಸಂಗದ ಅವಧಿಯಲ್ಲಿ ಮಾತ್ರವಲ್ಲದೆ ಸುಮಾರು ಎರಡು ದಶಕಗಳ ಕಾಲ ವಕೀಲ ವೃತ್ತಿಯಲ್ಲಿದ್ದಾಗಲೂ ಅವರು ಅಂಥೋಣಿ ಸ್ವಾಮಿಯಾಗಿಯೇ ಇದ್ದರು. ಆದರೆ ಅವರು ಜಿಲ್ಲಾ ನ್ಯಾಯಾಧೀಶರಾಗಿ ಆಯ್ಕೆಯಾಗುವ ಸಂದರ್ಭದಲ್ಲಿ ಅವರು ಹಿಂದೂ ಧರ್ಮಕ್ಕೆ ಮತಾಂತರಗೊಂಡರು. ಯಾಕೆಂದರೆ ಆ ಹುದ್ದೆ ಹಿಂದೂ ಪರಿಶಿಷ್ಟ ಜಾತಿಯ ಅಭ್ಯರ್ಥಿಗೆ ಸೀಮಿತವಾಗಿತ್ತು.

ಹಿಂದೂ ಧರ್ಮಕ್ಕೆ ಮತಾಂತರ ಎಂಬುದು ಚರ್ಚನೀಯ ವಿಷಯ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಮಾನ್ಯ ಅಶೋಕ್‌ಕುಮಾರ್ ಅವರಿಗೆ ಮತಾಂತರಗೊಳ್ಳಲು ಪ್ರೇರೇಪಣೆ ನೀಡಿದ್ದು ನ್ಯಾಯಾಧೀಶ ಹುದ್ದೆಯ ಪ್ರಲೋಭನೆಯೇ ಹೊರತು ಬೇರೇನಲ್ಲ. ಅವರು ವಿವಾಹವಾಗಿದ್ದು ಕ್ರೈಸ್ತ ಧರ್ಮೀಯಳನ್ನು. ಅವರ ಪತ್ನಿ ಶ್ರೀಮತಿ ಎಬಿ ಕ್ರೈಸ್ತಳಾಗಿಯೇ ಮುಂದುವರೆದಿದ್ದಾರೆ. ಅಷ್ಟು ಮಾತ್ರವಲ್ಲದೆ ಅಶೋಕ್ ಕುಮಾರ್ ತೀರಿಕೊಂಡಾಗ ಅವರ ಅಂತ್ಯಕ್ರಿಯೆಗಳನ್ನು ಕ್ರೈಸ್ತ ಧರ್ಮದ ವಿಧಿವಿಧಾನಗಳ ಪ್ರಕಾರವೇ ನಡೆಸಲಾಯಿತು ಎಂಬ ಅಂಶಗಳು ಅಶೋಕ್ ಕುಮಾರ್‌ರ ಮತಾಂತರದ ಹೂರಣವನ್ನು ಬಿಚ್ಚಿಡುತ್ತವೆ.

ಅದು ಹಾಗಿರಲಿ. ರಾಜಕೀಯ ವೈಷಮ್ಯಕ್ಕೆ ಕುಪ್ರಸಿದ್ಧವಾಗಿರುವ ತಮಿಳುನಾಡಿನಲ್ಲಿ ತನ್ನ ರಾಜಕೀಯ ಎದುರಾಳಿಗಳನ್ನು ಮಟ್ಟಹಾಕಲು ಆಳುವ ಸರ್ಕಾರಗಳು ದ್ವೇಷದ ಕ್ರಮಗಳಿಗೆ ಇಳಿಯುವುದು ಮಾಮೂಲು. 2001ರಲ್ಲಿ ಇದು ತಾರಕಕ್ಕೇರಿತ್ತು. ಮಾಜಿ ಮುಖ್ಯಮಂತ್ರಿ ಹಾಗೂ ವಿರೋಧಪಕ್ಷದ ಅಧಿನಾಯಕ ಕರುಣಾನಿಧಿಯನ್ನು ನಡುರಾತ್ರಿಯಲ್ಲಿ ಕಳ್ಳಕಾಕರನ್ನು ಹಿಡಿಯುವ ಶೈಲಿಯಲ್ಲಿ ಬಂಧಿಸಿದ ಜಯಲಲಿತಾ ಪರ ಪೊಲೀಸರು ಮುಂಜಾನೆ 4 ಗಂಟೆಯ ಸುಮಾರಿಗೆ ಚೆನ್ನೈ ಸೆಷನ್ಸ್ ಕೋರ್ಟ್‌ನ ನ್ಯಾಯಾಧೀಶರ ಮುಂದೆ ತಂದು ನಿಲ್ಲಿಸಿದ್ದರು. ಪೊಲೀಸರ ದುರ್ವರ್ತನೆಯನ್ನು ಕಂಡು ಕಿಡಿಕಾರಿದ ನ್ಯಾಯಾಧೀಶರು "ಹಲವು ಕಾಯಿಲೆಗಳಿಂದ ನರಳುತ್ತಿರುವ 78 ವರ್ಷದ ವೃದ್ಧ ಚಿಕಿತ್ಸೆಗಾಗಿ ಬೇಡಿಕೊಳ್ಳುತ್ತಿದ್ದರೂ ನಿಮ್ಮ ಹೃದಯ ಸ್ವಲ್ಪವೂ ಕರಗಲಿಲ್ಲವೆ? ನಿಮ್ಮ ಮೇಲಿರುವ ಅಂಥಾ ಭಾರೀ ಒತ್ತಡವಾದರೂ ಏನು? 'ನಿಮ್ಮ ಹೃದಯದಲ್ಲಿ ಮಾಂಸ ಖಂಡಗಳಿವೆಯೋ ಅಥವ ಮಣ್ಣು ತುಂಬಿದೆಯೋ?" ಎಂದು ಖಾರವಾಗಿ ಪ್ರಶ್ನಿಸಿದ್ದರು. ಆ ನ್ಯಾಯಾಧೀಶರೇ ಅಶೋಕ್ ಕುಮಾರ್.

ಈ ಘಟನಾವಳಿಯ ನಂತರ ಅಶೋಕ್‌ಕುಮಾರ್‌ರನ್ನು ಡಿಎಂಕೆ ಬೆಂಬಲಿಗ ಎಂದು ಗುರುತಿಸುವುದು ವಾಡಿಕೆಯಂತಾಯಿತು. ಜಯಲಲಿತಾ ಸರ್ಕಾರ ತನ್ನ ಸಹಜ ಪ್ರವೃತ್ತಿಯಂತೆ ಅಶೋಕ್‌ಕುಮಾರ್‌ರನ್ನು ಹಲವು ಕಡೆಗೆ ಎತ್ತಂಗಡಿ ಮಾಡಿತು. ಅವರನ್ನು ಕೊಲ್ಲುವ ಯತ್ನವೂ ಒಮ್ಮೆ ನಡೆದಿತ್ತು.

...ತ್ಯಾಚಾರಿ ಭಟ್ಟನನ್ನು ಬಂಧಿಸಬೇಕು



>>10ನೇ ಪುಟದಿಂದ

...ವುದು ಯಾವಾಗ?"

...ಪುರೋಹಿತಶಾಹಿಗಳನ್ನು ಪ್ರಭಾ ಪ್ರಶ್ನಿಸಿದ್ದು ವಿಕೃತ ...ನನ್ನು ಕೆರಳಿಸಿತು. ಆತ ಪ್ರತಿಕ್ರಿಯಿಸಿದ್ದು ಹೀಗೆ: ..."ಸ್ವಾಮ್ಯ ಬಹುದೊಡ್ಡ 'ಓರಾಟಗಾರ್ತಿಯವರೇ', ನಿಮ್ಮ ...ನವೀಯತೆಯ ಮುಖಕ್ಕಿಷ್ಟು ಬೆಂಕಿಹಾಕ. ನಿಮಗೇನ್ ...ತ್ತೀ ಸನಾತನ ಧರ್ಮದ ತಳಹದಿ. ನಿಮ್ಮಂಥೋರು ...ರಿ ಬಣ್ಣದ ಚಾವುಟಗಳನ್ನು ಬಳಸುತ್ತಾರೆ ನೋಡಿ–ಅದನ್ನು ...ಡಲು ಬ್ಯಾನ್ ಮಾಡಬೇಕು. ಎದೆಗೆಬಿದ್ದ ಅಕ್ಷರ ...ಕೊಂಡವರದ್ದು ಮತ್ತು ಆ ತರಗತಿಯವರದ್ದೆಲ್ಲ ಇದೇ ...ಪು! ಪಾಪ ಅವರಿಗೇನು ಗೊತ್ತು –ತಾವು ಹೇಳಿದ್ದೇ ...ಅಂತಾರೆ. ಮೊದಲು ನಿಮ್ಮಂಥಾ ಮಹಿಳೆಯರ ...

...ಇದರಲ್ಲಿ ಭಟ್ಟನಲ್ಲಿ ಮನೆ ಮಾಡಿರುವ ಎಲ್ಲಾ ...ಧಗಳೂ ಪ್ರಕಟವಾಗಿದೆ. ಒಮ್ಮೆಗೆ ಹಿಂದೂ ಧರ್ಮವನ್ನು ...ಸುವವರಿಗೆ, ಮಹಿಳೆಯರಿಗೆ, ದಲಿತರಿಗೆ, ಪ್ರಗತಿಪರರಿಗೆ ...ಪಾಪ ಹಾಕಿದ್ದಾನೆ. ಕೊನೆಗೆ ವಿಕೃತ ಕಾಮಿ ತರಹ ...ಚಾರ ಮಾಡಿದರೆ ನಿಮ್ಮಂಥವರಿಗೆ ಬುದ್ಧಿ ಬರುತ್ತದೆ' ...ಬೆದರಿಕೆಯನ್ನೂ ಹಾಕಿದ್ದಾನೆ.

...ಇಂತಹ ಬೆದರಿಕೆಯನ್ನು ಕಂಡು ಪ್ರಭಾ ಅವರಿಗೆ ಸಹಜವಾಗೆ ಅಚ್ಚರಿಯಾಗಿದೆ. ಆದರೆ ಅವರು ಪ್ರತಿಕ್ರಿಯಿಸದೆ ಸುಮ್ಮನಾಗಿದ್ದರು. ಅದು ಭಟ್ಟನನ್ನು ಮತ್ತಷ್ಟು ಆಕ್ರೋಶಭರಿತನನ್ನಾಗಿಸಿತು. ಆಗ ಆತ ಅಶ್ಲೀಲ ಪದಗಳನ್ನು ಹೊಂದಿರುವ ಕಟ್ಟಾಕೊಳಕು ಮೆಸ್ಸೇಜುಗಳನ್ನು ಕಳುಹಿಸಿದ. ಅವುಗಳು ಪ್ರಭಾ ಅವರ ಇತರೆ ಫೇಸ್‌ಬುಕ್ ಮಿತ್ರರ ಗಮನಕ್ಕೂ ಬಂದು ಅವರೆಲ್ಲ ಆಘಾತಗೊಂಡರು. ಆಗ ಅವರು ಭಟ್ಟನ ವಿರುದ್ಧ ದೂರು ಕೊಡಬೇಕೆಂದು ಪ್ರಭಾ ಅವರಿಗೆ ಸಲಹೆ ಕೊಟ್ಟರು. ಆದರೆ ತಂತ್ರಜ್ಞಾನದಲ್ಲಿ ಅಷ್ಟೇನು ಚುರುಕು ಅಲ್ಲದ ಪ್ರಭಾ ಅವರು ವಿಕೃತ ಭಟ್ಟ ತಮಗೆ ಕಳುಹಿಸಿದ್ದ ಮೆಸ್ಸೇಜುಗಳ ಸ್ಕ್ರೀನ್ ಶಾಟ್‌ಗಳನ್ನು ತೆಗೆದು ಸೇವ್ ಮಾಡಿಕೊಂಡಿರಲಿಲ್ಲ. ಆದ್ದರಿಂದ ಭಟ್ಟನ ವಿರುದ್ಧ ದೂರು ಕೊಡುವಾಗ ಸಾಕ್ಷಿಯಾಗಿ ನೀಡಲು ಅವರ ಬಳಿ ಯಾವುದೇ ಮೆಸ್ಸೇಜ್‌ನ ಪ್ರತಿ ಇರಲಿಲ್ಲ. ಅದೃಷ್ಟವಶಾತ್ ಅವರ ಮಿತ್ರರೊಬ್ಬರು ಭಟ್ಟ ಕಳುಹಿಸಿದ್ದ ಅತ್ಯಾಚಾರ ಬೆದರಿಕೆಯ ಸ್ಕ್ರೀನ್ ಶಾಟ್ ತೆಗೆದಿಟ್ಟಿದ್ದರು. ಅದನ್ನೇ ಈಗ ಪ್ರಭಾ ಅವರು ಪೊಲೀಸರಿಗೆ ಸಲ್ಲಿಸಿದ್ದಾರೆ.

ತನ್ನ ವಿರುದ್ಧ ದೂರು ದಾಖಲಾಗುತ್ತಿದೆ ಎಂಬುದರ ಸೂಚನೆ ಸಿಕ್ಕಿದ್ದೇ ತಡ, ಭಟ್ಟ ನುಣುಚಿಕೊಳ್ಳಲು ಯತ್ನಿಸಿದ. ಪ್ರಭಾ ಅವರಿಗೆ ಮತ್ತೊಂದು ಮೆಸ್ಸೇಜ್ ರವಾನಿಸಿದ ಭಟ್ಟ, "ಪ್ರಭಾ ಅವರೇ, ಹಿಂದೂ ಧರ್ಮ ಮತ್ತು ಬ್ರಾಹ್ಮಣ ಜನಾಂಗದ ವಿರುದ್ಧ ತಾವು ಮಾಡಿದ ಅಪಾದನೆಗಳನ್ನು ಸಹಿಸಲಾಗದೇ, ಕೋಪದಲ್ಲಿ ನಾನು ಆಡಿದ ಮಾತನ್ನು ಮರಳಿ ಪಡೆದುಕೊಳ್ಳುತ್ತಿದ್ದೇನೆ. ನಿಮ್ಮ ಮೇಲಾಗಲೀ ಅಥವಾ ಯಾರ ಮೇಲಾಗಲೀ ನನಗೆ ವೈಯಕ್ತಿಕ ಹಿತಾಸಕ್ತಿಗಾಗಿಯಾಗಲೀ, ರಾಜಕೀಯ-ಸಾಮಾಜಿಕ ಹಿತಾಸಕ್ತಿಗಾಗಲೀ ದ್ವೇಷವಿಲ್ಲ, ನಮ್ಮ ಧರ್ಮವನ್ನು ಅವಹೇಳನ ಮಾಡುವವರನ್ನು ನಾನು ನಿಂದಿಸುತ್ತೇನೆ ಎಂಬುದು ನಿಜ. ಹಾಗಂತ ಅದು ದ್ವೇಷವಲ್ಲ, ಹೇಳಿಕೆಗೆ ವಿರೋಧವಷ್ಟೆ. ಯಾರಿಗೇ ಆಗಲಿ ಕೆಟ್ಟದ್ದನ್ನು ನಾನು ಬಯಸುವುದಿಲ್ಲ, ಯಾರ ಕೇಡನ್ನೂ ಬಗೆಯುವ ವ್ಯಕ್ತಿ ನಾನಲ್ಲ, ದಯಮಾಡಿ ಕ್ಷಮಿಸಿ" ಎಂದ. ಆದರೆ ಇಂತಹ ಸಮಜಾಯಿಷಿಯಲ್ಲೂ ಭಟ್ಟ ತಾನು ಹೊಂದಿರುವ ಅಮಾನವೀಯ ಸಿದ್ಧಾಂತದ ಬಗ್ಗೆಯಾಗಲಿ, ಮನುಷ್ಯ ವಿರೋಧಿ ನಿಲುವಿನ ಬಗ್ಗೆಯಾಗಲಿ, ಅತ್ಯಾಚಾರ ಪರ ಅಭಿಪ್ರಾಯ ವ್ಯಕ್ತಪಡಿಸಿದ್ದ ಬಗ್ಗೆಯಾಗಲಿ ಕಿಂಚಿತ್ತೂ ಆತ್ಮವಿಮರ್ಶೆ ಮಾಡಿಕೊಂಡಿಲ್ಲ ಎಂಬುದು ಗಮನಾರ್ಹ.

ಈಗ ಭಟ್ಟ ಪೊಲೀಸರ ಬಂಧನದಿಂದ ತಪ್ಪಿಸಿಕೊಳ್ಳಲು ತಲೆ ಮರೆಸಿಕೊಂಡಿದ್ದಾನೆ. ಆತನಿಗಾಗಿ ಪೊಲೀಸರು ಬೆಂಗಳೂರು ಮತ್ತು ಕರಾವಳಿ ಪ್ರದೇಶಗಳಲ್ಲಿ ಹುಡುಕಾಡುತ್ತಿದ್ದಾರೆ. ಇವತ್ತಲ್ಲ ನಾಳೆ ಆತ ಅರೆಸ್ಟ್ ಆಗುವುದು ಗ್ಯಾರಂಟಿಯಾಗಿದೆ.

ಇಂತಹ ಹಿಂದೂತ್ವವಾದಿ ಕೋಮು ಕ್ರಿಮಿಯ ವಿರುದ್ಧ ಕಾನೂನುಬದ್ಧ ಕ್ರಮ ತೆಗೆದುಕೊಂಡರೆ ಇತರೆ ಚಿಡ್ಡಿಗಳಿಗೂ ಎಚ್ಚರಿಕೆ ನೀಡಿದಂತಾಗುತ್ತದೆ. ಅಷ್ಟರ ಮಟ್ಟಿಗೆ ಹುಚ್ಚರ ಸಂತೆಯಂತಾಗಿರುವ ನಮ್ಮ ಸಮಾಜವನ್ನು ಸ್ವಚ್ಛ ಮಾಡಿದಂತಾಗುತ್ತದೆ.

■ ಸಾವಂತ್ರಿ

ಸಂಸ್ಕೃತ ಸಪ್ತಾಹ ಯಾರ ಉದ್ಧಾರಕ್ಕಾಗಿ?



ಆಗಸ್ಟ್ 7ರಿಂದ 13ರವರೆಗೆ ಎಂದರೆ ಆಗಸ್ಟ್ ಎರಡನೆ ವಾರವನ್ನು 'ಸಂಸ್ಕೃತ ಸಪ್ತಾಹ' ಎಂದು ಆಚರಿಸಬೇಕೆಂದು ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ (HRD) ಸಚಿವಾಲಯ, ಎಲ್ಲಾ ರಾಜ್ಯ ಸರ್ಕಾರಗಳಿಗೂ ಸುತ್ತೋಲೆ ಕಳುಹಿಸಿದ್ದು ಇದನ್ನು ತಮಿಳುನಾಡು ಮುಖ್ಯಮಂತ್ರಿ ಜಯಲಲಿತಾ ಮತ್ತು ಕರುಣಾನಿಧಿ ಇವರುಗಳನ್ನುಳಿದು ಬೇರಾರೂ ಆಕ್ಷೇಪಿಸದಿರುವುದು ಖೇದದ ಸಂಗತಿ.

ಕೇಂದ್ರದಲ್ಲಿ ಬಿಜೆಪಿ ಸರ್ಕಾರವನ್ನು ನಿಯಂತ್ರಿಸುತ್ತಿರುವ ಸಂಘ ಪರಿವಾರದ ಪರಿಭಾಷೆಯಲ್ಲಿ ಕೆಲವೊಂದು ಶಬ್ದಗಳಿಗೆ ಗೂಢಾರ್ಥವಿರುತ್ತದೆ. ಪ್ರಣಾಳಿಕೆಯ ಹಿಂದೆ ಗುಪ್ತ ಅಜೆಂಡಾ ಇದ್ದಂತೆ. 'ಭಾರತೀಯ ಸಂಸ್ಕೃತಿ' ಎಂಬ ಮಾತಿನ ಒಳ ಅರ್ಥ 'ಹಿಂದೂ ಸಂಸ್ಕೃತಿ' ಎಂದು. ಈ ಪದರವನ್ನೂ ಕಳಚಿ ನೋಡಿದರೆ ಅಲ್ಲಿ ಕಾಣುವುದು ಬ್ರಾಹ್ಮಣ ಸಂಸ್ಕೃತಿ ಮತ್ತು ಬ್ರಾಹ್ಮಣಿಕೆ.

ಬ್ರಾಹ್ಮಣಿಕೆ ಎಂಬ ಮಾತನ್ನು ಬಳಸದೆಯೇ ಅದನ್ನು ಸರ್ಕಾರಿ ಖರ್ಚಿನಲ್ಲಿ ಮತ್ತು ಶಿಕ್ಷಣ ಇಲಾಖೆ ಮೂಲಕ ಕೊಂಡಾಡುವ ಪ್ರಯತ್ನವೇ ಸಂಸ್ಕೃತ ಸಪ್ತಾಹ. 'ಪಾಶ್ಚಾತ್ಯ ಸಂಸ್ಕೃತಿಗೆ ಮಾರು ಹೋಗಿ ನಮ್ಮ ಸಂಸ್ಕೃತಿಯನ್ನು ನಾವು ಕಡೆಗಣಿಸಿದ್ದೇವೆ; ಸಂಸ್ಕೃತ ನಮ್ಮ ಸಂಸ್ಕೃತಿಯ ಬುನಾದಿ; ಸಂಸ್ಕೃತದ ಪುನರುದ್ಧಾರ ನಮ್ಮೆಲ್ಲರ ಆದ್ಯ ಕರ್ತವ್ಯ' ಇತ್ಯಾದಿ ಉಪದೇಶಗಳು ಈ ಸಪ್ತಾಹದಲ್ಲಿ ಪುನರುಚ್ಚಾರವಾಗಲಿದೆ. ಜತೆಗೆ ವೇದಗಳು, ರಾಮಾಯಣ, ಮಹಾಭಾರತ, ಮನುಸ್ಮೃತಿ, ಗೀತೆ ಇತ್ಯಾದಿಗಳ ವೈಭವೀಕರಣವೂ ನಡೆಯುತ್ತದೆ.

ಬ್ರಾಹ್ಮಣನಿಗೆ ವಿದ್ಯೆ, ಶೂದ್ರನಿಗೆ ಕಾಯಕ, ಹೊಲೆಯನಿಗೆ ಝಾಡ ಮಾಲಿ ಕೆಲಸ; ಎಂದ ಮೀಸಲಾತಿ ಸಂಹಿತೆಯೇ ಚಾತುರ್ವರ್ಣ್ಯ ಧರ್ಮ. ಇದು ಮನುಸ್ಮೃತಿ ಮತ್ತಿತರ ಶಾಸ್ತ್ರಗಳು ರೂಪಿಸಿದ ಸಮಾಜ ವಿಜ್ಞಾನ. ಇದನ್ನು ಜಾರಿಗೊಳಿಸುವುದೇ ರಾಜಧರ್ಮವಾಗಿತ್ತಾದ್ದರಿಂದ, ಸಂಸ್ಕೃತ ಎಂದೂ ಯಾವ ಕಾಲದಲ್ಲೂ ಜನ ಸಾಮಾನ್ಯರ ವ್ಯವಹಾರಿಕ ಭಾಷೆಯಾಗಿ ಉಪಯೋಗವಾದದ್ದೇ ಇಲ್ಲ. ಜನಜೀವನದಲ್ಲಿ ಇಲ್ಲದಿದ್ದ ಭಾಷೆಯ ಪುನರುಜ್ಜೀವನ ಎಂಬ ಮಾತಿಗೆ ಅರ್ಥವಿಲ್ಲ.

ಪ್ರೈಮರಿ, ಮಿಡಲ್, ಹೈಸ್ಕೂಲು, ಕಾಲೇಜು ಎಂಬ ನಾಲ್ಕು ಹಂತದ ಸಾರ್ವತ್ರಿಕ ಶಿಕ್ಷಣ ನೀತಿಯನ್ನು ದೇಶದಲ್ಲಿ ಪ್ರಪ್ರಥಮವಾಗಿ ಬ್ರಿಟಿಷರು ಜಾರಿಗೆ ತಂದ ನಂತರವೂ, ಸಂಸ್ಕೃತ ಜನಸಾಮಾನ್ಯರನ್ನು ತಲುಪಲೇ ಇಲ್ಲ. ಏಕೆಂದರೆ ಶಿಕ್ಷಣ ಕ್ಷೇತ್ರ ಮತ್ತು ಶಾಲಾ ಕಾಲೇಜುಗಳಲ್ಲಿ ಬ್ರಾಹ್ಮಣರೇ ತುಂಬಿಕೊಂಡಿದ್ದರು.

ಕುವೆಂಪುರವರ ಕಹಿ ಅನುಭವ

ಕುವೆಂಪು ವಿದ್ಯಾರ್ಥಿಯಾಗಿದ್ದಾಗ ಸಂಸ್ಕೃತವನ್ನು ಐಚ್ಛಿಕ ವಿಷಯವನ್ನಾಗಿ ಆರಿಸಿಕೊಂಡು ಸಂಸ್ಕೃತ ಕ್ಲಾಸಿನಲ್ಲಿ ಹೋಗಿ ಕುಳಿತಾಗ ಅಲ್ಲಿದ್ದ ಬ್ರಾಹ್ಮಣ ಮೇಷ್ಟ್ರು ಹುಡುಗ ಪುಟ್ಟಪ್ಪನ ಜಾತಿಯನ್ನು ಕೇಳಿ ತಿಳಿದುಕೊಂಡು 'ನಿನಗ್ಯಾಕೋ ಸಂಸ್ಕೃತ?' ಎಂದು ಗದರಿ ಹೊರಹಾಕಿದ ಕಹಿ ಘಟನೆಯನ್ನು ಕುವೆಂಪು ತಮ್ಮ ಆತ್ಮಕಥೆ 'ನೆನಪಿನ ದೋಣಿ'ಯಲ್ಲಿ ದಾಖಲಿಸಿದ್ದಾರೆ. ಅಂದಿನಿಂದಲೇ ಸಂಸ್ಕೃತದ ಬಗ್ಗೆ ತಮಗೆ ಮೂಡಿದ ತಿರಸ್ಕಾರದ ಬಗ್ಗೆಯೂ ಬರೆದಿದ್ದಾರೆ.

ಶ್ರವಣ ಎಂದರೆ ಕೇಳಿಸಿಕೊಳ್ಳುವುದು, ಶೃತಿ ಎಂದರೆ ಕೇಳಿಸಿಕೊಳ್ಳಲ್ಪಟ್ಟದ್ದು- ಎಂದರೆ ವೇದಗಳು. ವೇದಗಳು ಅಪೌರುಷೇಯ- **man made** ಅಲ್ಲದ್ದು. ದೇವರೇ ಹೇಳಿದ್ದು, ಶ್ರೋತ್ರಿ ಎಂದರೆ ಕೇಳಿಸಿಕೊಂಡವನು.

ಸ್ಮರಣೆಯಲ್ಲಿ ಉಳಿದುಕೊಂಡದ್ದು ಸ್ಮೃತಿ. ಸ್ಮೃತಿ ಎಂದರೆ ಮನುಸ್ಮೃತಿ ಮುಂತಾದ ಶಾಸ್ತ್ರಗಳು. ಮನುಧರ್ಮಶಾಸ್ತ್ರ ಎಂಬ ಹೆಸರೂ ಈ ಸ್ಮೃತಿಗೆ ಇದೆ. ಶಾಸ್ತ್ರಗಳನ್ನು ಅರಿತವನು ಶಾಸ್ತ್ರಿ. ಸ್ಮೃತಿಗಳನ್ನು ಪಾಲಿಸುವವನು ಸ್ಮಾರ್ತ. ಶೃತಿ ಸ್ಮೃತಿಗಳು ಚಾತುರ್ವರ್ಣ್ಯವನ್ನು ಅದೊಂದು ವಿಜ್ಞಾನವೆಂಬಂತೆ ವಿವರಿಸಿದೆ.

ಬ್ರಾಹ್ಮಣರು ರಚಿಸಿದ ಶೃತಿ ಸ್ಮೃತಿಗಳನ್ನು ದೂರವಿರಿಸಿ ಕ್ಷತ್ರಿಯರು ಉಪನಿಷತ್ತುಗಳನ್ನು ರಚಿಸಿದರು. ಇಲ್ಲಿ ಚಾತುರ್ವರ್ಣ್ಯದ ಪ್ರಸ್ತಾಪವಿಲ್ಲ. ಹನನ, ಹೋಮ, ಯಜ್ಞ ಇತ್ಯಾದಿ ವಿಧಿಗಳ (**Rituals**) ಪ್ರಸ್ತಾಪವಿಲ್ಲ. ನಿಜವಾದ ತತ್ವ ಜಿಜ್ಞಾಸೆ, ಉತ್ಕೃಷ್ಟ ಚಿಂತನೆ, ಉದಾತ್ತ ಭಾವನೆಗಳು, ಪ್ರಾಚೀನ ಸಂಸ್ಕೃತ ಸಾಹಿತ್ಯದಲ್ಲಿ ಎಲ್ಲಾದರೂ ಇದೆ ಎಂದರೆ ಅದು ಉಪನಿಷತ್ತುಗಳಲ್ಲಿ. ಆದ್ದರಿಂದಲೇ ಬ್ರಹ್ಮ ಸಮಾಜವನ್ನು ಸ್ಥಾಪಿಸಿದ ರಾಜಾರಾಮ ಮೋಹನ್‌ರಾಯ್ ಉಪನಿಷತ್ತುಗಳ ಅಧ್ಯಯನ ಪ್ರಚಾರಗಳಿಗೆ ಒತ್ತು ಕೊಟ್ಟರು.

ಇಡೀ ವಿಶ್ವದ ಅನಕ್ಷರಸ್ಥರಲ್ಲಿ ಅರ್ಧದಷ್ಟು ಭಾರತದಲ್ಲಿದ್ದಾರೆಂದು ಅಪಖ್ಯಾತಿಗೆ ನೇರ ಹೊಣೆ ಸ್ಮೃತಿ ಶೃತಿಗಳು ಮತ್ತು ಅವು ಬೆಳೆಸಿದ ಅಮಾನವೀಯ ಮೌಲ್ಯಗಳು. ಅಂಬೇಡ್ಕರ್, ಕುವೆಂಪುರಂತೆ ಅರಳಬೇಕಾಗಿದ್ದ ಎಷ್ಟೋ ಪ್ರತಿಭೆಗಳನ್ನು ಚಿವುಟಿ ಹಾಕಿದ ಹೆಗ್ಗಳಿಕೆ ಶೃತಿ-ಸ್ಮೃತಿಗಳ ಎಂದರೆ ವೈದಿಕರ ಸಂಸ್ಕೃತಿ ಪರಂಪರೆಗಳಿಗೆ ಸೇರುತ್ತದೆ.

ಜನಸಾಮಾನ್ಯರನ್ನು ದೂರವಿರಿಸಿದ ಸಂಸ್ಕೃತವನ್ನೇ ಬಸವಣ್ಣನವರು ದೂರವಿರಿಸಿ ಸಾಮಾನ್ಯರ ಭಾಷೆಯಲ್ಲಿ ತಿಳಿಸಲಾಗದ ತತ್ವ ಚಿಂತನೆಗಳಿಲ್ಲವೆಂಬುದನ್ನು ವಚನ ಸಾಹಿತ್ಯಕ್ಕೆ ನಾಂದಿ ಹಾಡುವ ಮೂಲಕ ದೃಢಪಡಿಸಿದರು.

ಇಂಗ್ಲಿಷನ್ನು ಯಾರು ಬೇಕಾದರೂ ಕಲಿಯುವ ಅವಕಾಶವನ್ನು ಬ್ರಿಟಿಷರು ಕಲ್ಪಿಸಿದರು. ಇಂದು ವಿಶ್ವ ಭಾಷಾಲೋಕದಲ್ಲಿ ಇಂಗ್ಲಿಷ್ ಹೆಮ್ಮರವಾಗಿ ನಿಂತಿದೆ. ಯಾವುದೇ ಭಾಷೆಯಲ್ಲಿರಬಹುದಾದ ಯಾವುದೇ ಉತ್ಕೃಷ್ಟ ಕೃತಿಗಳು- ಮನುಸ್ಮೃತಿಯಂಥ ಕುಖ್ಯಾತ ಕೃತಿಗಳೂ ಸಹ ಇಂಗ್ಲಿಷ್‌ನಲ್ಲಿ ಲಭ್ಯ. ಬೆಳವಣಿಗೆಗೆ ಬಿಸಿಲು, ಗಾಳಿ, ಮಳೆ ಅವಶ್ಯಕ. ಸಂಸ್ಕೃತವನ್ನು ಮುಚ್ಚಿಟ್ಟು ಬಚ್ಚಿಟ್ಟಿದ್ದರಿಂದ ಅದು ಸತ್ತು ಹೋಯಿತು. ಅದನ್ನು ಸಾಯಿಸಿದವರೇ ಈಗ ಅದರ ಪುನರುಜ್ಜೀವನದ ಮಾತಾಡುತ್ತಿದ್ದಾರೆ. ಈಗ ಸಂಸ್ಕೃತವನ್ನು ಕೇಳುವವರಿಲ್ಲ.

ಕುರಾನ್, ಬೈಬಲ್‌ಗಳನ್ನು ಪುಕ್ಕಟೆ ಹಂಚಲಾಗುತ್ತಿದೆ. ಇಡೀ ಮನುಸ್ಮೃತಿಯನ್ನು ಪುಕ್ಕಟೆ ಹಂಚುವ ಧೈರ್ಯ ವೈದಿಕರಿಗಿದೆಯೇ?

ಶಿಕ್ಷಣ ಕ್ಷೇತ್ರವನ್ನೂ ಅದರ ವ್ಯಾಪ್ತಿಯನ್ನೂ ವಿಸ್ತರಿಸಿದ ಬ್ರಿಟಿಷರು

ಸಾಮಾನ್ಯ ಜನರ ಬೌದ್ಧಿಕ ವಿಕಾಸ ಬಗ್ಗೆ ಅಂದಿನ ಗೌವರ್ನರ್ ಜನರಲ್ ವಾರೆನ್ ಹೇಸ್ಟಿಂಗ್ಸ್ ಆಸಕ್ತಿ ವಹಿಸಿದ್ದರಿಂದಾಗಿಯೇ 1781ರಲ್ಲಿ (18ನೇ ಶತಮಾನದ ಉತ್ತರಾರ್ಧ) ಕಲ್ಕತ್ತಾದ ಮದರಸಾ ಅಸ್ತಿತ್ವಕ್ಕೆ ಬಂತು. 1784ರಲ್ಲಿ ಸರ್ ವಿಲಿಯಮ್ ಜೋನ್ಸ್ ಬಂಗಾಳದ ಏಷ್ಯಾಟಿಕ್ ಸೊಸೈಟಿಯನ್ನೂ, 1792ರಲ್ಲಿ ರೆಸಿಡೆಂಟ್ ಆಗಿದ್ದ ಜೋನಾಥನ್ ಡೆಂಕನ್ ಕಾಶಿಯಲ್ಲಿ ಸಂಸ್ಕೃತ ಕಾಲೇಜನ್ನೂ ಸ್ಥಾಪಿಸಿದರು. ಶಾಲಾ ಕಾಲೇಜು ವಿದ್ಯಾಭ್ಯಾಸವನ್ನು ಸಾರ್ವತ್ರಿಕಗೊಳಿಸುವ ಉದ್ದೇಶದಿಂದ 1823ರಲ್ಲಿ (19ನೇ ಶತಮಾನ ಪೂರ್ವಾರ್ಧ) ಗೌವರ್ನರ್ ಜನರಲ್ ಲಾರ್ಡ್ ಅಮ್ಹರ್ಸ್ಟ್ ಸಾರ್ವಜನಿಕ ಶಿಕ್ಷಣ ಸಮಿತಿಯನ್ನು (**committee of public Instruction**) ನೇಮಿಸಿದ. ತಮ್ಮ ಸರ್ಕಾರದ ಸಿಬ್ಬಂದಿಯನ್ನು ತಯಾರಿಸುವುದಕ್ಕಾಗಿ ಇಂಗ್ಲಿಷ್ ಶಿಕ್ಷಣ ವ್ಯವಸ್ಥೆ ಮಾಡಿದ ಬ್ರಿಟಿಷರು ರೂಢಿಯಲ್ಲಿದ್ದ ಅರಬ್ಬಿ ಪರ್ಶಿಯನ್ ಮತ್ತು ಸಂಸ್ಕೃತಗಳ ಕಲಿಕೆ ಮತ್ತು ಈ ಭಾಷೆಯಲ್ಲಿನ ಸಾಹಿತ್ಯದ ಅಧ್ಯಯನಕ್ಕೆ ಪ್ರೋತ್ಸಾಹ ಮುಂದುವರೆಸಿದರು. ಕಲ್ಕತ್ತದಲ್ಲೂ ಒಂದು ಸಂಸ್ಕೃತ ಕಾಲೇಜನ್ನು ಸ್ಥಾಪಿಸಲು ಬ್ರಿಟಿಷ್ ಸರ್ಕಾರ ಪ್ರಯತ್ನಿಸಿದಾ[ಗ] ರಾಜಾರಾಮ್ ಮೋಹನ್‌ರಾಯ್ ಅದನ್ನು ವಿರೋಧಿ[ಸಿ] ಗೌವರ್ನರ್ ಜನರಲ್‌ಗೆ ಬರೆದ ಪತ್ರದ ಒಕ್ಕಣೆ ಬ[ಹಳ] ಅರ್ಥಪೂರ್ಣವಾಗಿದೆ.

'The pupils will have acquired wh[at] was known two thousand years ag[o] with the addition of vain and emp[ty] subtitles...'

'The Sanskrit system of education... would be at best calculated to keep th[e] country in darkness of such had bee[n] the policy of British legislature...'

ಖ್ಯಾತ ಇತಿಹಾಸಕಾರ ಆರ್.ಸಿ. ಮಜುಮ್‌ದಾರ[ರ] ಭಾರತ ಇತಿಹಾಸ ಕುರಿತ ಗ್ರಂಥದ 817ನೇ ಪು[ಟ] ನೋಡಿ.

(ಸಂಸ್ಕೃತ ಅಧ್ಯಯನದಿಂದ) ಈಗ್ಗೆ ಎರಡು ಸಾವಿ[ರ] ವರ್ಷಗಳ ಹಿಂದೆಯೇ ತಿಳಿದಿದ್ದ ಸಂಗತಿಗಳನ್ನೂ, ಜತೆ[ಗೆ] ಕೆಲ ನಿರರ್ಥಕ ಮತ್ತು ಪೊಳ್ಳು ವಿಚಾರಗಳ ಕುರಿ[ತ] ಸೂಕ್ಷ್ಮಗಳನ್ನೂ ವಿದ್ಯಾರ್ಥಿಗಳು ಅರಿತುಕೊಳ್ಳಬಲ್ಲರಷ್ಟೆ. '[ಈ] ದೇಶವನ್ನು ಕತ್ತಲಲ್ಲಿಡುವುದೇ ಬ್ರಿಟಿಷ್ ಶಾಸಕಾಂಗ[ದ] ಉದ್ದೇಶವಾಗಿದ್ದಲ್ಲಿ ಅದನ್ನು ಸಂಸ್ಕೃತ ವಿದ್ಯಾಭ್ಯಾಸಕ್ಕಿಂತ ಹೆ[ಚ್ಚು] ಸಮರ್ಥವಾಗಿ ಈಡೇರಿಸಬಲ್ಲ ಬೇರೊಂದು ವ್ಯವ[ಸ್ಥೆ] ಇರಲಾರದು.'


ದೇಶದಲ್ಲಿ ಅಭಿವೃದ್ಧಿ ಸರ್ಕಾರದ ಉದಾ[ತ್ತ] ಉದ್ದೇಶವಾಗಿದ್ದಲ್ಲಿ ಜನರಿಗೆ ನಿಜವಾದ ಜ್ಞಾನದ ಬೆಳಕ[ನ್ನು] ನೀಡಬಲ್ಲ ಗಣಿತಶಾಸ್ತ್ರ ರಸಾಯನ ಶಾಸ್ತ್ರ ಶರೀರ ಶಾ[ಸ್ತ್ರ] ಮುಂತಾದ ಉಪಯುಕ್ತ ವಿಜ್ಞಾನದ ವಿಷಯಗಳ ಬೋಧನೆ[ಯ] ಕ್ರಮ ಕೈಗೊಳ್ಳಬೇಕು ಎಂದು ಇದೇ ಪತ್ರದಲ್ಲಿ ರಾಜಾರಾಮ್ ಮೋಹನ್‌ರಾಯ್ ಆಗ್ರಹ ಪಡಿಸಿದರು.

1834ರಲ್ಲಿ ಗೌವರ್ನರ್ ಜನರಲ್ ವಿಲಿಯ[ಮ್] ಬೆಂಟಿಂಕ್, ಸಾರ್ವಜನಿಕ ಶಿಕ್ಷಣ ಕ್ರಾಂತಿ ಶಿಕ್ಷಣ ಸಮಿತಿ[ಗೆ] ಥಾಮಸ್ ಬಾಬಿಂಗ್‌ಟನ್ ಮಕಾಲೆಯನ್ನು ಅಧ್ಯಕ್ಷನನ್ನಾ[ಗಿ] ನೇಮಿಸಿದ ನಂತರ ಈ ದೇಶದಲ್ಲಿ ಶಿಕ್ಷಣದ ಕ್ರಾಂತಿಯೆ[ೇ] ಆಯಿತು. 1835ರಲ್ಲಿ ಶಿಕ್ಷಣಕ್ಕೆಂದು ಸರ್ಕಾರ ಮೀಸಲಿರಿಸು[ವ] ಎಲ್ಲ ಹಣವನ್ನೂ ಆಧುನಿಕ ವಿದ್ಯಾಭ್ಯಾಸಕ್ಕಾಗಿ ಮಾತ್ರ ವಿನಿಯೋಗಿಸತಕ್ಕದ್ದೆಂದೂ, ಸಂಸ್ಕೃತ, ಅರಬ್ಬಿ, ಪರ್ಶಿಯ[ನ್] ಅಧ್ಯಯನಕ್ಕೆಂದು ಸರ್ಕಾರದ ಹಣ ವಿನಿಯೋಗಿಸಬಾ[ರ]ದೆಂದೂ, ಭಾರತೀಯ ಎಂದರೆ ಸ್ಥಳೀಯ ಭಾಷೆಗಳ ಮ[ತ್ತು] ಅವುಗಳಲ್ಲಿನ ಸಾಹಿತ್ಯದ ಕಲಿಕೆ ಮತ್ತು ಈ ಭಾಷೆಗ[ಳ] ಬೆಳವಣಿಗೆಗೆ ಕ್ರಮ ಕೈಗೊಳ್ಳಬೇಕೆಂದೂ, ತೀರ್ಮಾನಿ[ಸ]ಲಾಯಿತು. ಈ ಕ್ರಮಗಳನ್ನು ಶಿಕ್ಷಣ ಕ್ರಾಂತಿ ಎಂದ[ು] ಗುರುತಿಸದಿರುವುದು ನಮಗೆ ನಾವೇ ಮಾಡಿಕೊಂ[ಡ] ಅನ್ಯಾಯ. ಈ ಕ್ರಮಗಳನ್ನು ಕೈಗೊಳ್ಳದಿದ್ದಲ್ಲಿ ಸರ್ ಸಿ.[ವಿ.] ರಾಮನ್, ಸರ್ ಎಂ. ವಿಶ್ವೇಶ್ವರಯ್ಯ- ಈ ತೆರನಾ[ದ] ಪ್ರತಿಭೆಗಳು ಬೆಳಗುತ್ತಿರಲಿಲ್ಲವಷ್ಟೇ ಅಲ್ಲ; ಗಾಂಧೀಜಿ, ನೆಹ[ರು] ಪಟೇಲರಂಥ ನಾಯಕರೂ ತಲೆ ಎತ್ತುತ್ತಿರಲಿಲ್ಲ.

ಅಂತೆಯೇ ಸಾರ್ವತ್ರಿಕ ಶಾಲಾ ಕಾಲೇಜುಗಳನ್ನು ಸ್ಥಾಪಿಸಿದ ಕ್ರೈಸ್ತ ಮಿಷನರಿಗಳ ಪಾತ್ರವೂ ಸ್ಮರಣೀಯ. ಇಂಥ ಸ್ತುತ್ಯ ಕಾರ್ಯವನ್ನು ಯಾವುದೇ ಬ್ರಾಹ್ಮಣ ಮ[ಠ] ಅಂದಿಗೂ ಮಾಡಲಿಲ್ಲ; ಇಂದಿಗೂ ಮಾಡುತ್ತಿಲ್ಲ.

■ ಪಿ.ಎಸ್. ಶ್ರೀಧರಮೂರ್ತಿ

ಯಾರಿವರು?



ಸೂರ್ಯನ ಕಣ್ಬೆಳಕಿನಲಿ
ವಾಸ್ತವದ ನೆಲೆ ಮರೆತು
ಬಹುಮುಖ ಕ್ರೌರ್ಯವ
ಮೈಗೂಡಿಸಿಕೊಂಡವರು


ಖಾದಿ, ಖಾವಿ, ಖಾಕಿ ತೊಟ್ಟವರು
ಪೆನ್ನು ಹಿಡಿದವರು
ಗನ್ನು ಹಿಡಿದವರು
ರನ್ನು ಹೊಡೆದವರು
ಗೆಜ್ಜೆ ಕಟ್ಟಿ ಕುಣಿದವರು

ಅಭಿವೃದ್ಧಿಯ ಹರಿಕಾರರೆಂದು
ಹೇಳುವವರು ಜಾತಿಧರ್ಮಗಳ
ಮುಂದಿಟ್ಟುಕೊಂಡು
ಹೋರಾಡುವ ಮಹಾವೀರರು
ಬದುಕಲೊಂದು ಬದುಕು
ಸಾಲದೆಂದು ಭಾವಿಸಿದವರು

ಮಾನ ಮರ್ಯಾದೆಗಳ ದೂರವಿಟ್ಟವರು
ಮಧುರ ಕನಸುಗಳನೆಂದೂ ಕಾಣದವರು

ಕೂಸು ಹುಟ್ಟುವ ಮುನ್ನವೇ
ಕುಲಾವಿ ಹೊಲಿಸಿದವರು

ಒಡೆದ ಕನ್ನಡಿಯೊಳಗೆ ಬಿಂಬಿಸಿಕೊಂಡು
ಜಲದ ಕಣ್ಣಾಗಿ ಇಪ್ಪತ್ತನಾಲ್ಕು
ಗಂಟೆಯೂ ಆತ್ಮಕಥನದ
ಕಥೆ ಹೇಳುವವರು
ನಮ್ಮ ನಾಯಕರಿವರು
ಶುದ್ಧ ನಡೆನುಡಿ ಆಚಾರವನೆಂದೂ
ಮೈಗೂಡಿಸಿಕೊಳ್ಳದವರು
ಕೆಟ್ಟ ಮನಸ್ಸಿನ ದಿಟ್ಟರಿವರು
ಶ್ರಮದ ದುಡಿಮೆಯೊಳಗೆ
ನಂಬಿಕೆಯನಿರಿಸಿ ಕೊಟ್ಟದ್ದರಲ್ಲಿ
ತೃಪ್ತಿಪಡದ ಅಸಾಮಾನ್ಯ ಜನರಿವರು
ಅವರವರ ಬೆನ್ನೆಲುಬು ಅವರೇ
ಮುರಿದುಕೊಂಡು ಒಬ್ಬರಿಗೊಬ್ಬರು
ತೀರಾ ಖಾಸಗಿಯಾಗಿ ಅಭಿನಂದಿಸಿ
ಕೊಂಡು ಖುಷಿ ಪಟ್ಟವರು
ಪ್ರಶ್ನೆಯೊಳಗಿನ ಪ್ರಶ್ನೆಯಾಗಿ
ಉತ್ತರದೊಳಗೆ ಉತ್ತರವ
ಹುಡುಕಿ ಕತ್ತಲೊಳಗೆ ನಕ್ಕವರು



ಡಾ|| ಡಿ.ಸಿ.ರಾಜಪ್ಪ

...ತ್ಯಾಚಾರ ಮತ್ತು ಅಸ್ಪೃಶ್ಯತೆ: ಒಂದೇ ಮರದ ಎರಡು ರೆಂಬೆಗಳು



...ವನೂರ ಮಹಾದೇವರವರು 'ಎದೆಗೆ ಬಿದ್ದ ... ಹೆಣ್ಣು ಜಾತಿ ಮತ್ತು ದಲಿತ ಜಾತಿ ಎಂಬ ...ಯುಲ್ಲಿ ಒಂದು ಘಟನೆ ವಿವರಿಸಿದ್ದಾರೆ. ...ಯೊಬ್ಬಳು ಪ್ಯಾಂಟ್ ತೊಟ್ಟು ಬಂದಾಗ ಅವರ ...ನಲ್ಲಿ ಒಳಗೊಳಗೆ ಕಸಿವಿಸಿಯಾಗಿ ಒಬ್ಬನು ...ಷ್ಟನ್ನು ಕಕ್ಕುತ್ತಾನೆ 'ಬಹಳ ಧಿಮಾಕಿನವಳು' ಎಂದು. ...ಪ್ಯಾಂಟು ತೊಟ್ಟದ್ದಕ್ಕೆ ಗಂಡಸಿಗೆ ತನ್ನದೇನನ್ನೋ ...ಳ್ಳುವಂತಾಯಿತು. ಹೀಗೆ ಅವಳನ್ನು ನೋಡಿ ...ಸುವ, ಧರ್ಮ ಹಾಳಾಯಿತೆಂದು ವಟಗುಟ್ಟುವ ... ಜಾತಿ ಹೇಗೋ ಅದೇರೀತಿ ದಲಿತನೊಬ್ಬ ...ಷ್ ಆಗಿ ಬಂದಾಗ ಅಲ್ಲಿನ ಸವರ್ಣೀಯರಿಗೂ ...ಗೆಯೇ ಎನಿಸುತ್ತದೆ ಎಂಬ ಸತ್ಯವನ್ನು ದೇವನೂರರು ...ಚೆನ್ನಾಗಿ ಗುರುತಿಸಿದ್ದಾರೆ. ಮತ್ತೊಂದು ನಗ್ನ ...ನಡೆ ಆ ಹೆಣ್ಣನ್ನು ಹೀಯಾಳಿಸುವ ಗುಂಪಿನಲ್ಲಿ ... ಇರುತ್ತಾನೆ ಮತ್ತು ದಲಿತನ ಹೀಯಾಳಿಸುವ ...ಯು ಹೆಣ್ಣು ಕೂಡ ಇರುತ್ತಾಳೆ. ಇದು ಈ ದೇಶದಲ್ಲಿನ ...ಮತ್ತು ವರ್ಗಗಳೆರಡರ ಜುಗಲ್ ಬಂಧಿ. ಅದೇನೆ ... ಕರ್ನಾಟಕವೂ ಸೇರಿದಂತೆ ಭಾರತದಾದ್ಯಂತ ...ತ್ತಿರುವ ಅತ್ಯಾಚಾರ ಪ್ರಕರಣಗಳು ದಿನದಿಂದ ದಿನಕ್ಕೆ ...ತ್ತಿವೆ. ಇದಕ್ಕೆ ರಾಜಕೀಯದ ಟಚ್ ಕೊಟ್ಟು ...ಡುವವರು ಒಂದು ಕಡೆಯಾದರೆ, ಜನಪರ ...ಗಳು ತಮ್ಮದೂ ಒಂದು ಕೂಗಿರಲಿ ಎಂದು ...ಬಿದ್ದಾರೆ. ಇವರಿಬ್ಬರನ್ನೂ ಟಿವಿಯಲ್ಲಿ ನೋಡುವ ... ಬುಡಕ್ಕೆ ತಣ್ಣೀರು ತಾಗಿ ಒದ್ದೆಯಾಗುವವರೆಗೂ ...ಸುವವರಲ್ಲ. ಅಮ್ಮಮ್ಮಾ ಎಂದರೆ ಫೇಸ್‌ಬುಕ್ ... ಕಮೆಂಟುಗಳಲ್ಲೆ ನಮ್ಮ ಹೋರಾಟಗಳು ...ವುದು ನಾಚಿಕೆಪಟ್ಟುಕೊಳ್ಳಬೇಕಾದ ವಿಚಾರ.

...ತಹ ಪರಿಸ್ಥಿತಿಯಲ್ಲಿ ಅತ್ಯಾಚಾರವನ್ನು ...ಖುವವರೂ ಸಹ ಅದರ ಬುಡಕ್ಕೆ ಕೈಹಾಕಲು ...ವುದಿಲ್ಲ, ಅವರ ಪ್ರಕಾರ 'ಮುಟ್ಟಾಗುವವಳನ್ನು ...ಂದ ದೂರ ಇಟ್ಟಿರುವುದಕ್ಕೂ ಅವಳ ಅತ್ಯಾಚಾರಕ್ಕೂ ...ಧವಿಲ್ಲ'. ಸರ್ಕಾರಗಳ ಕಾನೂನಿಗಿಂತ ಆಚೆ ...ನ್ನುದಿದೆ ಎನ್ನುವುದು ಅರಿವಿಗೆ ಬರುತ್ತಿಲ್ಲ, ಇಲ್ಲಿ ...ಬ್ಬು ವಿಚಾರವನ್ನೂ ಪ್ರಸ್ತಾಪಿಸಬೇಕಿದೆ. ಸಮಾಜದ ...ಯು ಜೀವಿಗಳಾಗಿರುವ ದಲಿತರು ಮತ್ತು ...ಯರ ವಿಚಾರ ಒಂದೇ ನಾಣ್ಯದ ಎರಡು ಮುಖಗಳಂತೆ. ಇಬ್ಬರದೂ ಒಂದೇ ಯಾತನೆ. ಒಬ್ಬರದನ್ನು ಮತ್ತೊಂದು ಮೀರಿಸುತ್ತದೆ. ಇದಕ್ಕೆ ಪುರಾವೆಯಾಗಿ ಎನ್‌.ಸಿ.ಆರ್‌.ಬಿಯ ವರದಿಯನ್ನು ನೋಡಿದರೆ ಸಾಕು.

ಅದು ಹೇಳುವಂತೆ ಭಾರತದಲ್ಲಿ ಪ್ರತಿ 20 ನಿಮಿಷಗಳಿಗೆ ಮಹಿಳೆಯರ ಮೇಲೊಂದು ಅತ್ಯಾಚಾರವಾಗುತ್ತದೆ. ಪ್ರತಿ 18 ನಿಮಿಷಗಳಿಗೆ ದಲಿತರ ಮೇಲೆ ಒಂದು ದೌರ್ಜನ್ಯವಾಗುತ್ತದೆ. ಅದರಲ್ಲಿ ಪ್ರತಿ ದಿನಕ್ಕೆ ಮೂವರು ದಲಿತ ಮಹಿಳೆಯರ ಅತ್ಯಾಚಾರವಾಗುತ್ತದೆ, ಇಬ್ಬರು ದಲಿತರ ಹತ್ಯೆಯಾಗುತ್ತಿದೆ, ಎರಡು ಮನೆಗಳಿಗೆ ಬೆಂಕಿ ಇಡಲಾಗುತ್ತಿದೆ. ಸಹಜವಾಗಿ ಇವುಗಳೆಲ್ಲವೂ ಪೊಲೀಸ್ ಸ್ಟೇಷನ್ ಹತ್ತಿರುವ ಪ್ರಕರಣಗಳು. ಆದರೆ ದಾಖಲಾಗದ ಪ್ರಕರಣಗಳು ಬೆಟ್ಟದಷ್ಟಿವೆ. ಅತ್ಯಾಚಾರವಾಗಲೀ, ದಲಿತರ ಮೇಲಿನ ದೌರ್ಜನ್ಯವಾಗಲೀ ಅಷ್ಟು ಸುಲಭವಾಗಿ ಪೊಲೀಸ್ ಸ್ಟೇಷನ್ ಮೆಟ್ಟಿಲುಗಳನ್ನು ಏರುವುದಿಲ್ಲ, ಕೇವಲ ಶೇ. 10 ರಷ್ಟು ಅತ್ಯಾಚಾರ ಪ್ರಕರಣಗಳು ಮಾತ್ರ ದಾಖಲಾಗುತ್ತಿದ್ದರೆ. ಶೇ. 28 ರಷ್ಟು ಹಳ್ಳಿಗಳಲ್ಲಿ ದಲಿತರು ಪೊಲೀಸ್ ಸ್ಟೇಷನ್‌ಅನ್ನು ಪ್ರವೇಶಿಸುವಂತೆಯೇ ಇಲ್ಲ, ಅಷ್ಟಕ್ಕೂ ನ್ಯಾಯಾಲಯದ ಬಾಗಿಲು ತಟ್ಟುವ ಮೇಲಿನ ಇಬ್ಬರಿಗೂ ದಕ್ಕಿರುವುದಾದರೂ ಏನು? ಅತ್ಯಾಚಾರ ಪ್ರಕರಣಗಳಿಗೆ ಶೇ. 26 ರಷ್ಟು ಮತ್ತು ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳಿಗೆ ಶೇ. 2.4 ಕ್ಕೆ ಮಾತ್ರ ಶಿಕ್ಷೆಯಾಗಿರುತ್ತದೆ. ಕರ್ನಾಟಕದಲ್ಲಿ ಇದು ಕ್ರಮವಾಗಿ ಶೇ. 20 ಮತ್ತು ಶೇ. 5 ಮಾತ್ರ. ಖುಲಾಸೆಗಳ ಸಂಖ್ಯೆಯೇ ಹೆಚ್ಚು, ಇದರ ಹಿಂದೆ ಈ ನೆಲದ ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ನಂಬಿಕೆ, ಆಚರಣೆಗಳ ಮತ್ತು ಅವುಗಳ ಹಿಂದಿನ ಪಟ್ಟಭದ್ರ ಹಿತಾಸಕ್ತಿಗಳ ಕೈವಾಡವಿರುವುದು ಸುಳ್ಳಲ್ಲ. ಇದು ತಿಳಿದೂ ತಿಳಿದೂ ಜಡವಾಗಿರುವ ಜನಸಮೂಹ ಮಾತ್ರ ಸಮೂಹ ಸನ್ನಿಯಲ್ಲಿ ಮುಳುಗಿರುವುದು ಈ ದೇಶದ ದುರಂತ.

ಪುರುಷ ಅಹಂಕಾರ ಎಲ್ಲಿಯವರೆಗೆ ಮಿತಿ ಮೀರಿದೆ ಎಂದರೆ ಎಳೆ ಹಸುಳೆಯಿಂದ ಹಿಡಿದು ಹಣ್ಣು ಮುದುಕಿಯವರೆಗೂ ಪಾಪಿಗಳು ಅತ್ಯಾಚಾರವೆಸಗಿ ದ್ದಾರೆ ಮತ್ತೂ ಆಶ್ಚರ್ಯ ಪಡುವ ವಿಚಾರವೆಂದರೆ ಶೇ. 8 ರಷ್ಟು ಅತ್ಯಾಚಾರಗಳನ್ನು ಮನೆಯವರು ಮತ್ತು ಸಂಬಂಧಿಕರು ಮಾಡಿದ್ದರೆ. ಶೇ. 35 ರಷ್ಟನ್ನು ನೆರೆಹೊರೆಯವರು ನಡೆಸಿರುವುದು. ಕರ್ನಾಟಕದಲ್ಲಿ ಕಳೆದ ವಾರ ನಡೆದ 10 ಅತ್ಯಾಚಾರಗಳಲ್ಲಿ 8 ನ್ನು ಕುಟುಂಬಕ್ಕೆ ಬಹಳ ಹತ್ತಿರದವರು ಮಾಡಿದ್ದಾರೆ. ಇನ್ನು ದಲಿತರ ವಿಚಾರಕ್ಕೆ ಬಂದರೆ, ದಲಿತರ ಮೇಲಿನ ದೌರ್ಜನ್ಯ ಕಳೆದ ವರ್ಷಕ್ಕಿಂತ ಶೇ. 17 ರಷ್ಟು ಹೆಚ್ಚಾಗಿದೆಯಲ್ಲದೆ ಇತಿಹಾಸದ ಪುಟಗಳಲ್ಲಿ ನ್ಯಾಯ ಸಿಗದೆ ನರಳಾಡುತ್ತಿರುವ ಖೈರ್ಲಾಂಜಿ, ಕಂಬಾಲಪಲ್ಲಿ, ನಾಗಲಾಪಲ್ಲಿ, ಚುಂಡೂರು, ಬತಾನಿ ತೋಲ, ಮುಂತಾದ ಪ್ರಕರಣಗಳಲ್ಲಿ ಇಡೀ ಊರಿಗೆ ಊರೇ ದಲಿತರ ಹತ್ಯೆಯಲ್ಲಿ ಭಾಗಿಯಾದದ್ದು ಮೇಲ್ಜಾತಿ ಅಹಂಕಾರವನ್ನು ಪ್ರತಿಬಿಂಬಿಸುತ್ತದೆ. ಇವುಗಳೆಲ್ಲವೂ ಕೇವಲ ಕಾನೂನಿನ ವೈಫಲ್ಯವನ್ನು ಮಾತ್ರ ತೋರಹಾಕುತ್ತಿಲ್ಲ, ನಾನಾಗಲೇ ಹೇಳಿದಂತೆ ಈ ನೆಲದ ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ ಮತ್ತು ಸಾಮಾಜಿಕ ಪ್ರಶ್ನೆಗಳು ಮೂಲಕಾರಣಗಳಾಗಿವೆ. ಮಹಿಳೆ ಮತ್ತು ದಲಿತರು ಸಮಾಜದಿಂದ ನಿರ್ಲಕ್ಷ್ಯಕ್ಕೆ ಒಳಗಾಗಿರುವುದಕ್ಕೂ ಅವರ ಮೇಲೆ ದೌರ್ಜನ್ಯ ನಡೆಯು ವುದಕ್ಕೂ ನೇರಾನೇರ ಸಂಬಂಧವಿದೆ. ಕೇವಲ ಕಾನೂನು ಗಳನ್ನು ಮಾಡುವುದರಿಂದ ಸಂಪೂರ್ಣ ಅತ್ಯಾಚಾರ ಮುಕ್ತ ದೇಶವನ್ನಾಗಿಯಾಗಲೀ, ಅಸ್ಪೃಶ್ಯತೆ ಮುಕ್ತ ದೇಶವನ್ನಾಗಿ ಯಾಗಲೀ ಮಾಡಲು ಸಾಧ್ಯವಿಲ್ಲ, ಅದಕ್ಕೆ ಸಾಕ್ಷಿಯಾಗಿ ನಮ್ಮ ಕಣ್ಣ ಮುಂದೆ ಅಸ್ಪೃಶ್ಯತೆ ನಿಷೇದಕ್ಕೆ ಸಂಬಂಧಪಟ್ಟಂತೆ ಮಾಡಿರುವ ಕಾನೂನುಗಳ ಗತಿಯೇ ಸಾಕ್ಷಿ. ಸಂವಿಧಾನದಲ್ಲಿಯೆ ಅಸ್ಪೃಶ್ಯತೆಯನ್ನು ನಿಷೇಧಿಸಿ ಇಂದು ಪ್ರತ್ಯೇಕ ಕಾನೂನುಗಳನ್ನು ಮಾಡಿದ್ದರೂ ದಲಿತರ ಮೇಲಿನ ತಾರತಮ್ಯ ಮತ್ತು ದೌರ್ಜನ್ಯಗಳು ನಿಂತಿಲ್ಲ, ದಿನದಿಂದ ದಿನಕ್ಕೆ ಅವರ ಮೇಲಿನ ದೌರ್ಜನ್ಯಗಳು ಹೆಚ್ಚಾಗುತ್ತಲೆ ಇವೆ. ಆದ್ದರಿಂದ ಅತ್ಯಾಚಾರ ಮತ್ತು ಅಸ್ಪೃಶ್ಯತೆ ಸಮಸ್ಯೆ ಬಗೆಹರಿಯಬೇಕಾದರೆ ಸಮರ್ಥ ಕಾನೂನುಗಳ ಜೊತೆಗೆ ಪುರುಷ ಅಹಂಕಾರಕ್ಕೆ, ಸವರ್ಣೀಯ ಪ್ರಜ್ಞೆಗೆ ಕೊಳ್ಳಿ ಇಡಬೇಕಾದ ಕೆಲಸವನ್ನು ಸ್ವತಃ ಹೆಣ್ಣಿನಿಂದ ಮತ್ತು ದಲಿತರಿಂದ ಮಾಡಿಸಬೇಕಿದೆ. ಅವರಿಗೆ ನೈತಿಕ ಬೆಂಬಲ ನೀಡುವ ಜಾತಿರಹಿತ ಸಾಮಾಜಿಕ ಹೋರಾಟವೊಂದು ರೂಪುಗೊಂಡು ಹಳ್ಳಿಗಳನ್ನು ಪ್ರವೇಶಿಸಬೇಕಿದೆ. ಇದರ ಆರಂಭವಾಗಿ ಪಠ್ಯ ಪುಸ್ತಕಗಳಲ್ಲಿ ಲಿಂಗ ಸೂಕ್ಷ್ಮತೆ ಪಾಠಗಳು ನುಸುಳಬೇಕಿದೆ. ಇದಕ್ಕೂ ಮಿಗಿಲಾಗಿ ಅತ್ಯಾಚಾರವೆಂಬುದು ಗಂಡಸಿನ ರೋಗವೆಂದೂ, ಅತ್ಯಾಚಾರದಲ್ಲಿ ಶೀಲ ಅವನದು ಮಾತ್ರ ನಾಶವಾಗುತ್ತದೆ ಯೆಂದೂ, ಅಸ್ಪೃಶ್ಯತೆಯೆಂಬುದು ಸವರ್ಣೀಯನ ರೋಗ ವೆಂದೂ, ಆಯಾ ರೋಗಕ್ಕೆ ಅವರವರೇ ಪರಿಹಾರ ಕಂಡುಕೊಳ್ಳಲು ಸೂಚಿಸಬೇಕಿದೆ. ಇಲ್ಲದಿದ್ದರೆ ಪರ್ಫ್ಯೂಮ್ ಕಂಪೆನಿಗಳ ಜಾಹೀರಾತುಗಳಂತೆ ಪ್ರತಿ ವಿಕೃತ ಗಂಡಸಿಗೂ ಹೆಣ್ಣಿನ ಪ್ರತಿ ಅಂಗವೂ ಯೋನಿಯಂತೆಯೆ ಕಾಣಿಸುತ್ತದೆ. ಪ್ರತಿ ದಲಿತೇತರನಿಗೂ ತಾನೂ ದಲಿತರಿಗಿಂತ ಮೇಲೆಂದುಕೊಳ್ಳುವ ರೋಗವೂ ಅವನ್ನೆ ನಾಶ ಮಾಡುತ್ತದೆ.

■ ವಿಕಾಸ್ ಆರ್ ಮೌರ್ಯ

ಕರ್ನಾಟಕ ವಿವಿ: ಕನ್ನಡಕ್ಕೆ ಅನ್ಯಾಯ



...ರ್ನಾಟಕ ಏಕೀಕರಣ ಚಳವಳಿಯಿಂದ ಹಿಡಿದು ...ಕ್ ಚಳವಳಿಯವರೆಗೆ ಕನ್ನಡನಾಡು ನುಡಿಗಳ ಜಾಗೃತಿ ... ಹೋರಾಟದ ವಿಷಯದಲ್ಲಿ ಧಾರವಾಡ ಒಂದು ಶಕ್ತಿಕೇಂದ್ರವಾಗುತ್ತ ಬಂದಿದೆ. ನಾಡು ಮತ್ತು ...ಳಿಗೆ ಅನ್ಯಾಯವಾದಾಗ ಹೋರಾಟಗಳನ್ನು ಹುಟ್ಟು ...ಹಿರಿಮೆ ಧಾರವಾಡಕ್ಕಿದೆ. ಇಂಥ ನಾಡುನುಡಿಯ ... ಮತ್ತು ಅಭಿಮಾನದ ನೆಲದಲ್ಲಿ 'ಕರ್ನಾಟಕ'ವೆಂಬ ...ಟ್ಟುಕೊಂಡ ರಾಜ್ಯದ ಏಕೈಕ ವಿಶ್ವವಿದ್ಯಾಲಯ ...ಕ ವಿಶ್ವವಿದ್ಯಾಲಯವೆಂಬ ಹೆಮ್ಮೆ ಕೂಡ ನಮ್ಮದು. ... ದೀಪದ ಕೆಳಗೇ ಕತ್ತಲು ಎಂಬಂತೆ ಕರ್ನಾಟಕ ...ದ್ಯಾಲಯ ಹುಟ್ಟಿದಂದಿನಿಂದಲೇ ಒಂದು ವಿಷಯದಲ್ಲಿ ... ನಿರಂತರವಾಗಿ ಅನ್ಯಾಯವಾಗುತ್ತಲೇ ಬಂದಿದೆ. ...ಂದರೆ ಬಿ.ಕಾಂ. ಎರಡನೆಯ ವರ್ಗಕ್ಕೆ ಕನ್ನಡವನ್ನು ... ವಿಷಯವಾಗಿ ಅಳವಡಿಸದೇ ಇರುವುದು.

...ರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳೂ ತಮ್ಮ ...ನೀತಿಯಲ್ಲಿ ಯಾವುದೇ ಪದವಿ ಹಂತದಲ್ಲಿ ನಾಲ್ಕು ...ರ್‌ಗಳಿಗೆ ಅವಶ್ಯಕ ಭಾಷಾ ವಿಷಯದ ಕಲಿಕೆಯನ್ನು ...ಗೊಳಿಸಿ ಬಿ.ಎ., ಬಿ.ಕಾಂ., ಬಿ.ಎಸ್‌ಸಿ ತರಗತಿಗಳಿಗೆ ...ಅವಶ್ಯಕವನ್ನು ಅಳವಡಿಸಿ ತಮ್ಮ ಭಾಷಾಪ್ರೇಮವನ್ನು ...ಪೆ. ಮಾನವಿಕ, ವಿಜ್ಞಾನ ಹಾಗೂ ವಾಣಿಜ್ಯ ಹೀಗೆ ...ವುದೇ ನಿಕಾಯವಿರಲಿ ವಿದ್ಯಾರ್ಥಿಗಳ ಸ್ವತಂತ್ರ ಚಿಂತನೆ ... ಅಭಿವ್ಯಕ್ತಿಗೆ ಭಾಷೆಯ ಅಧ್ಯಯನ ಅನಿವಾರ್ಯವೆಂಬ ...ಕ ಚಿಂತನೆಯ ತಳಹದಿ ಇಲ್ಲಿದೆ. ಆದರೆ ಕರ್ನಾಟಕ ...ದ್ಯಾಲಯ ಮಾತ್ರ ಇಲ್ಲಿಯವರೆಗೂ ಬಿಕಾಂ ಎರಡನೇ ...ಕ್ಕೆ ಕನ್ನಡವನ್ನು ಅಳವಡಿಸದೇ ಕನ್ನಡ ವಿರೋಧಿ ...ನ್ನು ಪ್ರಕಟಿಸುತ್ತಾ ಬಂದಿದೆ. ಕನ್ನಡಕ್ಕೆ ಆಗುತ್ತಿರುವ ...ನ್ಯಾಯಕ್ಕೆ ಇಲ್ಲಿಯವರೆಗೆ ಕರ್ನಾಟಕ ವಿಶ್ವವಿದ್ಯಾಲಯದ ...ಪತಿಗಳಾಗಿ ಆಡಳಿತ ನಡೆಸಿದ ಎಲ್ಲ ಮಹನೀಯರೂ ...ಸ್ಥರಾಗಿದ್ದಾರೆ. ಇದರಿಂದ ವಾಣಿಜ್ಯಶಾಸ್ತ್ರ ವಿಭಾಗದಲ್ಲಿ ... ಅಧ್ಯಯನಕ್ಕೆ ಭಾರೀ ಹಿನ್ನಡೆಯಾಗಿದೆ.

...ಜ್ಯದ ಆಡಳಿತ ಭಾಷೆಯಾದ ಕನ್ನಡವನ್ನು ಯಶಸ್ವಿ ... ಆಡಳಿತದಲ್ಲಿ ಜಾರಿಗೆ ತರಬೇಕಾದರೆ ಉನ್ನತ ... ಎಲ್ಲ ಸ್ತರಗಳಲ್ಲಿ ಕನ್ನಡ ಅಧ್ಯಯನಕ್ಕೆ ಮಹತ್ವದ ...ಸಿಗಬೇಕು. ವಾಣಿಜ್ಯ ವ್ಯವಹಾರಗಳಲ್ಲಿ ಕನ್ನಡ ... ಬರಬೇಕಾದರೆ ವಾಣಿಜ್ಯ ವಿದ್ಯಾರ್ಥಿಗಳು ಕನ್ನಡವನ್ನು ... ಕಲಿಯಬೇಕು. 'ಬ್ಯಾಂಕಿಂಗ್' ಮತ್ತು ವಾಣಿಜ್ಯ ...ಲ್ಲಿ ಕನ್ನಡವನ್ನು ಜಾರಿಗೆ ತರುವ ಸರಕಾರದ ಸಂಕಲ್ಪಕ್ಕೆ, ... ತರಗತಿಗಳಲ್ಲಿ ಕನ್ನಡ ಕಲಿಕೆಗೆ ಅವಕಾಶ ಕಲ್ಪಿಸುವುದು [illegible] ಭಾಷೆ, ಸಂಸ್ಕೃತಿ, ಜ್ಞಾನ ಪರಂಪರೆಗಳು ಎದುರಿಸುತ್ತಿರುವ ಆತಂಕವನ್ನು ವಾಣಿಜ್ಯ ಶಿಕ್ಷಣದಲ್ಲಿ ದೇಶಿ ಭಾಷೆಯ ಬೋಧನೆಯಿಂದ ಎದುರಿಸಬಹುದಾಗಿದೆ. ಮುಖ್ಯವಾಗಿ ಕನ್ನಡ ಸ್ನಾತಕೋತ್ತರ ಪದವೀಧರರಿಗೆ ಲಭ್ಯವಾಗುವ ಉದ್ಯೋಗಾವಕಾಶದ ಸಾಧ್ಯತೆಯನ್ನು ವಿಶ್ವವಿದ್ಯಾಲಯದ ಈ ಕನ್ನಡ ವಿರೋಧಿ ನಿಲುವು ಕಸಿದುಕೊಂಡಿದೆ. ಇದು ಕನ್ನಡ ಓದಿದವರ ಅನ್ನವನ್ನು ಕಸಿಯುವ ಕುತಂತ್ರವಾಗಿದೆ. ಕೇಂದ್ರ ಹಾಗೂ ರಾಜ್ಯದ ಲೋಕಸೇವಾ ಆಯೋಗಗಳ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕನ್ನಡವನ್ನು ಸಮರ್ಥವಾಗಿ ಅಧ್ಯಯನ ಮಾಡಿದ ವಿವಿಧ ನಿಕಾಯದ ವಿದ್ಯಾರ್ಥಿಗಳು ಹೆಚ್ಚಿನ ಸ್ಥಾನಗಳನ್ನು ಪಡೆಯುತ್ತಿರುವುದು ಇತ್ತೀಚಿನ ಫಲಿತಾಂಶಗಳಿಂದ ಸಾಬೀತಾಗಿದೆ. ಭಾಷಾಕೌಶಲ್ಯ ಸಂವಹನ ಕೌಶಲ್ಯ ಸಾಹಿತ್ಯ-ಸಂಸ್ಕೃತಿಗಳ ಜ್ಞಾನವನ್ನು ಪಡೆಯುವುದು ವರ್ತಮಾನದ ಅಗತ್ಯವಾಗಿದೆ.

ಈ ಸಮಸ್ಯೆಯ ಸೃಷ್ಟಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ವಾಣಿಜ್ಯ ನಿಕಾಯದ ಪಾತ್ರವಿದೆ. ಭಾಷಾ ಕಲಿಕೆಯ ಬೋಧನಾ ಅವಧಿಗಳನ್ನು ಕಡಿತಗೊಳಿಸಿ ವಾಣಿಜ್ಯಶಾಸ್ತ್ರ ಬೋಧನಾ ಅವಧಿಯನ್ನು ಹೆಚ್ಚಿಸಿ ವಾಣಿಜ್ಯಶಾಸ್ತ್ರ ಸ್ನಾತಕೋತ್ತರ ಪದವೀಧರರಿಗೆ ಹೆಚ್ಚಿನ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಉದ್ದೇಶದಿಂದ ಕನ್ನಡವನ್ನು ಬಿಕಾಂ ಎರಡನೇ ವರ್ಗಕ್ಕೆ ಅಳವಡಿಸದಂತೆ ನೋಡಿಕೊಳ್ಳಲಾಗಿದೆ. ಇದೇ ವಿಶ್ವವಿದ್ಯಾಲಯದಲ್ಲಿ ಬಿ.ಎಸ್ಸಿ. ಎರಡನೇ ವರ್ಷದ ವಿದ್ಯಾರ್ಥಿಗಳು ಕನ್ನಡ ಕಲಿಯುತ್ತಿದ್ದಾರೆ. ಆದರೆ ಬಿಕಾಂ ಎರಡನೇ ತರಗತಿಗೆ ಅಳವಡಿಸದಂತೆ ತಡೆಯಲಾಗಿದೆ.

ಕೆಲವು ದಶಕಗಳಿಂದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದ ಮುಖ್ಯಸ್ಥರಾಗಿ ನಾಡಿನ ಹಿರಿಯ ಕವಿಗಳು, ಸಂಶೋಧಕರು, ಜಾನಪದ ವಿದ್ವಾಂಸರು, ಲೇಖಕರು ಕೆಲಸ ಮಾಡಿದ್ದಾರೆ. ಅವರೆಲ್ಲ ಒಂದಲ್ಲ ಒಂದು ರೀತಿಯಿಂದ ಬಿಕಾಂ ತರಗತಿಗಳಲ್ಲಿ ಕನ್ನಡ ಜಾರಿಗೆ ತರಲು ಹೋರಾಟ ಮಾಡುತ್ತಲೇ ಬಂದಿದ್ದಾರೆ. ಕುಲಪತಿಗಳ ಹಂತದಲ್ಲಿ ಇದಕ್ಕೊಂದು ಪರಿಹಾರ ಸಿಗುತ್ತದೆಂಬ ಭರವಸೆಯಿಂದ ಚರ್ಚೆ ಸಂವಾದಗಳು ನಡೆಯುತ್ತಲೇ ಬಂದಿವೆ. ಹಲವಾರು ಬಾರಿ ಬಿಕಾಂ ಎರಡನೇ ವರ್ಷದ ಪಠ್ಯಕ್ರಮವು ಕನ್ನಡ ಅಭ್ಯಾಸ ಮಂಡಳಿಯ ಸಭೆ, ನಿಕಾಯದ ಸಭೆ ಹಾಗೂ ಅಕಡೆಮಿಕ್ ಕೌನ್ಸಿಲ್‌ಗಳಲ್ಲಿ ಒಪ್ಪಿಗೆ ಪಡೆದಿದೆ. ಆದರೆ ಪ್ರತಿಬಾರಿ ವಾಣಿಜ್ಯಶಾಸ್ತ್ರ ನಿಕಾಯದ ಡೀನರೊಂದಿಗೆ ಮಾತನಾಡಿ ಸಮಸ್ಯೆ ಬಗೆಹರಿಸುವ ಭರವಸೆ ಕುಲಪತಿಗಳಿಂದ ಸಿಗುತ್ತದೆ. ಆದರೆ ಜಾರಿ ಮಾಡುವ ಕೆಲಸವನ್ನು ಯಾರೂ ಮಾಡಲಿಲ್ಲ.

ಈಗಿನ ಮಾನ್ಯ ಕುಲಪತಿಗಳಾದ ಡಾ. ಎಚ್.ಬಿ. ವಾಲೀಕಾರ ಅವರು ಕುಲಪತಿಗಳಾದ ತಕ್ಷಣವೇ ಈ ಅನ್ಯಾಯವನ್ನು ಅವರ ಗಮನಕ್ಕೆ ತಂದಾಗ ಕನ್ನಡ ಅಧ್ಯಾಪಕರ ಪರಿಷತ್ತಿನ ಸಮಾವೇಶದಲ್ಲಿ 2013-14 ನೇ ಸಾಲಿ[illegible] ಬಿಕಾಂ ಎರಡನೆಯ ತರಗತಿಗೆ ಕನ್ನಡವನ್ನು ಜಾರಿಗೆ ತರುವುದಾಗಿ ಘೋಷಿಸಿದ್ದರು. ಮಾಧ್ಯಮಗಳಲ್ಲಿ ಅದು ದೊಡ್ಡ ಸುದ್ದಿಯಾಯಿತು. ಘೋಷಣೆ ಮಾಡಿ ಒಂದೂವರೆ ವರ್ಷ ಕಳೆದರೂ ಸಬೂಬುಗಳನ್ನು ಹೇಳುತ್ತ ಬಂದರು. ಕನ್ನಡ ಜಾರಿಗೆ ತರಲು ತಾವು ಬದ್ಧರಾಗಿರುವುದಾಗಿ ನಂಬಿಸಿದರು. ಕೊನೆಯ ಗಳಿಗೆಯಲ್ಲಿ ತಮ್ಮ ಬದ್ಧತೆಯಿಂದ ಹಿಂದಕ್ಕೆ ಸರಿದರು. ಹೆಣವನ್ನು ಮುಂದಿನೂರಿಗೆ ಸಾಗಿಸುವ ವಿಳಂಬ ತಂತ್ರವನ್ನು ಅನುಸರಿಸುತ್ತಿದ್ದಾರೆ. ಹೀಗಾಗಿ ಮಾನ್ಯ ಕುಲಪತಿಗಳು ತಕ್ಷಣವೇ 2014-15 ನೇ ಶೈಕ್ಷಣಿಕ ವರ್ಷದಿಂದಲೇ ಈಗಾಗಲೇ ಎಲ್ಲ ಹಂತಗಳಲ್ಲೂ ಒಪ್ಪಿಗೆ ಪಡೆದ ಪಠ್ಯವನ್ನು ಜಾರಿಗೆ ತರಬೇಕೆಂದು ಒತ್ತಾಯಿಸುತ್ತೇವೆ.

ಒಂದು ವೇಳೆ ಮಾನ್ಯ ಕುಲಪತಿಗಳು ಬಿಕಾಂ ಎರಡನೇ ತರಗತಿಗಳಿಗೆ ಕನ್ನಡವನ್ನು ತಕ್ಷಣವೇ ಜಾರಿಗೆ ತರದೇ ಹೋದರೆ ಧಾರವಾಡದಲ್ಲಿ ಗೋಕಾಕ್ ಚಳವಳಿಯ ಮಾದರಿಯಲ್ಲಿ ದೊಡ್ಡ ಹೋರಾಟವನ್ನು ಹುಟ್ಟುಹಾಕುವ ಎಲ್ಲ ಸಿದ್ಧತೆಗಳನ್ನು ಕರ್ನಾಟಕ ವಿಶ್ವವಿದ್ಯಾಲಯ ಕನ್ನಡ ಅಧ್ಯಾಪಕರ ಪರಿಷತ್ತು ಮಾಡಿಕೊಂಡಿದೆ. ಎರಡು ಹಂತಗಳಲ್ಲಿ ಹೋರಾಟವನ್ನು ಮುಂದುವರೆಸಲಾಗುವುದು. ನಾಡೋಜ ಡಾ. ಪಾಟೀಲ ಪುಟ್ಟಪ್ಪ ಹಾಗೂ ನಾಡೋಜ ಡಾ.ಬರಗೂರ ರಾಮಚಂದ್ರಪ್ಪನವರ ನೇತೃತ್ವದಲ್ಲಿ ಕನ್ನಡದ ಹಿರಿಯ ಸಾಹಿತಿಗಳ ನಿಯೋಗವೊಂದನ್ನು ಮುಖ್ಯಮಂತ್ರಿಗಳು, ರಾಜ್ಯಪಾಲರು ಹಾಗೂ ಶಿಕ್ಷಣ ಮಂತ್ರಿಗಳೊಂದಿಗೆ ಮಾತುಕತೆಗೆ ಕರೆದೊಯ್ಯಲು ಯೋಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ನಾಡಿನ ಹಿರಿಯ ಲೇಖಕರೊಂದಿಗೆ ಮಾತುಕತೆ ನಡೆದಿದೆ. ಒಂದು ವಾರದೊಳಗೆ ಕುಲಪತಿಗಳು ಸೂಕ್ತ ನಿರ್ಧಾರ ಕೈಗೊಳ್ಳದಿದ್ದರೆ ಕುಲಪತಿಗಳ ಕಚೇರಿ ಎದುರು ಎಲ್ಲ ಕನ್ನಡ ಅಧ್ಯಾಪಕರನ್ನೊಳಗೊಂಡಂತೆ ನಾಡಿನ ಹಿರಿಯ ಸಾಂಸ್ಕೃತಿಕ ನಾಯಕರುಗಳ ನಾಯಕತ್ವದಲ್ಲಿ ಧರಣಿಯನ್ನು ನಡೆಸಲಾಗುವುದು. ದಯವಿಟ್ಟು ಕುಲಪತಿಗಳು ತಾವು ನೀಡಿದ ಭಾಷೆಯನ್ನು ಉಳಿಸಿಕೊಂಡು ಕನ್ನಡ ಪರವಾದ ಕೆಲಸವನ್ನು ಮಾಡಬೇಕೆಂದು ವಿನಂತಿಪೂರ್ವಕವಾಗಿ ಒತ್ತಾಯಿಸುತ್ತೇವೆ.

ಡಾ. ಜೆ.ಎಂ. ಹೆಗಡೆ, ಡಾ.ಡಿ.ಎಂ.ಹಿರೇಮಠ,
ಶ್ರೀ ಶಂಕರ ಹಲಗತ್ತಿ, ಡಾ.ಎಂ.ಡಿ.ಒಕ್ಕುಂದ,
ಡಾ. ಜಿನದತ್ತ ಹಡಗಲಿ, ಡಾ. ಬಿ ಜೆ. ಬಿರಾದಾರ,
ಡಾ. ಎಸ್ ವಿ. ಮನಗುಂಡಿ, ಡಾ. ವಿನಯಾ ಒಕ್ಕುಂದ,
ಡಾ. ವಿಜಯಶ್ರೀ ಹಿರೇಮಠ, ಡಾ. ರೇಖಾ ಜೋಗುಳ,
ಡಾ. ಮಾಲತಿ ಪಟ್ಟಣಶೆಟ್ಟಿ, ಪದಾಧಿಕಾರಿಗಳು ಕರ್ನಾಟಕ
[illegible]ಯ ಕನ್ನಡ ಅಧ್ಯಾಪಕರ ಪರಿಷತ್ತು (ರಿ.)

ಸಮಗ್ರ ವಚನಸಂಪುಟ ದೋಷ: ಇನ್ನಷ್ಟು ಮಾಹಿತಿ

"ಅರಸು ಮುನಿದಡೆ ನಾಡೊಳಗಿರಬಾರದಯ್ಯಾ
ಗಂಡ ಮುನಿದಡೆ ಮನೆಯೊಳಗೆ ಇರಬಾರದಯ್ಯಾ
ಕೂಡಲಸಂಗಮದೇವಾ
ಜಂಗಮ ಮುನಿದಡೆ ನಾನೆಂತು ಬದುಕುವೆ?"

(ಕನ್ನಡ ಪುಸ್ತಕ ಪ್ರಾಧಿಕಾರದ ಸಮಗ್ರ ವಚನಸಂಪುಟ, ದ್ವಿತೀಯ ಪರಿಷ್ಕೃತ ಮುದ್ರಣ- 2001 'ಬಸವಣ್ಣನವರ ವಚನಸಂಪುಟ'ದ 825ನೇ ವಚನ. ಸಂಪಾಕರು: ಡಾ. ಎಂ.ಎಂ. ಕಲಬುರ್ಗಿ)

'ರಾಜನಿಗೆ ಯಾರ ಮೇಲಾದರೂ ಕೋಪ ಬಂದರೆ ಅವರು ಆ ರಾಜನ ಆಳ್ವಿಕೆ ಇರುವ ದೇಶ ಬಿಟ್ಟು ದೇಶಾಂತರ ಹೋಗಬೇಕು. ಗಂಡನಿಗೆ ಹೆಂಡತಿಯ ಮೇಲೆ ಸಿಟ್ಟು ಬಂದರೆ ಆಕೆ ಆ ಗಂಡನ ಮನೆಯನ್ನು ಬಿಟ್ಟು ಹೋಗಬೇಕು! ಕೂಡಲಸಂಗಮದೇವಾ ಜಂಗಮನಿಗೆ ಸಿಟ್ಟಾದರೆ ನಾನು ಹೇಗೆ ಬದುಕಬಲ್ಲೆ?' ಎಂದು ಬಸವಣ್ಣನವರು ದೇವರಲ್ಲಿ ಮೊರೆಯಿಡುತ್ತಿದ್ದಾರೆ. ರಾಜನ ಕೋಪಕ್ಕೆ ಗುರಿಯಾದವರು ಏನು ಮಾಡಬೇಕು ಮತ್ತು ಗಂಡನ ಸಿಟ್ಟಿಗೆ ಗುರಿಯಾದವರು ಏನು ಮಾಡಬೇಕು ಎಂಬುದನ್ನು ತಿಳಿಸುವ ಬಸವಣ್ಣನವರು ಜಂಗಮ ಸಿಟ್ಟಾದಾಗ ತಾನು ಬದುಕುವ ಪರಿ ಎಂತು ಎಂದು ದೇವರಿಗೆ ಪ್ರಶ್ನಿಸುತ್ತಿದ್ದಾರೆ.

ಈ ವಚನವನ್ನು ವ್ಯಾಖ್ಯಾನಿಸುವ ವಿಚಾರ ನಂತರ ಇರಲಿ. ಈ ವಚನದಲ್ಲಿನ ದೊಡ್ಡ ಸಮಸ್ಯೆ ಎಂದರೆ ಹೆಂಡತಿಯಾದವಳು ಗಂಡನ ಮನೆ ಬಿಟ್ಟು ಎಲ್ಲಿಗೆ ಹೋಗಬೇಕು? ಎನ್ನುವುದು. ವಚನಕಟ್ಟುಗಳಲ್ಲಿನ ಇಂಥ ಆಭಾಸಕರವಾದ ಸಾಲುಗಳನ್ನು ಇತರ ಮೂಲ ಮಾತೃಕೆಗಳೊಂದಿಗೆ ತಾಳೆ ಹಾಕದೆ ಇದ್ದಾಗ, ಅಥವಾ ತಾಳೆ ಹಾಕಿಯೂ ಸಮಂಜಸವಾದುದನ್ನು ಆಯ್ಕೆ ಮಾಡಿಕೊಳ್ಳದೆ ಇದ್ದಾಗ ಜನಮನದಲ್ಲಿ ಅಪಾರ್ಥವಾಗದೆ ಬೇರೆ ದಾರಿ ಇಲ್ಲ.

'ಗಂಡ ಮುನಿದಡೆ ಮನೆಯೊಳಗೆ ಇರಬಾರದು' ಎಂಬ ಸಾಲು ಶಿ.ಶಿ. ಬಸವನಾಳ ಅವರು 1951ರಲ್ಲಿ ಸಂಪಾದಿಸಿದ 'ಬಸವಣ್ಣನವರ ಷಟ್‌ಸ್ಥಳದ ವಚನಗಳು' ಗ್ರಂಥದಲ್ಲಿ ಬಳಸಿದ ಈ ವಚನದಲ್ಲಿ 'ಗಂಡ ಮುನಿದರೆ ಹೆಂಡತಿಗೆ ಇರಬಾರದಯ್ಯಾ' ಎಂದಾಗಿದೆ. ಡಾ.ಆರ್.ಸಿ.ಹಿರೇಮಠ ಅವರು 1968ರಲ್ಲಿ ಸಂಪಾದಿಸಿ ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿದ 'ಭಕ್ತಿಭಂಡಾರಿ ಬಸವಣ್ಣನವರ ವಚನಗಳು' ಗ್ರಂಥದಲ್ಲಿ ಆದೇ ಸಾಲು 'ಗಂಡ ಮುನಿದಡೆ ಹೆಂಡತಿಗೆ ಇರಬಾರದಯ್ಯಾ' ಎಂದಿದೆ. ಈ ಯಾವ ಸಾಲುಗಳೂ ಹೆಂಡತಿಯಾದವಳಿಗೆ ನ್ಯಾಯ ಒದಗಿಸುವಂಥವುಗಳಾಗಿಲ್ಲ, ಆದರೆ ಆರ್.ಸಿ.ಹಿರೇಮಠ ಅವರು ಪಾಠಾಂತರಗಳನ್ನು ಕೂಡ ಮುದ್ರಿಸಿ ಮಹದುಪಕಾರ ಮಾಡಿದ್ದಾರೆ. ಅಲ್ಲಿ 'ಹೆಂಡತಿಗೆ' ಎಂಬಲ್ಲಿ 'ಹೆಂಡತಿಯಾಗಿ' ಎಂಬ ಪಾಠಾಂತರವೂ ಇದೆ. ಅದನ್ನು ಬಳಸಿಕೊಂಡಾಗ ಆ ಸಾಲು 'ಗಂಡ ಮುನಿದಡೆ ಹೆಂಡತಿಯಾಗಿ ಇರಬಾರದು' ಎಂದಾಗಿ ಮಹತ್ವಪೂರ್ಣವಾದ ಅರ್ಥವನ್ನು ಸ್ಫುರಿಸುತ್ತದೆ. ಅವಳು ಆ ಮನೆಯಲ್ಲಿ ಮಕ್ಕಳಿಗೆ ತಾಯಿಯಾಗಿ, ಅತ್ತೆ-ಮಾವರಿಗೆ ಸೊಸೆಯಾಗಿ, ಮೈದುನರಿಗೆ ಮತ್ತು ನಾದಿನಿಯರಿಗೆ ಅತ್ತಿಗೆಯಾಗಿ ಇರಬಹುದು. ಆದರೆ ಕೋಪಗೊಂಡ ಗಂಡನ 'ಹೆಂಡತಿ'ಯಾಗಿ ಇರಬೇಕಾಗಿಲ್ಲ ಎಂದು ಈ ಸಾಲು ಧ್ವನಿಸುತ್ತಿದೆ. ಈ ನಿಜಾರ್ಥವನ್ನು ಕಂಡುಕೊಳ್ಳದಿದ್ದರೆ ಜನ ಈ ವಚನವನ್ನು 'ಮಹಿಳಾ ವಿರೋಧಿ' ಎಂದು ಭಾವಿಸುವುದರಲ್ಲಿ ಸಂಶಯವಿಲ್ಲ, ಇಂಥ ತಪ್ಪುಗಳನ್ನು ಕೂಡ ತಿದ್ದಿಕೊಳ್ಳುವುದರ ಮೂಲಕ ಎಲ್ಲ 15 ಸಂಪುಟಗಳನ್ನು ಪರಿಷ್ಕರಿಸಿ ಮುದ್ರಿಸುವುದು ತುರ್ತು ಅಗತ್ಯವಾಗಿದೆ.

"ಮರೆಯಲಾಗದು ಹರಿಯ? ಮರೆಯಲಾಗದು ಬ್ರಹ್ಮನ?
ಮರೆಯಲಾಗದು ತೆತ್ತೀಸಕೋಟಿ ದೇವರ್ಕಳ?
ನಮ್ಮ ಕೂಡಲಸಂಗಮದೇವರ ಮರೆಯಲಹುದು?"

(ಇದು ಕನ್ನಡ ಪುಸ್ತಕ ಪ್ರಾಧಿಕಾರದ ದ್ವಿತೀಯ ಪರಿಷ್ಕೃತ ಮುದ್ರಣ 'ಬಸವಣ್ಣನವರ ವಚನಸಂಪುಟ'ದ 552 ನೇ ವಚನ. ಸಂಪಾದಕರು: ಡಾ. ಎಂ.ಎಂ. ಕಲಬುರ್ಗಿ)

"ಮಱೆಯಲಾಗದು ಹರಿಯ; ಮಱೆಯಲಾಗದು ಬ್ರಹ್ಮನ!
ಮಱೆಯಲಾಗದು ತೆತ್ತೀಸಕೋಟಿ ದೇವರ್ಕಳ!
ನಮ್ಮ ಕೂಡಲಸಂಗಮದೇವರ ಮಱೆಯಲಿಹುದು!"

(1968ರಲ್ಲಿ ಬಸವೇಶ್ವರ 8ನೆಯ ಶತಮಾನೋತ್ಸವ ಸಮಿತಿ, ಬೆಂಗಳೂರು ಪ್ರಕಟಿಸಿದ ಪರಿಷ್ಕೃತ ಮೂರನೆಯ ಮುದ್ರಣ -1968 'ಬಸವಣ್ಣನವರ ಷಟ್‌ಸ್ಥಳದ ವಚನಗಳು' ಗ್ರಂಥದ 554ನೇ ವಚನ. ಸಂಪಾದಕರು: ಶಿ.ಶಿ.ಬಸವನಾಳ)

'ಮಱೆ' ಎಂದರೆ ಆಶ್ರಯ. ಆದರೆ 'ಮರೆ' ಎಂದರೆ 'ಆಶ್ರಯ' ಅರ್ಥದ ಜೊತೆ 'ಮರೆತುಬಿಡು' ಅರ್ಥವನ್ನೂ ಕೊಡುತ್ತದೆ. ಆ ಮೂಲಕ ವಚನವನ್ನು ಅರ್ಥೈಸುವಲ್ಲಿ ಸಂದಿಗ್ಧತೆಯನ್ನುಂಟುಮಾಡುತ್ತದೆ. (ಈ 'ಮರೆಯಲಾಗದು ಹರಿಯ' ವಚನ ಕುರಿತು ಡಾ.ಎಸ್.ಆರ್.ಗುಂಜಾಳ ಅವರು ಸವಿಸ್ತಾರವಾಗಿ ಬರೆದಿದ್ದಾರೆ.)

'ಹರಿಯನ್ನು ಮರೆಯಲಿಕ್ಕಾಗದು, ಬ್ರಹ್ಮನನ್ನು ಮರೆಯಲಿಕ್ಕಾಗದು, 33 ಕೋಟಿ ದೇವತೆಗಳನ್ನು ಮರೆಯಲಿಕ್ಕಾಗದು. ಆದರೆ ನಮ್ಮ ಕೂಡಲಸಂಗಮದೇವರನ್ನು ಮರೆಯಬಹುದು' ಎಂಬ ಅರ್ಥವನ್ನು ಕಲಬುರ್ಗಿಯವರ ಸಂಪಾದನೆಯ ವಚನ ಕೊಡುವುದರಿಂದ ಮಾಧ್ವರ 'ಹರಿ ಸರ್ವೋತ್ತಮ' ಎಂಬ ವಾದವನ್ನೇ ಮಂಡಿಸಿದಂತಾಗುತ್ತದೆ. ಆದರೆ ರೇಫೆ (ರ) ಬದಲಿಗೆ ಮೂಲದ ಶಕಟರೇಫೆ (ಱ) ಇಟ್ಟರೆ ಈ ಗೊಂದಲ ನಿವಾರಣೆಯಾಗುತ್ತದೆ. ಆಗ ಆ ವಚನದ ಅರ್ಥ "ಹರಿಯನ್ನು ಆಶ್ರಯಿಸಲಿಕ್ಕಾಗದು, ಬ್ರಹ್ಮನನ್ನು ಆಶ್ರಯಿಸಲಿಕ್ಕಾಗದು, 33 ಕೋಟಿ ದೇವತೆಗಳನ್ನೂ ಆಶ್ರಯಿಸಲಿಕ್ಕಾಗದು. ಆಶ್ರಯಕ್ಕಾಗಿ ನಮ್ಮ ಕೂಡಲಸಂಗಮದೇವರುಂಟು' ಎಂಬ ಅರ್ಥ ಸ್ಫುರಿಸುತ್ತದೆ. ಈ ಗೊಂದಲವನ್ನು ಆಹ್ವಾನಿಸಬಾರದು ಎಂಬ ಕಾರಣದಿಂದಲೇ ಶಿ.ಶಿ.ಬಸವನಾಳ ಅವರು ಶಕಟರೇಫೆಯನ್ನು ತೆಗೆದಿಲ್ಲ, ಇಂಥ ಸಮಸ್ಯೆಗಳ ಬಗ್ಗೆ ಅವರು ಸಂಪಾದನಾ ಗ್ರಂಥದ ಮೊದಲ ಮುದ್ರಣದ (1951) ಪ್ರಸ್ತಾವನೆಯಲ್ಲೇ ವಿವರಿಸಿದ್ದಾರೆ. 63 ವರ್ಷಗಳ ಹಿಂದೆ ಬರೆದ ಎಚ್ಚರಿಕೆಯ ನುಡಿಗಳು ಸಾಧ್ಯವಾದಷ್ಟು ಶುದ್ಧವಾದ ಸಮಗ್ರ ವಚನಸಂಪುಟಗಳ ಮೂರನೇ ಮುದ್ರಣಕ್ಕೆ ಉಪಯುಕ್ತ ವಾಗಿವೆ. ಕಾಲದ ಕಟ್ಟಳೆಗೆ ಸಿಕ್ಕಿ ಅವರ ಗ್ರಂಥದಲ್ಲಿ ಕೂಡ ಕೆಲವು ಕಡೆ ದೋಷಗಳು ಉಳಿದುಕೊಂಡಿವೆ. ಆ ದೋಷಗಳಿಗೆ ಕಾರಣ ಆ ಕಾಲದಲ್ಲಿ ದೊರೆತ ತಾಡೋಲೆ ವಚನಕಟ್ಟುಗಳೇ ಕಾರಣ. ಮೂಲಮಾತೃಕೆಗಳ ಸಹಾಯವಿಲ್ಲದೆ ಹೊಸ ಅಕ್ಷರಗಳನ್ನಾಗಲೀ, ಶಬ್ದಗಳನ್ನಾಗಲೀ ಸೇರಿಸಬಾರದು ಎಂಬುದಕ್ಕೆ ಶಿ.ಶಿ.ಬಸವನಾಳರು ಬದ್ಧರಾಗಿದ್ದರು. ಹಿಂದಿನ ಶತಮಾನಗಳ ಪಟ್ಟಭದ್ರ ಹಿತಾಸಕ್ತಿಗಳು ಬುದ್ಧಿಪೂರ್ವಕವಾಗಿ ಶರಣರ ವಚನಕಟ್ಟುಗಳಲ್ಲಿ ಅಕ್ಷರಗಳನ್ನು, ಶಬ್ದಗಳನ್ನು ಮತ್ತು ಸಂಸತ ವಾಕ್ಯಗಳನ್ನು ಸೇರಿಸಿದ್ದರ ಕಡೆಗೆ ಅವರು ಗಂಭೀರವಾಗಿ ಆಲೋಚಿಸಿದ್ದರೆ ಬಹುಶಃ ನಂತರದ ವಚನಗ್ರಂಥಗಳ ಪ್ರಕಟನೆಗಳಲ್ಲಿ ಭಾರಿ ಬದಲಾವಣೆಯಾಗುತ್ತಿತ್ತು! ಅದೇನೇ ಇದ್ದರೂ ವಚನಗಳಲ್ಲಿನ ಸಾಲುಗಳ ಜೋಡಣಾ ವ್ಯವಸ್ಥೆಗೆ ಹೊಸರೂಪ ಕೊಟ್ಟು ಅವುಗಳ ಮೂಲಕ್ಕೆ ಬದ್ಧರಾಗಿದ್ದ ಸೂಕ್ಷ್ಮ ದೃಷ್ಟಿಕೋನದವರು ಅವರು.

'ಉರೆ ತಾಗಿದ ಮೃಗವು ಒಂದಡಿಯನಿಡುವುದೆ?' ಎಂಬುದು ಕಲಬುರ್ಗಿ ಅವರು ಸಂಪಾದಿಸಿದ ಸಂಪುಟದ 793ನೇ ವಚನದ ಮೊದಲ ಸಾಲು. 'ಉರೆ' ಎಂದರೆ 'ಅತಿಶಯ' ಅಥವಾ 'ಬಹಳ' ಎಂದು ಅರ್ಥವಾಗುತ್ತದೆ. ಆ ಅರ್ಥ ಈ ವಚನದ ಆಶಯಕ್ಕೆ ಹೊಂದಿಕೊಳ್ಳುವುದಿಲ್ಲ, 'ಉರೆ' ಶಬ್ದವನ್ನು 'ಉರಿ' ಎಂದು ಓದಿಕೊಂಡರೆ ಜ್ವಾಲೆ ಎಂದು ಅರ್ಥವಾಗುತ್ತದೆ. ಓದುಗರು ಸಹಜವಾಗಿ 'ಉರಿ' ಎಂದೇ ಅರ್ಥೈಸುತ್ತಾರೆ.

'ಉಱ ತಾಗಿದ ಮೃಗವು ಒಂದಡಿಯನಿಡುವುದೆ, ಅಯ್ಯಾ' ಎಂಬುದು ಶಿ.ಶಿ.ಬಸವನಾಳ ಅವರ ಗ್ರಂಥದ 795ನೇ ವಚನದ ಮೊದಲ ಸಾಲು. 'ಉಱ' ಎಂದರೆ ಪಶು-ಪಕ್ಷಿಗಳನ್ನು ಹಿಡಿಯುವ ಬಲೆ ಎಂದು ಬಸವನಾಳ ಅವರು ತಿಳಿಸುತ್ತಾರೆ. ಬಲೆಗೆ ಬಿದ್ದ ಮೃಗವು ಒಂದು ಅಡಿ ಕೂಡ ಮುಂದೆ ಹೋಗಲು ಸಾಧ್ಯವೆ? ಎಂಬುದು ಆ ವಾಕ್ಯದ ಅರ್ಥ. ಆದರೆ ಶಕಟರೇಫೆ (ಱ) ತೆಗೆಯುವುದರಿಂದ ಅನರ್ಥವಾಗುವುದು ಅನಿವಾರ್ಯವಾಗಿದೆ.

"ಎಱೆದರೆ ನೆನೆಯದು ಮಱೆದರೆ ಬಾಡದು;
ಹುರುಳಿಲ್ಲ ಹುರುಳಿಲ್ಲ ಲಿಂಗಾರ್ಚನೆ!
ಕೂಡಲಸಂಗಮದೇವಯ್ಯಾ
ಜಂಗಮಕ್ಕೆಱೆದರೆ ಸ್ಥಾವರ ನೆನೆಯಿತ್ತು!"

ಎಂಬುದು ಬಸವನಾಳರ ಸಂಪಾದನೆಯಲ್ಲಿನ 199ನೇ ವಚನ. ಆದರೆ 'ನನೆಯದು' ಎದು ಎಂಬ ಪಾಠಾಂತರವನ್ನೇ ಆರ್.ಸಿ.ಹಿರೇಮಠ ಅವರು ತಾವು ಸಂಪಾದಿಸಿದ ಈ ವಚನದಲ್ಲಿ ಬಳಸಿದ್ದಾರೆ. ಆಗ ಆ ವಚನದ ಸಾಲು 'ಎರೆದಡೆ ನನೆಯದು ಮರೆದಡೆ ಬಾಡದು' ಎಂದಾಗುವುದು. ಇದೇ ಸರಿಯಾದ ಕ್ರಮ. 'ನನೆ' ಶಬ್ದಕ್ಕೆ 'ಮೊಗ್ಗು, ಅರಳು, ಹೂವು ಮತ್ತು ಒದ್ದೆಯಾಗು' ಎಂಬ ಅರ್ಥಗಳಿವೆ. 'ನೆನೆ'ಗೆ 'ಸ್ಮರಿಸು, ಚಿಂತಿಸು ಮತ್ತು ಒದ್ದೆಯಾಗು' ಎಂಬ ಅರ್ಥಗಳಿವೆ. 'ಲಿಂಗಕ್ಕೆ ನೀರು ಹಾಕಿದಾಗ ಅದು ಅರಳುವುದಿಲ್ಲ, ನೀರು ಹಾಕದೆ ಇದ್ದರೆ ಬಾಡುವುದಿಲ್ಲ' ಎಂಬುದೇ ಸರಿಯಾದ ಅರ್ಥ. ಇದನ್ನು ಗ್ರಹಿಸಿದ ಆರ್.ಸಿ.ಹಿರೇಮಠ ಅವರು 'ನನೆ' ಶಬ್ದವನ್ನೇ ಬಳಸಿದ್ದಾರೆ.

"ಲಿಂಗ ಜಂಗಮ ಒಂದೆ ಎಂದು ನಂಬಿದ ಬಳಿಕ
ಅವರಂಗನೆಯರು ಲಿಂಗದ ರಾಣಿವಾಸ;
ಅಲ್ಲಿಯೂ ಮೇಳ, ಇಲ್ಲಿಯೂ ಮೇಳ,
ಚೌಡೇಶ್ವರಿಯಲ್ಲಿಯೂ ಮೇಳ!
'ಮಾತೆ'ಯೆಂಬ ಭಾವ ತಪ್ಪಿ ಅಪ್ಪಿದವರ
ತಲೆಯ ಕೊಂಬ ಕೂಡಲಸಂಗಮದೇವ."

ಎಂಬುದು ಬಸವನಾಳರ ಸಂಪಾದನೆಯಲ್ಲಿನ 642ನೇ ವಚನ.

ತಾಡೋಲೆಯ ಪ್ರತಿಯೊಂದರಲ್ಲಿ ಇದ್ದ 'ಮೊಲೆಯೆಂಬ ಭಾವ ತಪ್ಪಿ ಅಪ್ಪಿದವರ' ಬದಲಿಗೆ "ಮಾತೆ'ಯೆಂಬ ಭಾವ ತಪ್ಪಿ ಅಪ್ಪಿದವರ' ಎಂದು ಬರೆದಿದ್ದಾರೆ.

"ಮೊಲೆಯಂಬ ಇದನ್ನು 'ಮೊಲೆಯೆಂಬ' ಎಂದು ತಿಳಿಯುವುದು ಸ್ವಾಭಾವಿಕವೇ ಆಗಿದೆ. ಆದರೆ 'ಮೊಲೆ' ಎಂಬುದು ಮಾತೆಯ ಚಿಹ್ನವಾದಂತೆ ಕಾಂತೆಯ ಲಕ್ಷಣವೂ ಆಗಬಹುದಾಗಿದೆ. ಇಲ್ಲಿ 'ಮಾತೆ' ಎಂಬ ಭಾವನೆ ಆವಶ್ಯಕವೆಂದು ಯಾರಿಗಾದರೂ ತೋರಬಹುದಾಗಿರುವುದರಿಂದ ಈ ಭಾಗವನ್ನು ಶ್ರೀ ಹಳಕಟ್ಟಿಯವರ ಸಂಸ್ಕರಣದಲ್ಲಿ 'ಮಾತೆಯೆಂಬ' ಎಂದು ಮುದ್ರಿತವಾದುದು ಸರಿ ಎಂದೇ ಹೇಳಬಹುದು" ಎಂದು ಶಿ.ಶಿ.ಬಸವನಾಳ ಅವರು ತಮ್ಮ ಸಂಪಾದನೆಯ ಪ್ರಸ್ತಾವನೆಯಲ್ಲಿ ತಿಳಿಸಿದ್ದಾರೆ. ಅವರು ಗ್ರಹಿಸಿದ ಅರ್ಥ ಸರಿಯಾಗಿಯೇ ಇದೆ. ಆದರೆ ಆರ್.ಸಿ.ಹಿರೇಮಠ ಅವರು ತಮ್ಮ ಸಂಪಾದನೆಯಲ್ಲಿ 'ಮೊಲೆಯುಂಬ ಭಾವ ತಪ್ಪಿ ಅಪ್ಪಿದವರ' ಎಂದು ಸರಿಯಾಗಿ ಬಳಸಿದ್ದಾರೆ. 'ಮೊಲೆಯುಂಬ' ಪದ ಇನ್ನೂ ಹೆಚ್ಚು ಅರ್ಥಗರ್ಭಿತವಾಗಿದ್ದು ವಚನದ ಮುಂದಿನ ಸಾಲಿನಲ್ಲಿನ 'ತಲೆಯ ಕೊಂಬ'ಕ್ಕೆ ಅನುಪ್ರಾಸವಾಗುವುದರಿಂದ ವಚನದ ಸೌಂದರ್ಯವೂ ಹೆಚ್ಚುತ್ತದೆ. 'ಮಾತೆಯೆಂಬ' ಭಾವಕ್ಕಿಂತಲೂ 'ಮೊಲೆಯುಂಬ' ಭಾವದಲ್ಲಿ ಮಗುವಿನ ಪರಿಶುದ್ಧವಾದ ಮುಗ್ಧತೆ ಇದೆ. 'ಮಾತೆಯೆಂಬ' ಎನ್ನುವ ಪದದಲ್ಲಿ ಪ್ರೌಢಾವಸ್ಥೆಯ ಸದ್ಭಾವನೆ ಇದೆ ಹೊರತಾಗಿ ಮಗುವಿನ ಮುಗ್ಧತೆ ಇಲ್ಲ 'ಮೊಲೆಯಂಬ' ಮತ್ತು 'ಮೊಲೆಯೆಂಬ' ಎನ್ನುವುದು 'ಮೊಲೆಯುಂಬ' ಆದಾಗ ವಚನದ ಅರ್ಥ ವಿಸ್ತಾರಗೊಳ್ಳತೊಡಗುತ್ತದೆ. ಹೀಗೆ ಅನೇಕ ಕಡೆಗಳಲ್ಲಿ ಎಂ.ಎಂ. ಕಲಬುರ್ಗಿ ಅವರು ಆರ್.ಸಿ. ಹಿರೇಮಠ ಅವರನ್ನು ಅನುಸರಿಸಿದ್ದು ಸಮಾಧಾನಕರವಾಗಿದೆ. ಈ ಪ್ರಕಾರದಲ್ಲಿ ಕೂಡ ಇನ್ನೂ ಹೆಚ್ಚಿನ ರೀತಿಯಲ್ಲಿ ಸಮಗ್ರ ವಚನಸಂಪುಟಗಳಲ್ಲಿನ ಪರಿಷ್ಕರಣಗೊಳ್ಳಬೇ[...]

ಅನೇಕ ವಚನಗಳು ಕಾಗುಣಿತ ದೋಷಗಳಷ್ಟೇ ಅ[...] ಅಪೂರ್ಣವಾಗಿಯೂ ಪ್ರಕಟವಾಗಿವೆ.

"ಎನ್ನ ನಾಲಗೆಗೆ ಬಪ್ಪ ರುಚಿ ನಿಮಗರ್ಪಿತ,
ಎನ್ನ ನಾಸಿಕಕ್ಕೆ ಬಪ್ಪ ಪರಿಮಳ ನಿಮಗರ್ಪಿತ,
ಎನ್ನ ಕಾಯಕ್ಕೆ ಬಪ್ಪ ಸುಖ ನಿಮಗರ್ಪಿತ,
ಚೆನ್ನಮಲ್ಲಿಕಾರ್ಜುನಯ್ಯಾ
ನಿಮಗರ್ಪಿಸ್ಪದ ಮುನ್ನ ಮುಟ್ಟಲಮ್ಮೆನಯ್ಯಾ"

ಎಂಬುದು ದ್ವಿತೀಯ ಪರಿಷ್ಕೃತ ಸಂಪುಟಗ[...] ಶಿವಶರಣೆಯರ ವಚನಸಂಪುಟದಲ್ಲಿನ ಅಕ್ಕಮಹಾದೇವಿ[...] 100ನೇ ವಚನ. (ಸಂಪಾದಕರು: ಡಾ. ವೀರಣ್ಣ ರಾಜ[...]

'ಎನ್ನ ಕರಣಕ್ಕೆ ಬಪ್ಪ ಶಬ್ದ ನಿಮಗರ್ಪಿತ' ಮ[...] 'ಎನ್ನ ನೇತ್ರಕ್ಕೆ ಬಪ್ಪ ರೂಪು ನಿಮಗರ್ಪಿತ' ಎಂಬ ಮ[...] ಮತ್ತು ನಾಲ್ಲನೇ ಸಾಲುಗಳು ಈ ವಚನದ[...] ಮಾಯವಾಗಿವೆ.

"ಪಚ್ಚೆಯ ನೆಲೆಗಟ್ಟು, ಕನಕದ ತೋರ[...]
ವಜ್ರದ ಕಂಬ,
ಪವಳದ ಚಪ್ಪರವಿಕ್ಕಿ, ಮುತ್ತುಮಾಣಿ[...]
ಮೇಲುಕಟ್ಟು ಕಟ್ಟಿ,
ಮದುವೆಯ ಮಾಡಿದರು, ಎಮ್ಮವರೆನ್ನ ಮದುವ[...]
ಮಾಡಿದರು.
ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆನ್ನ ಮದುವ[...]
ಮಾಡಿದರು."

ಶಿವಶರಣೆಯರ ಸಂಪುಟದ[...] ಅಕ್ಕಮಹಾದೇವಿಯ 276ನೇ ವಚನವಿದು. [...] ವಚನದಲ್ಲಿನ 5ನೇ ಸಾಲು 'ಕಂಕಣ ಕೈಧಾರೆ ಶೇಸೆಯನಿಕ್ಕಿ' ಎಂಬುದು ಮಾಯ ವಾಗಿದೆ. [...] ಅನೇಕ ತಪ್ಪುಗಳು ವಚನಸಂಪುಟಗಳಲ್ಲಿವೆ.


15ನೇ ವಚನಸಂಪುಟವಾದ 'ವಚನ ಪರಿಭಾ[...] ಕೋಶ'ವನ್ನು ಡಾ. ಎನ್.ಜಿ. ಮಹಾದೇವಪ್ಪ ಅ[...] ಸಂಪಾದಿಸಿದ್ದಾರೆ. ಅದರಲ್ಲಿ ಅವರು ವೀರಶೈವಕ್ಕೆ ಕೊ[...] ಅರ್ಥ ಹೀಗಿದೆ. ವೀರಶೈವ: ವೀರಶೈವನಾದವ[...] ಅಷ್ಟಾವರಣ, ಷಟ್‌ಸ್ಥಲ, ಪಂಚಾಚಾರಗಳ ಆಚ[...] ಅವಶ್ಯಕ. ವೀರಶೈವನು ವೈದಿಕ ಸಂಪ್ರದಾಯ[...] ಯಜ್ಞಗಳನ್ನು ಆಚರಿಸುವುದಿಲ್ಲ, ಗಾಯತ್ರಿ ಮಂತ್ರ[...] ಜಪಿಸುವುದಿಲ್ಲ, ಅವನಿಗೆ ವರ್ಣಾಶ್ರಮ ಧರ್ಮಗ[...] ನಂಬಿಕೆಯಿಲ್ಲ, ಗುಡಿಗಳಲ್ಲಿ ಪ್ರತಿಷ್ಠಿತವಾಗಿರ[...] ಮೂರ್ತಿಗಳನ್ನು ಆರಾಧಿಸುವುದಿಲ್ಲ, ಹಿಂದೆ ಅ[...] ಸಾರಿ ಪುನರ್ಜನ್ಮ ವೆತ್ತಿದ್ದರೂ ವೀರಶೈವನಾದಮ[...] ಪುನರ್ಜನ್ಮವಿಲ್ಲ. ಬೇರೆ ಜಾತಿಯವ[...] ವೀರಶೈವರಾಗಬಹುದು."

ಹೀಗೆ ಮಹಾದೇವಪ್ಪನವರು ವೀರಶೈವವ[...] ಅರ್ಥೈಸುತ್ತಾರೆ. ಈ ವಚನಪರಿಭಾಷಾಕೋಶ[...] 'ಲಿಂಗಾಯತ' ಪದಕ್ಕೆ ಅರ್ಥವನ್ನು ಕೊಟ್ಟಿಲ್ಲ! ಅ[...] ವೀರಶೈವಕ್ಕೆ ಕೊಟ್ಟ ಅರ್ಥವೇ 'ಲಿಂಗಾಯತ'ದ ಅ[...] ಆಗಿರುವುದರಿಂದ ಬಿಟ್ಟಿರುವ ಸಾಧ್ಯತೆಗಳಿವೆ. ಅ[...] 2004ರಲ್ಲಿ ಅವರು ಬರೆದ 'ವಚನೋಕ್ತ ಲಿಂಗಾ[...] ಮತ್ತು ಆಗಮೋಕ್ತ ವೀರಶೈವ' ಪುಸ್ತಿಕೆಯಲ್ಲಿ "ವಚನ[...] ಲಿಂಗಾಯತವೇ ಬೇರೆ, ಆಗಮಗಳ ವೀರಶೈವವೇ ಬೇ[...] ಅಷ್ಟೇ ಅಲ್ಲ ವಚನಗಳಲ್ಲಿ ಲಿಂಗಾಯತವಿದೆ, ವೀರಶೈವ[...] ಆಗಮಗಳಲ್ಲಿ ವೀರಶೈವವಿದೆ, ಲಿಂಗಾಯತವಿಲ್ಲ" ಎ[...] ತಿಳಿಸುತ್ತಾರೆ. ವೀರಶೈವ ಕುರಿತಂತೆ ಅವರ 20[...] ವಿಚಾರಗಳು ಮತ್ತು ಹಿಂದೆ 2001ರಲ್ಲಿ ವಚನಪರಿಭಾ[...] ಕೋಶ ಬರೆಯುವಾಗ ಇದ್ದ ವಿಚಾರಗಳು ತದ್ವಿರುದ್ಧವಾ[...] ಆದ್ದರಿಂದ ಪರಿಭಾಷಾಕೋಶದಲ್ಲಿ ಕೂಡ ಅನೇಕ ಕಡೆಗ[...] 'ವಚನೋಕ್ತ ಲಿಂಗಾಯತ'ಕ್ಕೆ ಪರ್ಯಾಯವಾಗಿ ಬ[...] 'ಆಗಮೋಕ್ತ ವೀರಶೈವ' ಪದಗಳನ್ನು ತೆಗೆಯುವು[...] ಅವಶ್ಯವಾಗಿದೆ.

ಕಾಗುಣಿತ ಮೊದಲುಮಾಡಿ ಅನವಶ್ಯಕ ಸಂ[...] ಶ್ಲೋಕಗಳು ಮುಂತಾದ ಎಲ್ಲ ತೆರನಾದ ತಪ್ಪುಗ[...] ವಚನತಜ್ಞರ ಸಮಿತಿ ನೇಮಿಸುವುದರ ಮೂಲಕ ವ[...] ವಚನಾಸಕ್ತರ ಸಮಸ್ಯೆಗಳನ್ನು ಪರಿಹರಿಸುವುದರ ಮೂ[...] ಪರಿಷ್ಕರಿಸಿ ಹೊಸ ತೃತೀಯ ವಚನಸಂಪುಟ ತಂದ[...] ಮಾತ್ರ ಶರಣರೆಲ್ಲರ ಮತ್ತು ಬ. ಮರಿಶಂಕರದ್ಯಾ[...] (1886), ಡಾ. ಫ.ಗು. ಹಳಕಟ್ಟಿ (1926), ಶಿ.ಶಿ. ಬಸವ[...] (1951), ಡಾ. ಆರ್.ಸಿ. ಹಿರೇಮಠ (1968), ಡಾ. ಎಲ್. ಬಸವರಾಜು (1990), ಡಾ. ಎಂ.ಎಂ. ಕಲಬುರ್ಗಿ ಮುಂತಾದ ವಿದ್ವಾಂಸರ ಶ್ರಮ ಸಾರ್ಥಕವಾಗುತ್ತದೆ.

■ ರಂಜಾನ್ ದರ್ಗಾ







ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ರುದ್ರ: ಬೇಟೆಗಾರ ಮತ್ತು ಅರಣ್ಯದ ಒಡೆಯ

ವಿಶ್ವದಲ್ಲಿ ಅಲ್ಲಲ್ಲಿ ಇದ್ದಂತಹ ಲಿಂಗಾರಾಧನೆಗೂ, ...ದ ಶಿವಲಿಂಗ ಪೂಜೆಗೂ ಏನೂ ಸಂಬಂಧವಿಲ್ಲ. 'ಎಲ್ಲವೂ ನಮ್ಮದೇ, ನಮ್ಮ ಸಂಸ್ಕೃತಿಯದ್ದೇ ಮೂಲ. ಮಾಡುತ್ತಿದ್ದುದರ ಮೌಲ್ಯವನ್ನು ಗ್ರಹಿಸಿ ಅವರೂ ...ನ್ನು ಅನುಸರಿಸತೊಡಗಿದರು. ಹಾಗಾಗಿ ನಮ್ಮ ...ಜನದ ತತ್ವಗಳೇ ಶ್ರೇಷ್ಠ ಅದೇ ಮೂಲ' ಎಂಬಂತ ...ದೇಶದ ಒಂದು ವರ್ಗದ ವಿದ್ವಾಂಸರ ಒಂದು ಕ್ಷುಲ್ಲಕ ...ನಂತೆ ಎಲ್ಲಾ ಲಿಂಗಾರಾಧನೆಗಳಿಗೂ ಶಿವನನ್ನು ತಳುಕು ...ಬಹುದು.

...ರಲಿ, ಶಿಶ್ನವೆಂಬುದು ಪುರುಷನ ಸೃಷ್ಟಿಶಕ್ತಿಯ ಸಂಕೇತ. ...ಗಿ ಮಾತೃಪ್ರಾಧಾನ್ಯತೆಯಿಂದ ಪಿತೃಪ್ರಾಧಾನ್ಯತೆಯ ...ವಾಲುವ ಸಮಾಜ ಮತ್ತು ಸಂಸ್ಕೃತಿಗಳಲ್ಲಿ ...ರಾಧನೆಗಳನ್ನು ಕಾಣುತ್ತೇವೆ.

ದೇವತೆಗಳು ಮತ್ತು ದೇವರು

...ಇಲ್ಲಿ ನಾವು ಒಂದು ಬಹುಮುಖ್ಯವಾದ ವಿಚಾರವನ್ನು ...ಸಬೇಕು. ಪುರಾಣಗಳೆಂದರೆ ದೇವತೆಗಳ ಅಥವಾ ...ರುಗಳ ಜೀವನ ಚರಿತ್ರೆಗಳಲ್ಲ ಹಾಗೂ ಯಾವ ...ರುಗಳೂ ರಚಿಸಿರಬಹುದಾದಂತಹ ಆತ್ಮಕಥೆಗಳ ...ರಿತವಾಗಿರುವುದೇನಲ್ಲ. ದೇವತೆಗಳು (ಡೆಮಿಗಾಡ್ಸ್) ...ದೇವರುಗಳು (ಗಾಡ್ಸ್) ಈ ಎರಡೂ ಪರಿಕಲ್ಪನೆಗಳಲ್ಲಿ ...ದೊಡ್ಡ ವ್ಯತ್ಯಾಸಗಳೇ ಇರುವುದಾದರೂ ದೇವತೆಗಳ ...ಸರಿಸುವವರು ಅವರುಗಳನ್ನು ವೈಭವೀಕರಿಸುವ ...ಟೆಯಲ್ಲಿ ದೇವರುಗಳ ಸ್ಥಾನಕ್ಕೆ ಎತ್ತರಿಸಿಬಿಟ್ಟಿದ್ದಾರೆ. ...ತೆಗಳೆಂದರೆ ನಿರ್ದಿಷ್ಟ ವರ್ಗಗಳ ಅಧಿಪತಿಗಳೆಂದೂ, ...ರೆಂದರೆ ಈ ಎಲ್ಲಾ ಅಧಿಪತಿಗಳನ್ನು ನಿರ್ವಹಿಸಲಾಗುವ ...ನ್ನತ ಸ್ಥಾನ ಹೊಂದಿರುವ ಮತ್ತು ಸುಲಭ ಗ್ರಾಹ್ಯಕ್ಕೆ ...ರದ ಅಗೋಚರ ಶಕ್ತಿಯ ಪ್ರತಿಮೆಯೆಂದು ...ಬಹುದು. ದೇವತೆಗಳು ಸ್ಥಾನಗಳಿಗೆ, ದಿಕ್ಕುಗಳಿಗೆ, ...ಯ ವಿವಿಧ ಅಂಶಗಳಿಗೆ ಪ್ರತ್ಯೇಕವಾಗಿ ನಿಯೋಜಿಸಲ್ಪಟ್ಟ ...ರು. ಅಗ್ನಿಯು ಅಗ್ನಿಗೆ, ಮರುತನು ಗಾಳಿಗೆ, ವರುಣನು ...ಗೆ ಇತ್ಯಾದಿ. ದೇವರು ಎಂಬುದು ಇದಕ್ಕಿಂತ ...ಲಾಗಿದ್ದು, ಈ ಎಲ್ಲವನ್ನೂ ತನ್ನ ಹತೋಟಿಯಲ್ಲಿಟ್ಟು ...ವುದು ಮಾತ್ರವಲ್ಲದೇ, ಇವುಗಳ ಸೃಷ್ಟಿ, ಸ್ಥಿತಿ, ...ಗಳಿಗೂ ತನ್ನ ಸಾಮರ್ಥ್ಯವೇ ಕಾರಣವೆಂದು ಬಿಂಬಿಸು...ವಹದ್ದು.

ಭಾರತವೆಂದರೆ ಅಗ್ರಹಾರವಲ್ಲ


...ಭಾರತೀಯ ಪುರಾಣಗಳಲ್ಲಿರುವ ದೇವರು, ದೇವತೆ...ಗಳ ಕಲ್ಪನೆ, ಜನ ಸಾಮಾನ್ಯರಲ್ಲಿ ಅಷ್ಟೇನೂ ವ್ಯತ್ಯಾಸವನ್ನು ...ಟುಮಾಡುವುದಿಲ್ಲ. ಆದರೆ ಈಗ ಕೆಲವು ಧರ್ಮಾಂಧರು ...ಷಕ್ಕಾಗಿ ಶಿರಡಿಬಾಬಾ ದೇವರಲ್ಲ, ಆತ ಸಂತನೂ ... ಮಂತ್ರಾಲಯದ ರಾಘವೇಂದ್ರ ದೇವರಲ್ಲ, ಆತ ...ಯ ದೇವರ ಆರಾಧಕನಷ್ಟೇ ಎಂಬುದಾಗಿ ತಾವೇನೋ ...ತ್ವದ ಸಂಪೂರ್ಣ ಲಕ್ಷಣಾರ್ಥಗಳನ್ನು ತಿಳಿದಿರು...ತೆಯೂ, ದೈವತ್ವಕ್ಕೊಂದು ಅತಿ ನಿಖರವಾದಂತಹ ...ಲಕ್ಷಣಗಳಿದ್ದು, ಅದರ ಮಾನದಂಡವು ತಮ್ಮ ...ನದಲ್ಲಿರುವಂತೆ ಶುದ್ಧ ಹುಂಬರಂತೆ ವರ್ತಿಸುತ್ತಿದ್ದಾರೆ. ...ಗಳೂ ಮತ್ತು ಆಚಾರ್ಯರಂತಹ ಅಪ್ರಬುದ್ಧ ಮತ್ತು ...ಶ ವೈದಿಕರು ತಮ್ಮ ಬ್ರಾಹ್ಮಣಿಕೆಯ ಶ್ರೇಷ್ಠತೆಯ ...ಷಕ್ಕೆ ಆಗಾಗ ಹೀಗೆ ವಾಲ್ಯೂಮ್ ಕೊಡುತ್ತಿರುತ್ತಾರೆ. ...ರನ್ನೇ ದೇವರೆನ್ನಲು ಅಥವಾ ದೇವತೆಯನ್ನಾಗಿಸಲು ...ಕ ಸಿದ್ಧಾಂತದ ಮಾನದಂಡವಲ್ಲ ನಮಗಿರುವುದು. ...ಮಾನಸದಲ್ಲಿ ಯಾರಾದರೂ ಅತ್ಯುತ್ತಮ ಸ್ಥಾನವನ್ನು ...ದು ಅತೀವ ಆರಾಧನೆಗೆ ಒಳಗಾಗಿ ದೇವರೆಂದು ...ಬಹುದು. ಅದು ಅವರವರ ಭಾವಕ್ಕೆಯೇ ಹೊರತು, ...ಷ್ಟಾನ್ನದ ಸಾರ್ವಭೌತವೆಂದು ಸಾರಲೆತ್ನಿಸುವ ವೈದಿಕದ ...ಪದಂಡದಿಂದ ಭಾರತದಂತಹ ಬಹು ಸಂಸ್ಕೃತಿಯ ...ನ್ನಿನ ಜೀವಿಗಳನ್ನು, ಭಾವಗಳನ್ನು ಅಳೆಯಲು ...ದೇಶವೆಂಬುದು ಖಂಡಿತ ಅಗ್ರಹಾರವಲ್ಲ.


... ಪುರಾಣಗಳಲ್ಲಿಯೂ ಸಹ ದೇವತೆಗಳ ಮತ್ತು ...ದೇವರುಗಳ ಅನೇಕಾನೇಕ ಕಥೆಗಳನ್ನು ನಾನಾರೀತಿಗಳಲ್ಲಿ ...ಯಲಾಗಿದೆ. ಆಯಾ ಪುರಾಣದ ಕರ್ತೃಗಳು ತಮ್ಮ ... ಒಲವು ಮತ್ತು ನಿಲುವುಗಳಿಗೆ ತಕ್ಕಂತೆ ಹೆಣೆದಿರುತ್ತಾರೆ. ...ಗಳನ್ನು ಗಮನಿಸುತ್ತಾ ಹೋದಂತೆ ಆ ಕೃತಿಗಳು ...ವುದೋ ಒಂದು ಸಮೂಹದ, ವರ್ಗದ ಅಥವಾ ...ಗಳ ಆಶಯಗಳನ್ನು ಧ್ವನಿಸುತ್ತಿವೆ ಎಂದು ...ತಿಸಬಹುದಾಗಿರುತ್ತದೆ. ಆಯಾ ಕೃತಿಗಳ ಕಾಲಘಟ್ಟದ ...ಮಾಜಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿಗಳನ್ನು ಚಾರಿತ್ರಿಕವಾಗಿ ...ಲೋಕಿಸಿದರೆ, ಅದರ ಸಮಕಾಲೀನ ಹಾಗೂ ...ತೀಯ, ಸಾಹಿತ್ಯಿಕ, ತತ್ವಶಾಸ್ತ್ರಗಳಿತ್ಯಾದಿಯಾಗಿ ಬೇರೆ ಕ್ಷೇತ್ರಗಳ ಇತರ ಕೃತಿಗಳನ್ನೂ ಅಧ್ಯಯನ ಮಾಡಿದರೆ ಪುರಾಣದ ಹೂರಣದಲ್ಲಿರುವ ಟೊಳ್ಳು ಗಟ್ಟಿಗಳನ್ನೂ ವಿಶ್ಲೇಷಿಸಬಹುದಾಗಿರುತ್ತದೆ.

ಅಸೀಮ ನಾಡಿನ ಅಸಾಮಾನ್ಯ ಕಸುಬುದಾರರು

ಎಲ್ಲೆಗಳನ್ನು ಗುರುತಿಸಲ್ಪಡದಂತಹ ಪ್ರಾಚೀನ ಭಾರತವೆಂಬ ಈ ಉಪಖಂಡದಲ್ಲಿ ಪ್ರಧಾನವಾಗಿ ಬಾಳ್ವೆ ಮಾಡುತ್ತಿದ್ದದ್ದು ವಿವಿಧ ಬುಡಕಟ್ಟುಗಳು, ಅದರಲ್ಲಿದ್ದ ಬೇಟೆಗಾರರು, ಮುಂದುವರೆದಂತೆ ಗೋಪಾಲ ಮತ್ತು ಕುರುಬರಂತಹ ಪಶುಪಾಲಕರು, ನಂತರ ಒಕ್ಕಲಿಗರು, ಕುಂಬಾರ, ಕಮ್ಮಾರ, ಚಮ್ಮಾರರಂತಹ ಕುಶಲಕರ್ಮಿಗಳು ಹಾಗೂ ಇತರ ಉಪಕಸುಬಿನವರು. ಇವರೆಲ್ಲರಿಗೂ ಅವರವರದೇ ಆದಂತಹ ದೇವರ ಪರಿಕಲ್ಪನೆಗಳು ಮತ್ತು ಸಾಂಪ್ರದಾಯಿಕ ಆಚರಣೆಗಳು ಇದ್ದವು.

ಎಲ್ಲಕ್ಕೂ ಮೂಲ ಕಸುಬು ಆದಿಮ ಕಾಲದ ಬೇಟೆಯೇ. ಅದು ಜೀವನಾಧಾರವಾದ ಚಟುವಟಿಕೆಯಾಗಿದ್ದರೂ ಅದಕ್ಕೆ ಪೂರಕವಾಗಿ ಬೇರೆ ಅನೇಕ ಚಟುವಟಿಕೆಗಳು ಮೈದಳೆದವು. ಬೇಟೆಗಾಗಿಯೇ ಸ್ಥಳದಿಂದ ಸ್ಥಳಕ್ಕೆ ಸಂಚರಿಸುತ್ತಿದ್ದ ತಂಡಗಳು ಮತ್ತು ಅದರ ನಾಯಕರು







ಅನಿವಾರ್ಯವಾಗಿಯೇ ಇತರ ತಂಡಗಳನ್ನು ಎದುರಿಸಬೇಕಾಗಿ ಬರುತ್ತಿತ್ತು. ಅಂತಹ ಸಮಯದಲ್ಲಿ ಹೋರಾಟವು ತೀಕ್ಷ್ಣವಾಗಿ, ಜಯವೆಂಬುದು ದೊರಕಿದಾಗ ಸೋತ ತಂಡಗಳು ಅಧೀನವಾಗುತ್ತಿದ್ದವು. ಕೆಲವೊಮ್ಮೆ ಆ ಸ್ಥಳದಲ್ಲಿ ನೆಲೆಯೂರಲೂ ಬೇಕಾಗುತ್ತಿತ್ತು. ಇವೆಲ್ಲವೂ ಇಂತೆಯೇ ನಿರ್ದಿಷ್ಟವಾಗಿ, ನಿಖರವಾಗಿ ಆಯ್ತು ಎಂದಲ್ಲ. ಆದರೆ, ಹಲವು ರೀತಿಗಳಲ್ಲಿ ಈ ಬಗೆಯ ಸನ್ನಿವೇಶಗಳು ಒದಗುತ್ತಿದ್ದವು.

ಒಂದು ಅಧ್ಯಯನದ ಪ್ರಕಾರ ತ್ರಿಬಿಸ್ಸ್ಪಪ, ಈಗಿನ ಟಿಬೆಟ್‌ನಿಂದ ಬಂದ ನಿಷಾಧರ ಒಡೆಯನೇ ರುದ್ರನೆಂದು ಹೇಳುತ್ತಾರೆ. ಆದರೆ ಆ ರುದ್ರನು ಮಾತ್ರ ಬೇಟೆಗಾರ ಎಂಬುದನ್ನು ಸ್ಪಷ್ಟ ಕುರುಹುಗಳು ತಿಳಿಸುತ್ತವೆ.

ರುದ್ರ ಟಿಬೆಟ್ಟಿನವನೇ?

ಕೃಷ್ಣಯಜುರ್ವೇದ ತೈತ್ತಿರೀಯ ಸಂಹಿತಾದಲ್ಲಿ ಉಲ್ಲೇಖವಾಗಿರುವ ರುದ್ರಪ್ರಶ್ನಃದಲ್ಲಿ, "ಓಂ ನಮೋ ಭಗವತೇ ರುದ್ರಾಯ । ಓಂ ನಮಸ್ತೆ ರುದ್ರ ಮನ್ಯವ ಉತೋ ತ ಇಷವೇ ನಮಃ।" ಎಂದು ಪ್ರಾರಂಭವಾಗುತ್ತದೆ. ಇದರಲ್ಲಿ "ನಿನ್ನ ಬಿಲ್ಲಿಗೆ ನಮಸ್ಕಾರ, ನಿನ್ನ ಬಾಣಕ್ಕೆ ನಮಸ್ಕಾರ, ಬಿಲ್ಲುಬಾಣಗಳನ್ನು ಹಿಡಿದುಕೊಂಡು ಚಾಚಿರುವ ನಿನ್ನ ಎರಡೂ ತೋಳುಗಳಿಗೆ ನಮಸ್ಕಾರ" ಎಂದು ಹೇಳುತ್ತಾ ಅವನೊಬ್ಬ ಬಿಲ್ಲು, ಬಾಣಗಳನ್ನು ಹಿಡಿದುಕೊಂಡು ಬೇಟೆಯಾಡುವವನು ಎಂಬ ಸ್ಪಷ್ಟ ಚಿತ್ರಣವನ್ನು ಕೊಡುತ್ತದೆ. ನಂತರ ಮುಂದುವರೆದಂತೆ ಕೆಂಪು ಮಿಶ್ರಿತ ಹಳದಿಬಣ್ಣದ ಎಳೆಯ ಎಲೆಯಂತಿರುವವನು (2.1.3) ಎಂದು ವರ್ಣಿಸುವುದನ್ನು ನೋಡಿದರೆ, ಆರ್ಯರ ಅಥವಾ ದ್ರಾವಿಡರ ಎರಡೂ ಮೈಬಣ್ಣಗಳನ್ನು ಹೊರತುಪಡಿಸಿದ ಚರ್ಮಕಾಂತಿಯನ್ನು ಹೇಳಿದ್ದು, ಕೆಂಪಗಿದ್ದನೆಂದು ಹೇಳುವ ಮೂಲಕ ಸಾಮಾನ್ಯವಾದ ಟಿಬೆಟಿಯನ್ನರ ತ್ವಚೆಗೆ ಹೋಲಿಸುತ್ತಾರೆ. ಹಾಗೆಯೇ ಮುಂದೆ ಇವನಿಗೆ ಕಪ್ಪು ಕೂದಲು ಇತ್ತೆಂದೂ ವರ್ಣಿಸುತ್ತಾರೆ. ಇವನು ಹಠಮಾರಿಯೂ, ಒರಟನೂ, ಒಮ್ಮೆ ಶತ್ರುಗಳ ಮೇಲೆ ಕಣ್ಣುಹಾಕಿದರೆ ಅವರನ್ನು ಕಾಡದೇ ಬಿಡುವವನಲ್ಲ ಎಂದು ಹೇಳುವಂತೆ ನೀನು ಶತ್ರುಗಳಿಗೆ ರೋಗದಂತೆ ಹಿಡಿದುಕೊಳ್ಳುವವನು ಮತ್ತು ಪ್ರವಾಹದ ಅಧಿಪತಿಯು ಎಂದು ಹೇಳುತ್ತಾ, ವೃಷಭದ ಮೇಲೆ ಕುಳಿತುಕೊಂಡು ಬರುವುದು ಮಾತ್ರವಲ್ಲದೇ, ತಂಡೋಪತಂಡಗಳಲ್ಲಿ ಬಂದು ದಾಳಿ ಮಾಡುತ್ತಿದ್ದ ಎಂಬುದರ ಸೂಚನೆಗಳು ಸಿಗುತ್ತವೆ. ಪವಿತ್ರವಾದ ದಾರವನ್ನು ಹೊಂದಿರುವವನು ಎಂದು ಹೇಳುವಾಗ ಅದು ಜನಿವಾರವೇ ಅಥವಾ ಜನಿವಾರದಂತೆ ಬೇರೆ ರೀತಿಯ ದಾರಗಳನ್ನು ಬೇರೆ ಬೇರೆ ಸಂಸ್ಕೃತಿಯವರು ಉಪಯೋಗಿಸುತ್ತಿದ್ದರೇ ಎಂದು ನೋಡಬೇಕು.

ಅವನು ಸಂಪೂರ್ಣ ಅರಣ್ಯದಲ್ಲಿ ಇದ್ದವನು, ಮರಗಿಡಗಳ ಒಡೆಯ, ಅರಣ್ಯದ ಅಧಿಪತಿ ಎಂದೂ ಗುರುತಿಸುವುದಲ್ಲದೇ, ಅವನ ಗುಂಪಿನಲ್ಲಿ ಬಹಳ ಆರೋಗ್ಯಪೂರ್ಣವಾದ, ದಷ್ಟಪುಷ್ಟರಾದಂತವರು ಇದ್ದರು, ಇವನು ಋಷಭದ ಮೇಲೆ ಕುಳಿತು ಬಂದರೆ, ಅವನ ತಂಡದ ಉಳಿದವರು ಕಾಲಾಳುಗಳು. ಅವನು ಜೋರಾಗಿ ಗರ್ಜಿಸುತ್ತಿದ್ದ, ಇತರರನ್ನು ಅಳುವಂತೆ ಮಾಡುವಷ್ಟು ಹೆದರಿಸುತ್ತಿದ್ದ ಎಂಬುದೂ ಕೂಡ ಇದರಲ್ಲಿ ತಿಳಿಯುತ್ತದೆ.

ಹಾಗೆಯೇ ಮುಂದುವರಿದು, ಆರ್ಯರು ಈತನೊಂದಿಗೆ ವ್ಯಾಪಾರ ವ್ಯವಹಾರವನ್ನು ಹೊಂದಿದ್ದರು ಎಂದೂ ತಿಳಿಯುತ್ತದೆ. ಅರಣ್ಯದ ಉತ್ಪನ್ನಗಳನ್ನು ಅವನಿಂದ ಪಡೆಯುತ್ತಿದ್ದರು, ಅದೂ ವ್ಯಾವಹಾರಿಕವಾಗಿ ಎಂಬುದರ ಸ್ಪಷ್ಟ ಕುರುಹುಗಳು ಇದರಲ್ಲಿವೆ. ಆದರೆ, ಅವನಿಗೆ ರೇಗಿದರೆ ಅಥವಾ ಅವನಿಗಿಷ್ಟವಾದಂತಹದ್ದೇನಾದರೂ ಇದ್ದು ಸಂಬಂಧಪಟ್ಟವರು ಕೊಡದೇ ಇದ್ದರೆ ದರೋಡೆಕೋರನಂತೆ (3.1.3) ದೋಚಿಬಿಡುತ್ತಿದ್ದ, ಮೋಸ ಮಾಡುತ್ತಿದ್ದ, ಅತಿದೊಡ್ಡ ಮೋಸ ಮಾಡುತ್ತಿದ್ದ (3.1.4) ಎಂದೂ ಉಲ್ಲೇಖಿಸುತ್ತಾರೆ. ಅವನೊಬ್ಬ ಕ್ರಾಂತಿಕಾರಿ ತಂಡದ ಒಡೆಯನೆಂದು ತೋರುತ್ತದೆ. ತಮ್ಮ ಒಡೆಯರ ಬಳಿಯೇ ಕದಿಯುತ್ತಿದ್ದ ರೈತರ ಒಡೆಯನು ಅವನು ಎಂದೂ ಹೇಳುತ್ತಾರೆ. ಒಟ್ಟಾರೆ ರುದ್ರನೆಂಬುವನು ದರೋಡೆಕೋರ, ಕಳ್ಳ ಮತ್ತು ಕೊಲೆಗಾರ ಎಂಬ ಚಿತ್ರಣವನ್ನು ರುದ್ರಪ್ರಶ್ನಃ ಸ್ಪಷ್ಟವಾಗಿ ಕಟ್ಟಿಕೊಡುತ್ತದೆ.

ನಿಷಾದ, ಬೇಡ, ಶಬರ, ವ್ಯಾಧ ಇತ್ಯಾದಿಯಾಗಿ ಕರೆಯುವ ಬೇಟೆಗಾರನಾಗಿದ್ದ ರುದ್ರನು ಅರಣ್ಯವಾಸಿಯೆಂದೂ, ಆತನು ಬಹು ಕ್ರೂರಿಯೆಂದೂ ರುದ್ರನ ಬಗ್ಗೆ ಇರುವ ಈ ಸ್ತುತಿ ಹೇಳುವುದಲ್ಲದೇ ಅವನೊಬ್ಬ ಗಣದ ಒಡೆಯನೆಂದೂ, ನೋಡಲು ಕುರೂಪಿಯಾಗಿದ್ದನೆಂದೂ, ಅವನು ಪ್ರಪಂಚದಲ್ಲಿರುವ ಸಾಮಾನ್ಯರಂತೆ ಕಾಣುವವನು ಎಂದೂ ಹೇಳುತ್ತಾರೆ. ಹಾಗೆಯೇ ವರ್ಣಿಸುತ್ತಾ ಕಮ್ಮಾರ, ಬಡಿಗೆ, ಬೆಸ್ತ ಇತ್ಯಾದಿಗಳೂ ಇವನೇ ಎಂದು ಹೇಳುವ ಇವರು ಇದನ್ನು ರೂಪಕಗಳಲ್ಲಿ ಹೇಳುತ್ತಿದ್ದಾರೋ ಅಥವಾ ಅವನು ಅವುಗಳನ್ನೆಲ್ಲಾ ಬಲ್ಲವನಾಗಿದ್ದನೋ ತಿಳಿಯದು.

ಆದರೆ, ಚಾರಿತ್ರಿಕವಾಗಿ ಒಬ್ಬ ರುದ್ರನೆಂಬುವನು ಇದ್ದು, ಅವನ ಮುಂದೆ ಇವನ್ನೆಲ್ಲಾ ಹೇಳುತ್ತಾ ಸ್ತುತಿ ಮಾಡುತ್ತಿದ್ದರೆಂದರೆ ಅವನಿಗೆ ಸಂಸ್ಕೃತವು ಗೊತ್ತಿರಲಿಲ್ಲ ಎಂದು ಅನಿಸುತ್ತದೆ. ನೀನು ಕಳ್ಳ, ನೀನು ಮೋಸಗಾರ, ನೀನು ಕೊಲೆಗಡುಕ, ನೀನು ಕುರೂಪಿ ಎಂದೆಲ್ಲಾ ಹೇಳುತ್ತಿದ್ದರೆ, ಅದು ಅವನಿಗೆ ತಿಳಿಯದ ಭಾಷೆಯೇ ಆಗಿದ್ದು, ನಗುಮೊಗದಿಂದ ಸುಂದರವಾಗಿ ಹೊರಡುವ ಪದಗಳಿಂದ ನಾನು ನಿನಗೆ ನಮಸ್ಕರಿಸುತ್ತೇನೆ ಎಂದು ಹೇಳುತ್ತಾ ಸಂಗೀತದಂತೆ ಉಲಿಯುವ ಋತ್ವಿಕ್ಕುಗಳನ್ನು ನೋಡಿಯೇ ಮೈಮರೆತಿರಬಹುದು ಅಥವಾ ಮೋಸ ಹೋಗಿರಬಹುದು ಎಂದು ಅನ್ನಿಸುತ್ತದೆ.

ರುದ್ರನು ಬೇಟೆಗಾರ ಕುಲದವನು ಎಂಬುದಕ್ಕೆ ಇಂಥಾ ಸಾಹಿತ್ಯಗಳಿಂದಲೇ ಕಟ್ಟಿಕೊಟ್ಟಿರುವಂತಹ ಚಿತ್ರಗಳೂ ನಮಗೆ ಸಹಕಾರಿಯಾಗುತ್ತವೆ. ಹುಲಿಯ ಚರ್ಮವನ್ನು ಹೊದ್ದಿರುವುದು, ಆತನ ವೇಷಭೂಷಣಗಳನ್ನು ನೋಡಿದರೆ ಆತನೊಬ್ಬ ಅರಣ್ಯಕನೆಂಬುದು ಸ್ಪಷ್ಟವಾಗುತ್ತದೆ.

ಈತನೊಬ್ಬ ಒರಟ ಮತ್ತು ಕ್ರೂರಿಯಾಗಿದ್ದು ಆರ್ಯರನ್ನು ಬಹುವಾಗಿ ಹಿಂಸಿಸಿದ್ದಾನೆ. ಅವರೋ ಅವನೊಂದಿಗೆ ಅನೇಕ ವಾಣಿಜ್ಯ ವ್ಯವಹಾರಗಳನ್ನು ಹೊಂದಿರುವ ಕಾರಣದಿಂದ ಹೇಗೋ ಸಹಿಸಿಕೊಂಡು, ಹೊಗಳಿಕೊಂಡು ಸಮತೋಲನ ಸಾಧಿಸಿಕೊಂಡಿದ್ದಾರೆ. ಆದರೆ, ಮುಂದೆ ಬರುಬರುತ್ತಾ ಆ ರುದ್ರಗಣದ ಒಡೆಯರು ಬದಲಾಗುತ್ತಾ ಹೋದಂತೆ, ಬೇರೆಬೇರೆ ರೀತಿಯ ಅನುಭವಗಳೂ ಅವರಿಗುಂಟಾಗಿದ್ದು, ಮುಂಬರುವ ಸ್ತುತಿಗಳಲ್ಲೂ ಬದಲಾವಣೆಗಳು ಕಂಡಿರುತ್ತವೆ.

ಒಟ್ಟಾರೆ ರುದ್ರಗಣವೆಂಬುದು ಮತ್ತು ಅದರ ನಾಯಕರು ಆರ್ಯರಿಗೆ ಸಾಕಷ್ಟು ತೊಂದರೆಗಳನ್ನು ಕೊಟ್ಟಿರುವುದಂತೂ ಸುಳ್ಳಲ್ಲ. ಅವರನ್ನು ಓಲೈಸಲು ಆರ್ಯರು ಅರಣ್ಯಕರಿಗೆ ಅರ್ಥವಾಗದ ಭಾಷೆಯಲ್ಲಿ ಸ್ತುತಿಗಳನ್ನು ಹಾಡಿ ಉಬ್ಬಿಸುತ್ತಿದ್ದರೋ, ಅಥವಾ ನೀವು ಇಷ್ಟು ಪರಾಕ್ರಮಿಗಳು ಎಂದು ಹೇಳುವುದನ್ನು ಒಪ್ಪಿಯೇ ಉಬ್ಬುತ್ತಿದ್ದರೊ, ಅಂತೂ ಸ್ತುತಿಗಳಲ್ಲಂತೂ ರುದ್ರನ ವರ್ಣನೆ ಅವನ ಚಿತ್ರಣವನ್ನು ಸ್ಪಷ್ಟವಾಗಿ ಕಟ್ಟಿಕೊಡುತ್ತದೆ. ಇವೆಲ್ಲವೂ ಸಾಂಕೇತಿಕವಾದದ್ದು ಅಂತ ಇಂತಹ ವಿಷಯಗಳಿಗೆ ವಿವರಣೆಯನ್ನು ಹುಟ್ಟಿಸುವುದು ಒಪ್ಪಿಕೊಂಡವರನ್ನು ಸಮರ್ಥಿಸಲು ಹೂಡುವ ಇನ್ನೊಂದು ತಂತ್ರ. ಏನೇ ಆಗಲಿ, ರುದ್ರನ ಗಣವೆಂಬುದು ಅರಣ್ಯಕರ ಗಣವಾಗಿದ್ದು, ಅವರು ಸಂಪೂರ್ಣ ಕಾಡಿನ ಮಕ್ಕಳು ಎಂಬುದನ್ನು ನಾವು ತಳ್ಳಿಹಾಕುವ ಸಾಧ್ಯವೇ ಇಲ್ಲ.

ಯಾವುದೇ ಒಂದು ಗಣವು ವ್ಯಕ್ತಿ ಕೇಂದ್ರಿತವಾಗಿಯೂ ಇದ್ದಿರಬಹುದು ಅಥವಾ ಸಮೂಹ ಕೇಂದ್ರಿತವಾಗಿಯೂ ಇದ್ದಿರಬಹುದು. ಒಟ್ಟಾರೆ ಪ್ರಾಣಿಸಂಕೇತಗಳನ್ನು ಹೊಂದಿರುವ ಗಣಗಳನ್ನು ಮುನ್ನಡೆಸುತ್ತಿದ್ದ ನಾಯಕರು ತಂಡದಲ್ಲಿ, ವ್ಯವಹಾರಗಳಲ್ಲಿ ಮತ್ತು ಹೋರಾಟಗಳಲ್ಲಿ ಪ್ರಧಾನ ಪಾತ್ರವನ್ನು ವಹಿಸುತ್ತಿದ್ದರು.


ಗಣಗಳ ಅಧಿಪತ್ಯವನ್ನು ವಹಿಸಿಕೊಂಡು ಬಂದ ಅನೇಕರನ್ನು ಮುಂದೆ ಸ್ಮರಿಸಿಕೊಳ್ಳುವಾಗ ಗಣದಿಂದಲೇ ಗುರುತಿಸುತ್ತಿದ್ದು, ರುದ್ರನೆಂಬುವನೂ ಒಬ್ಬನೇ ವ್ಯಕ್ತಿಯಲ್ಲ, ಅನೇಕ ರುದ್ರರು ಸರಿದುಹೋಗಿದ್ದಾರೆ ಎಂಬುದನ್ನೂ ನಾವು ಗಮನಿಸಬೇಕು. ರುದ್ರನ ಕಥೆಗಳನ್ನು ಕೇಳುವಾಗ ಅದು ಯಾವ ರುದ್ರನದ್ದಾಗಿದ್ದರೂ ಈಗಿರುವ ತಪ್ಪಾದ ಗ್ರಹಿಕೆಯಂತೆ ಎಲ್ಲವನ್ನೂ ಒಬ್ಬನೇ ವ್ಯಕ್ತಿಯೆಂದೂ, ಅವನದೇ ವಿವಿಧ ಲೀಲೆಗಳೆಂದೋ ಅಥವಾ ಇನ್ನೂ ಮುಂದುವರಿದು ಅವತಾರಗಳೆಂದೋ ತಿಳಿಯುವ ಮೂಲಕ ಯಾರೋ ಮೂಲ ಪುರುಷನ ಕಲ್ಪನೆಯನ್ನು ಜೀವಂತವಾಗಿರಿಸುವಂತೆ ಕಾಣುತ್ತದೆ.

ಭಾರತದ ಮೊದಲನೆಯ ಪ್ರಧಾನಿ ಜವಹರಲಾಲ್ ನೆಹರೂ ಆಗಿದ್ದು, ಮುಂದೆ ಬಂದಿರುವ ಇತರ ಎಲ್ಲಾ ಪ್ರಧಾನಿಗಳೂ ನೆಹರೂ ಅವರ ಅವತಾರಗಳೇ, ನೆಹರೂ ಅವರೇ ಬೇರೆಲ್ಲಾ ಪ್ರಧಾನಿಗಳ ಕುಟುಂಬಗಳಲ್ಲಿ ಅವತಾರ ತಾಳಿ ಹುಟ್ಟಿ ಬಂದರು ಎನ್ನುವುದು ಎಷ್ಟು ಹಾಸ್ಯಾಸ್ಪದ ಅವಿವೇಕತನವೋ, ರುದ್ರ, ವಿಷ್ಣು, ಶಕ್ತಿ, ಬುದ್ಧ ಇತ್ಯಾದಿಗಳೆಲ್ಲವೂ ಒಂದೇ ವ್ಯಕ್ತಿಯ ಮೂಲದ್ದು ಎನ್ನುವುದು ಕೂಡ ಅಷ್ಟೇ ಅವಿವೇಕತನ.

ಬೌದ್ಧರಲ್ಲಿ ಮತ್ತು ಜೈನರಲ್ಲಿ ಇದರ ಬಗ್ಗೆ ತಿಳಿವಳಿಕೆ ಇದೆ. ಬುದ್ಧರ ಪರಂಪರೆಯನ್ನು, ತೀರ್ಥಂಕರರ ಪರಂಪರೆಯನ್ನೂ ಅವರು ಗುರುತಿಸುತ್ತಾರೆ. ಆದರೆ ಆರ್ಯ ರಾಜಕಾರಣದ ಹುನ್ನಾರಕ್ಕೆ ವೈದಿಕರ, ಪುರೋಹಿತರ ಅಕ್ಷರದ ಸ್ವಾಧೀನಕ್ಕೆ ಬಲಿಯಾಗಿ ಹೋದ ಈ ದೇಶದ ಇತಿಹಾಸದಲ್ಲಿ ಸ್ಪಷ್ಟವಾದ ಸಾಂಸ್ಕೃತಿಕ ಮತ್ತು ಸಾಮಾಜಿಕ ಅಧ್ಯಯನಕ್ಕೆ ಬೇಕಾಗಿರುವ ಐತಿಹಾಸಿಕ ಕುರುಹುಗಳೆಲ್ಲಾ ಧ್ವಂಸವಾಗಿವೆ.

ಇನ್ನು ರುದ್ರನಿಗೆ ಲಿಂಗದ ಕುರುಹೇಕೆ ಅಂಟಿಕೊಂಡಿತು? ಹೋಗಿಬಂದು ಅವನನ್ನು ನಾವೇಕೆ ಏಕೆ ದೇವರೆನ್ನಲಾಯಿತು? ತಾಂಡವ ಶಿವ, ಶಂಕರ, ಭೈರವ ಎಂದರೆ ಯಾರು? ತಾಂಡವ ಮಾಡುವ ನಟರಾಜನೇಕಾದ? ಇವೆಲ್ಲಾ ಮುಂದೆ ನೋಡುವ.

ಗುಜರಾತ್ ಮಾದರಿ ಮಾದರಿಯೇ ಅಲ್ಲ



2014ರ ಚುನಾವಣಾ ಪ್ರಚಾರವನ್ನು ಮತ್ತೆ ನೆನಪಿಸಿಕೊಳ್ಳಿ. ಅಂದಿನ ಘಂಟಾಘೋಷ ಭಾಷಣಗಳಲ್ಲಿ ಮತ್ತು ಆಪ್ತ ಮಾಧ್ಯಮಗಳಲ್ಲಿ ಭಾರಿ ಪ್ರಚಲಿತವಾಗಿದ್ದ ಶಬ್ದಪುಂಜಗಳಲ್ಲೊಂದು 'ಗುಜರಾತ್ ಮಾದರಿ ಅಭಿವೃದ್ಧಿ'. ಅದಕ್ಕೊಂದು ಉದಾಹರಣೆಯಾಗಿ ಗುಜರಾತಿನಲ್ಲಿ ಅಗತ್ಯಕ್ಕಿಂತಲೂ ಹೆಚ್ಚು ವಿದ್ಯುತ್ತನ್ನು ಉತ್ಪಾದಿಸಲಾಗುತ್ತಿದೆ ಎಂದು ಕೊಚ್ಚಿಕೊಳ್ಳಲಾಗುತ್ತಿತ್ತು. ನಮ್ಮಲ್ಲಿ ಕೆಲವರಿಗಿರುವ ಸಂಸ್ಕೃತದ ಒಲವಿನ ದೌರ್ಬಲ್ಯವನ್ನು ಚೆನ್ನಾಗಿ ಅರಿತವರು ಜ್ಯೋತಿ ಗ್ರಾಮ ಎಂಬಿತ್ಯಾದಿ ಸಂಸ್ಕೃತ ಪದಗಳನ್ನು ಧಾರಾಳವಾಗಿ ಹರಿಬಿಡುತ್ತಿದ್ದರು. ಆದರೆ ಗುಜರಾತಿನ ನೈಜಸ್ಥಿತಿ ಏನೆಂದು ನೋಡಹೊರಟರೆ ನಮಗೆದುರಾಗುವುದು ತೆರಿಗೆದಾರರ ಹಣವನ್ನು ಆಪ್ತ ಉದ್ಯಮಿಗಳ ಕಿಸೆಗೆ ವರ್ಗಾಯಿಸುವ ಕಥೆ. ಕಳೆದ ವರ್ಷವೇ ಸುಮಾರು 6800 ಕೋಟಿ ದುಡ್ಡು ತೆತ್ತು ಖಾಸಗಿಯವರಿಂದ ವಿದ್ಯುತ್ತನ್ನು ಖರೀದಿಸಲಾಗಿದೆ. 2012 ಮತ್ತು 2013ರ ಸಾಲಿನ ಅಂಕಿಅಂಶಗಳ ಮೇಲೆ ಒಂಚೂರು ಕಣ್ಣಾಡಿಸಿದರೆ ಸಾಕು ಎಲ್ಲವೂ ಸ್ಫಟಿಕದಷ್ಟು ಸ್ಪಷ್ಟವಾಗುತ್ತದೆ.

ಕಂಪೆನಿ	2012 (ಕೋಟಿಗಳಲ್ಲಿ)	2013 (ಕೋಟಿಗಳಲ್ಲಿ)
ಎಸ್ಸಾರ್	402.26	156.38
ಎಸ್ಸಾರ್ ವಡಿನಾರ್	1263	1001
ಅದಾನಿ ಪವರ್	2430.31	3032.81
ಗುಜರಾತ್ ಪಗುಥನ್	154.01	1115.59
ಎಸಿಬಿ	21.57	227.75
ಕೋಸ್ಟಲ್ ಗುಜರಾತ್	-	1278.61
ಒಟ್ಟು ಮೊತ್ತ	4380.79	6812.46

ಅಂದಹಾಗೆ ಈ ಅಂಕಿಅಂಶಗಳನ್ನೆಲ್ಲ ನೀಡಿದ್ದು ರಾಜ್ಯ ಸರ್ಕಾರದ್ದೇ ಸಂಸ್ಥೆಯಾದ ಗುಜರಾತ್ ಊರ್ಜಾ ವಿಕಾಸ್ ನಿಗಮ. ಅದು ಕಳೆದ ಎಂಟು ವರ್ಷಗಳಿಂದ ಸತತವಾಗಿ ಲಾಭದಲ್ಲಿ ನಡೆಯುತ್ತಿದೆ. 2011-12ರ ಸಾಲಿನಲ್ಲಿ 624 ಕೋಟಿ ಮತ್ತು 2012-13ರ ಸಾಲಿನಲ್ಲಿ 539 ಕೋಟಿ ನಿವ್ವಳ ಲಾಭ ಗಳಿಸಿದೆ. ಆದರೂ 44,256 ಲಕ್ಷ ರೂಪಾಯಿಗಳಷ್ಟು ಸಾಲದ ಹೊರೆ ಅದರ ಮೇಲಿದೆ. ಕಾರಣ? ವಿದ್ಯುತ್ತನ್ನು ಸರ್ಕಾರಿ ಕಂಪೆನಿಗಳಲ್ಲಿ ಉತ್ಪಾದಿಸದೆ ಖಾಸಗಿ ಕಂಪೆನಿಗಳಿಂದ ಖರೀದಿಸುತ್ತಿರುವುದು. ನಷ್ಟವನ್ನು ಹೇಗೆ ಭರಿಸಲಾಗುತ್ತಿದೆ ಗೊತ್ತೇ? ಎಲ್ಲಾ ನಷ್ಟವನ್ನು ಗ್ರಾಹಕರ ತಲೆಗೆ ಕಟ್ಟಲಾಗುತ್ತಿದೆ. ಶೇಕಡಾ 20ರಷ್ಟು ತೆರಿಗೆ ವಿಧಿಸುವ ಮೂಲಕ. ಇಡೀ ದೇಶದಲ್ಲೇ ಅತ್ಯಂತ ಹೆಚ್ಚು ವಿದ್ಯುತ್ ತೆರಿಗೆ ಇದಾಗಿದೆ.

'ಗುಜರಾತ್ ಮಾದರಿ ಅಭಿವೃದ್ಧಿ'ಯ ಇತ್ತೀಚಿನ ಉದಾಹರಣೆ ಇಲ್ಲಿದೆ. ರಾಜ್ಯ ವಿಧಾನಸಭೆಯಲ್ಲಿ ಸಿಎಜಿ ಮಂಡಿಸಿರುವ ಐದು ವರದಿಗಳ ಪ್ರಕಾರ ರಾಜ್ಯದಲ್ಲಿ 25,000 ಕೋಟಿಗೂ ಅಧಿಕ ಅಕ್ರಮಗಳು ನಡೆದಿದ್ದು ಇದರಲ್ಲಿ ಸುಮಾರು 1500 ಕೋಟಿಗೂ ಮಿಕ್ಕಿದ ಮೊತ್ತವನ್ನು ರಿಲಾಯನ್ಸ್, ಅದಾನಿ, ಎಸ್ಸಾರ್ ಕಂಪೆನಿಗಳಿಗೆ ಹಂಚಲಾಗಿದೆ. ಸಿಎಜಿ ವರದಿಯ ಕೆಲವು ಮುಖ್ಯಾಂಶಗಳು:

ಎಸ್ಸಾರ್‌ನೊಂದಿಗೆ ವಿದ್ಯುತ್ ಖರೀದಿ ಒಪ್ಪಂದ ಮಾಡಿಕೊಂಡ ಬಳಿಕ ಗುಜರಾತ್ ಊರ್ಜಾ ವಿಕಾಸ್ ನಿಗಮ ಸಕಾಲದಲ್ಲಿ ವಿತರಣಾ ಪಾಯಿಂಟ್‌ಗಳನ್ನು ಸ್ಥಾಪಿಸಿಲ್ಲ. ಪರಿಣಾಮವಾಗಿ ಎಸ್ಸಾರ್ ಪವರ್‌ಗೆ 587.5 ಕೋಟಿ ಅನಗತ್ಯ ಲಾಭವಾಗಿದೆ.

ಅದಾನಿಯ ಮುಂದ್ರಾ ಬಂದರು ಯೋಜನೆಯ ಮೊದಲ ಹಂತದಲ್ಲಿ ಸರ್ಕಾರ 118.12 ಕೋಟಿಯಷ್ಟು ಕಮ್ಮಿ ಹಣವನ್ನು ಕಂಪೆನಿಯಿಂದ ವಸೂಲಿ ಮಾಡಿದೆ.

ಸೌರ ವಿದ್ಯುತ್ ನೀತಿ ಅಡಿಯಲ್ಲಿ ಖಾಸಗಿಯವರೊಂದಿಗೆ ಹೆಚ್ಚುವರಿ ವಿದ್ಯುತ್ ಖರೀದಿ ಒಪ್ಪಂದ ಮಾಡಿಕೊಂಡ ಫಲವಾಗಿ ಗ್ರಾಹಕರ ಮೇಲೆ 473.2 ಕೋಟಿಯಷ್ಟು ಹೆಚ್ಚುವರಿ ಹೊರೆ ಹಾಕಿದಂತಾಗಿದೆ.

ರಾಜ್ಯದ ಬೇರೆ ಬೇರೆ ಇಲಾಖೆಗಳ ಅಡಿ 9121.46 ಕೋಟಿಗಳನ್ನು ವಿವಿಧ ಯೋಜನೆಗಳಿಗೆ ಬಳಸಿರುವ ಬಗ್ಗೆ ಅಧಿಕಾರಿಗಳು ಪ್ರಮಾಣಪತ್ರ ಸಲ್ಲಿಸಿಲ್ಲ.


ಎರಡು ಸಂದರ್ಭಗಳಲ್ಲಿ (1999-2000 ಮತ್ತು 2011-12) 13,049.67 ಕೋಟಿ ಮೊತ್ತದ ಬಜೆಟ್ ನೆರವು ಬಳಕೆಯಾಗದೆ ಉಳಿದಿದೆ.

ಜೈಲುಗಳ ಭದ್ರತೆಯಲ್ಲಿ ಅನೇಕ ದೋಷಗಳಿವೆ. ಸಬರಮತಿ ಜೈಲಿನಲ್ಲಿ ನಿರ್ಮಾಣ ಕಾಮಗಾರಿಯ ಸಂದರ್ಭದಲ್ಲಿ ಭದ್ರತಾ ಗೋಡೆಗಳನ್ನು ಕಟ್ಟದೆ ಇದ್ದುದರಿಂದ ಕೈದಿಗಳು ಸುರಂಗ ಕೊರೆದು ಪರಾರಿಯಾಗಲು ಅವಕಾಶ ನೀಡಿದಂತಾಗಿದೆ.

ಬಾಲಕಿಯರ ಶಿಕ್ಷಣ ಯೋಜನೆಯಡಿ 1ನೆ ತರಗತಿಯಿಂದ 8ನೆ ತರಗತಿವರೆಗಿನ ಬಾಲಕಿಯರಿಗಾಗಿ ಇರುವ 2000 ರೂಪಾಯಿಗಳ 'ವಿದ್ಯಾಲಕ್ಷ್ಮಿ ಯೋಜನೆ'

ಬೂಸಿ ಬಸ್ಯ... ಮೋದಿ!

33



ಅವ್ಯವಹಾರ, ಅಕ್ರಮಗಳ ಕೂಪವಾಗಿದೆ. ಒಂದೇ ಹೆಸರಿನ ಹಲವಾರು ಬ್ರಾಂಡ್‌ಗಳು. ಖರೀದಿಯಾಗಿರು[ವ] ನಿದರ್ಶನಗಳನ್ನು ಕಾಣಬಹುದಾಗಿದೆ.

2007ರ ನಂತರ ಯಾವುದೇ ಸ್ಮಾರಕಗಳನ್ನು ಸಂರಕ್ಷಣೆಗಾಗಿ ಗುರುತಿಸಲಾಗಿಲ್ಲ, ಸ್ಮಾರಕಗಳ ಸಂರಕ್ಷಣೆಗಾ[ಗಿ] ಯಾವುದೇ ದೀರ್ಘಕಾಲಿಕ ಯೋಜನೆಗಳನ್ನೂ ಮಾಡಲಾಗಿ[ಲ್ಲ].


ಸರ್ಕಾರಿ ಸ್ವಾಮ್ಯದ 69 ಉದ್ದಿಮೆಗಳ ಪೈಕಿ 1[...] ಉದ್ದಿಮೆಗಳು 426.94 ಕೋಟಿಯಷ್ಟು ನ[ಷ್ಟ] ಅನುಭವಿಸಿವೆ.

ರಾಜ್ಯದಲ್ಲಿ ಕಳೆದ 5 ವರ್ಷಗಳಿಂದ ತೆರಿಗೆ ಸಂಗ್ರಹ[ಣೆ] ಪ್ರಮಾಣ ಕಡಿಮೆಯಾಗಿದೆ.


16 ಸರ್ಕಾರಿ ತಾಂತ್ರಿಕ ಕಾಲೇಜುಗಳಲ್ಲಿ 90% ಪ್ರಾಧ್ಯಾಪಕರು, 81% ಪ್ರಾಂಶುಪಾಲರು ಮತ್ತು 23% ಸಹ ಪ್ರಾಧ್ಯಾಪಕರ ಹುದ್ದೆಗಳು ಖಾಲಿ ಬಿದ್ದಿವೆ. 2[...] ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ 85% ಪ್ರಾಂಶುಪಾಲರು 74% ವಿಭಾಗ ಮುಖ್ಯಸ್ಥರು ಮತ್ತು 69% ಪ್ರಯೋಗಾಲಯ ಸಹಾಯಕರ ಹುದ್ದೆಗಳಿಗೆ ನೇಮಕವಾಗಿ[ಲ್ಲ]. ಉಪಕರಣಗಳ ಖರೀದಿಗೆ ಒದಗಿಸಲಾಗಿರುವ ನೆರವ[ು] ಸದ್ಬಳಕೆ ಆಗುತ್ತಿಲ್ಲ.

(<http://www.truthofgujarat.com ವಾರ್ತಾಭಾರತಿ, ಜುಲೈ 27, 2014)

ಹೊಗಳಿಕೆ ತೆಗಳಿಕೆ



ಗೆಳೆಯ ಇಸ್ಮತ್ ಪಜೀರ್ ಅವರ ಅನಂತಮೂರ್ತಿಯವರ 'ಸಂಸ್ಕಾರ'ದ ಕುರಿತ ವಿಮರ್ಶೆ ಚೆನ್ನಾಗಿತ್ತು. ಅನಂತಮೂರ್ತಿಯವರು ಇದನ್ನು ಆ ಕಾಲದಲ್ಲಿ ಬರೆದು ಬಚಾವಾದರೇ ವಿನಹ ಈ ಕಾಲದಲ್ಲಿ ಬರೆದು ಗೆಲ್ಲುವುದು ಕಷ್ಟಸಾಧ್ಯ ಎಂಬುದು ನನ್ನ ಭಾವನೆ. ಯಾಕೆಂದರೆ ಅಂದಿನ ಜನರು ತಮ್ಮನ್ನು ತಾವು ಸ್ವವಿಮರ್ಶೆಗೊಳಪಡಲು ಹಿಂದೇಟು ಹಾಕುತ್ತಿರಲಿಲ್ಲ. ನಿಜಕ್ಕೂ ಅಸಂಬದ್ಧ ವಿಚಾರಗಳಿದ್ದರೆ ಅದರ ವಿರುದ್ಧ ಧ್ವನಿಯೆತ್ತುತ್ತಿದ್ದರೇ ವಿನಃ ಇವತ್ತಿನಂತೆ ಎತ್ತಿಕಟ್ಟಲ್ಪಟ್ಟ ಜನರಿಂದ ದೊಂಬಿ ಏಳಿಸುತ್ತಿದ್ದ, ಪ್ರಚೋದಿಸುತ್ತಿದ್ದ ಸನ್ನಿವೇಶಗಳು ಆವತ್ತು ಕಡಿಮೆಯಿತ್ತು.



ಅಸಹನೆ, ಜಿಗುಟುತನ ಇಂದು ಹತ್ತುಪಟ್ಟು ಹೆಚ್ಚು

ಉದಾಹರಣೆಗೆ ಆವತ್ತಿನ ಅತ್ಯಂತ ಜನಪ್ರಿಯ ಚಿತ್ರ 'ಭೂತಯ್ಯನ ಮಗ ಅಯ್ಯು'ವಿನಲ್ಲಿ ಖಳನಾಯಕ ಬ್ರಾಹ್ಮಣ ಭೂತಯ್ಯನನ್ನು ಕಲ್ಲೆದೆಯ ರಕ್ಕಸನಂತೆ ಚಿತ್ರಿಸಲಾಗಿದೆ. ಇದನ್ನು ಬರೆದವರು ಬೇರೆ ಯಾರೂ ಅಲ್ಲ, ಗೊರೂರು ರಾಮಸ್ವಾಮಿ ಅಯ್ಯಂಗಾರರೆಂಬ ಬ್ರಾಹ್ಮಣರೆ. 'ಚೋಮನ ದುಡಿ'ಯನ್ನು ಬರೆದವರು ಮತ್ತು ಚೋಮನಾಗಿ ನಟಿಸಿದವರು ಇಬ್ಬರೂ ಬ್ರಾಹ್ಮಣರೇ (ಕಾರಂತರು ಹಾಗು ವಾಸುದೇವ ರಾವ್). ಬೇಡರ ಕಣ್ಣಪ್ಪ, ಭಕ್ತ ಕನಕದಾಸ ಮೊದಲಾದ ಚಿತ್ರಗಳಲ್ಲಿ ಬ್ರಾಹ್ಮಣ ಅರ್ಚಕರನ್ನು ಜೋಕರ್‌ಗಳಂತೆ, ವ್ರತನಿಯಮಗಳನ್ನು ತಪ್ಪಿದವರಂತೆ ಚಿತ್ರಿಸಲಾಗಿತ್ತು. ಪುಟ್ಟಣ್ಣ ಕಣಗಾಲ್, ಪ್ರೇಮಾ ಕಾರಂತ್ ಮೊದಲಾದ ಬ್ರಾಹ್ಮಣರ ಮೂಲಕ ದೇವದಾಸಿ ಪದ್ಧತಿ, ಬಾಲವಿಧವೆಯರ ಸ್ಥಿತಿಗತಿ, ಜಾತಿಪದ್ಧತಿ ಮೊದಲಾದ ಅನಿಷ್ಟಗಳನ್ನು ವಿಮರ್ಶಿಸುವ ಅನೇಕ ಚಲನಚಿತ್ರಗಳು ಬಂದಿದ್ದವು. ಇಂತಹ ಚಿತ್ರಗಳ ವಿರುದ್ಧ ಆವತ್ತು ಯಾವುದೇ ತಕರಾರುಗಳು ಎದ್ದಿರಲಿಲ್ಲ. ಬಹುತೇಕ ಎಲ್ಲರೂ ಸಕಾರಾತ್ಮಕವಾಗಿಯೇ ಇದಕ್ಕೆಲ್ಲ ಸ್ಪಂದಿಸುತ್ತಿದ್ದ ಕಾಲವದು. ಆದರೆ ಇಂದಿನ ಅಸಹನೆಯ ಜಿಗುಟು ವಾತಾವರಣದಲ್ಲಿ ಇಂತಹ ಸ್ಪಂದನೆಯನ್ನು ನಿರೀಕ್ಷಿಸುವುದು ಸುಲಭವಲ್ಲ.

ರಾಷ್ಟ್ರಕವಿ ಕುವೆಂಪುರವರು ಯಾವತ್ತೋ ರಚಿಸಿದ್ದ 'ಜಯ ಭಾರತ ಜನನಿಯ ತನುಜಾತೆ' ಗೀತೆಯಲ್ಲಿ ನಿತ್ಯ ನಾರಕಿ ಮಧ್ವರ ಹೆಸರು ಸೇರಿಸಲು ದೊಡ್ಡ ಪ್ರಹಸನವನ್ನೆ ನಡೆಸಲಾಗಿತ್ತು, ಜಾತೀಯತೆಯನ್ನು ಮೀರಿನಿಂತು ಎಲ್ಲ ಮಾನವರೂ ಒಂದೇ ಎಂದು ಸಾರಿದ ಬಸವಣ್ಣನವರ ಕುರಿತು ಬಂಜಗೆರೆಯವರು ಬರೆದ 'ಆನು ದೇವಾ ಹೊರಗಿನವನು' ಕೃತಿಯನ್ನು ನಿಷೇಧಕ್ಕೊಳಪಡಿಸಲಾಯ್ತು, ಜಯಶ್ರೀದೇವಿಯವರ ನಿರ್ಮಾಣದ, ಅರ್ಜುನ್ ಸರ್ಜಾ ಅಭಿನಯದ 'ಧರ್ಮಸ್ಥಳ ಮಂಜುನಾಥ' ಚಿತ್ರದ ವಿರುದ್ಧ ಯಾರನ್ನೋ ಛೂ ಬಿಟ್ಟ "ಧರ್ಮಸ್ಥಳ ಅಭಿಮಾನಿ"ಗಳು ತಕರಾರು ತೆಗೆದಿದ್ದರು. ರವಿಚಂದ್ರನ್‌ರ 'ಬ್ರಾಹ್ಮಣ' ಎನ್ನುವ ಸಿನಿಮಾ ಟೈಟಲ್ ನಂತರ 'ರವಿಶಾಸ್ತ್ರಿ'ಯಾಗಿ ಬದಲಾಯಿತು. (ಮೂಲ ತಮಿಳು ಚಿತ್ರ ಚಾಲ್ತಿಯಲ್ಲಿರುವ ಕಾರಣ ಕಥೆಗೆ ತಡೆಯಾಗಲಿಲ್ಲ) 'ಮೊಹಬ್ಬತೇಂ' ಚಿತ್ರದಲ್ಲಿ ಶಾರೂಖ್ ಖಾನನ ಶೂ ವಿವಾದ ಬಂದಿತ್ತು ಇತ್ಯಾದಿ ಇತ್ಯಾದಿ?

25 ವರ್ಷಗಳ ಹಿಂದೆ ಜನರಲ್ಲಿದ್ದ ಮನೋಭಾವನೆಗೂ



ಇಂದಿನವರ ಪ್ರತಿಕ್ರಿಯೆಗಳಿಗೂ ಬಹಳ ವ್ಯತ್ಯಾಸಗಳಿವೆ. 25 ವರ್ಷಗಳ ಹಿಂದೆ ಕುಂದಾಪುರದಲ್ಲಿ ಭಾಸ್ಕರ್ ಕೊಠಾರಿ ಹಾಗು ಮುನಾವರ್ ಎಂಬ ಅನ್ಯಧರ್ಮೀಯ ಜೋಡಿಗೆ ಮದುವೆ ಮಾಡಿಕೊಡಲು ಊರಿಗೆ ಊರೆ ಎದ್ದು ನಿಂತಿದ್ದರೆ ಈಗ ಅಲ್ಲಿ ಅಣ್ಣತಂಗಿ ಸಹ ಜತೆಯಾಗಿ ಹೊರಗೆ ಹೋಗಲು ಅಂಜಿಕೊಳ್ಳುತ್ತಾರೆ. ಆವತ್ತು 'ಪರ್ವ', 'ಧರ್ಮಶ್ರೀ', 'ತಬ್ಬಲಿ ನೀನಾದೆ ಮಗನೆ' ಬರೆದ ಸಾಹಿತಿ ಭೈರಪ್ಪ ಕೆಲವೇ ಕೆಲ ಸಾಹಿತ್ಯಾಸಕ್ತರಿಗೆ ಗೊತ್ತಿದ್ದರೆ ಇಂದು 'ಆವರಣ', 'ಕವಲು' ಬರೆದಂತಹ ಹಿಂದೂವಾದಿ ಭೈರಪ್ಪ (ಅವರ ಪುಸ್ತಕ ಓದದಿದ್ದರೂ ಆತ ಸಾಬರ ವಿರುದ್ಧ ಬರೆದಿದ್ದಾನೆಂಬ ಸುದ್ದಿಗೆ ಥ್ರಿಲ್ ಆಗಿ) ಹಿಂದೂತ್ವವಾದಿಗಳೆಲ್ಲರ ಹೀರೋ ಆಗಿಬಿಟ್ಟರು. ಕೋಟ ವಾಸುದೇವ ಕಾರಂತರಂತಹ ವ್ಯಕ್ತಿಗಳು ಈಗಿನ ಚಿದಾನಂದಮೂರ್ತಿ, ಕೆಎಸ್ ನಾರಾಯಣಾಚಾರ್ಯರಂತವರ ಮಾತುಗಳನ್ನ (ಸನಾತನವಾದದ ಶ್ರೇಷ್ಠತೆ, ಪ್ರಗತಿಪರರ ಟೀಕೆ) ಆವತ್ತೇ ಬರೆದಿದ್ದರೂ ಪೂರ್ವಾಗ್ರಹಪೀಡಿತವಾದ ಆ ಹಳಸಲು ವಿಚಾರ ಆವತ್ತು ಯಾರಿಗೂ ಬೇಕಿರಲಿಲ್ಲ. ಅಂದು ಜಾತೀಯತೆಯೇ ಮೊದಲಾದ ಸಾಮಾಜಿಕ ಅನಿಷ್ಟಗಳು ತಮ್ಮ ಹಿಂದಿನವರ ಸಾಮಾಜಿಕ ಸ್ವಾರ್ಥದ ಫಲ ಎಂಬುದ[ನ್ನು] ಒಪ್ಪಿಕೊಂಡು ಜನ ತಮ್ಮನ್ನು ತಾವೇ ಸ್ವವಿಮರ್ಶೆ[...] ಗಿಳಿಯುತ್ತಿದ್ದರೆ ಇಂದಿನ ಕೆಲವರು ಆ ಅನಿಷ್ಟಗಳನ್ನು ಈ[...] ನಮ್ಮೊಂದಿಗಿಲ್ಲದ ಬ್ರಿಟಿಷರ, ಮೊಗಲರ ಮೇಲೆ ಹ[...] ನುಣುಚಿಕೊಳ್ಳುವ ಹವಣಿಕೆಯಲ್ಲಿದ್ದಾರೆ. ಇಂತವ[...] ಹಿಂದಿರುವ ಮೀಡಿಯಾದವರ ಬೆಂಬಲ, ಪ್ರಚೋದ[...] ತಿರುಚುವಿಕೆ ಇತ್ಯಾದಿಗಳಿಂದ ಇನ್ನೊಂದು "ಸಂಸ್ಕಾರ"[...] ರಚನೆ ಇವತ್ತಿನ ದಿನದಲ್ಲಿ ಸುಲಭದ ಮಾತಲ್ಲ.

-ಶಶಿ ಪುತ್ತೂರು, ದ[...]

ಚೆಡ್ಡಿಗಳ 'ರೇಪ್ ಪಾಲಿಟಿಕ್ಸ್'

ಈಗತಾನೆ 'ರೇಪ್ ಪಾಲಿಟಿಕ್ಸ್' ವರದಿ ಓದಿ[...] ಇತ್ತೀಚೆಗೆ ಅತ್ಯಾಚಾರಗಳ ವಿರುದ್ಧ ಬಿಜೆಪಿಯ ಗದ್[...] ಕಂಡು ನನ್ನಲ್ಲಿ ಅಚ್ಚರಿ ಮತ್ತು ಅನುಮಾನಗಳು ಮೂಡಿದ್ದ[...] ಪತ್ರಿಕೆ ಅವರ ಹುನ್ನಾರವನ್ನು ಬಯಲಿಗೆಳೆದಿದೆ. ಇಂಗ್ಲಿ[ಷ್] ವಾರ ಪತ್ರಿಕೆಯೊಂದು ಈ ಬಗ್ಗೆ ಪ್ರಸ್ತಾಪಿಸಿತ್ತು, ಆದ[ರೆ] ಇದು ಎಲ್ಲ ಜನರಿಗೆ ತಿಳಿಯುವುದೆ? ಎಲ್ಲರಿಗ[ೂ] ತಿಳಿಯದಂತೆ ನೋಡಿಕೊಳ್ಳುವ ಮಾಧ್ಯಮಗಳು ನಮ[್ಮ] ನಡುವೆ ಇವೆ ಎಂಬುದೇ ಕೆಟ್ಟ ಬೆಳವಣಿಗೆ.

-ಕೆ.ವಿ.ಸುಬ್ರಹ್ಮಣ್ಯಮ್, ಎಸ್‌ಎಂಎಸ್ ಮೂ[...]

ಆಗಸ್ಟ್ 6, 2014ರ ಸಂಚಿಕೆಯಲ್ಲಿ ಪ್ರಕಟಗೊಂ[ಡ] 'ರೇಪ್ ಪಾಲಿಟಿಕ್ಸ್' ವರದಿಯು ಸತ್ಯಕ್ಕೆ ಹಿಡಿ[ದ] ಕನ್ನಡಿಯಾಗಿದೆ. ಕೇವಲ ಕರ್ನಾಟಕದಲ್ಲೇ ಅತ್ಯಾಚಾರಗ[ಳು] ನಡೆಯುತ್ತಿವೆ ಎಂಬಂತೆ ಎಲೆಕ್ಟ್ರಾನಿಕ್ ಮಾಧ್ಯಮಗ[ಳು] ಬಿಂಬಿಸುತ್ತಿವೆ. ಕರ್ನಾಟಕದ ಮುಖ್ಯಮಂ[ತ್ರಿ] ಸಿದ್ದರಾಮಯ್ಯನವರನ್ನು ಬಿಟ್ಟು ಬೇರೆ ಯಾರಾದರ[ೂ] ಮುಖ್ಯಮಂತ್ರಿ ಆಗಿದ್ದರೆ ಈ ಪರಿ 'ರೇಪ್ ಪಾಲಿಟಿಕ[್ಸ್]' ಮಾಡುತ್ತಿರಲಿಲ್ಲ.

ನರೇಂದ್ರ ಮೋದಿಯನ್ನು ಹೀರೋ ಮಾಡಿದವರ[ು] ಇವತ್ತು ಮೋದಿ ಮಾಡುವ ರಾಜಕೀಯ ಹೇಗ[ಿದೆ] ಎಂಬುದನ್ನು ಬಿಂಬಿಸಲಿ. ಅದನ್ನು ಬಿಟ್ಟು 'ರೇ[ಪ್] ಪಾಲಿಟಿಕ್ಸ್' ಮುಂದಾಗಿರುವುದು ಕರ್ನಾಟಕದ ದುರಂ[ತ].

ಜುಲೈ 30ರ ಸಂಚಿಕೆಯಲ್ಲಿ ಸಿನಿಮಾ ನಟಿ ನಯ[ನ] ಕೃಷ್ಣಳ ಮುಖವಾಡ ಬಯಲು ಮಾಡಿ, ಸಿನಿಮಾ ಜ[...]

ಸಿಲ್ವೆಸ್ಟರ್ ಸ್ಟಲ್ಲೋನ್ ಮತ್ತು ಫಿಟ್‌ನೆಸ್



ನಿಮ್ಮ ದೇಹದ ಕಡೆ ಗಮನವಿರಲಿ. ನೀವು ಜೀವಿಸಲು ದ ಒಂದೇ ಒಂದು ಜಾಗವದು'-ಎಂದು ಕ್ಯಾನ್ಸರಿಗೆ ಮಾದ ವಿಯೆನ್ನಾದ ತತ್ವಜ್ಞಾನಿ ಲುಡ್ವಿಗ್ ವಿಟ್ಗೆನ್‌ಸ್ಟೈನ್ ದ್ದಾನೆ. ದೈಹಿಕ ಅನಾರೋಗ್ಯದ ಜೊತೆಗೆ ಮಾನಸಿಕ ರೋಗ್ಯವೂ ಸೇರಿಕೊಂಡರೆ ಬದುಕು ಭೀಕರ ಎತ್ತದೆ. ಆಸ್ಪತ್ರೆಗಳ ಒಳಹೊಕ್ಕಾಗ ದೈಹಿಕವಾಗಿ, ಸಿಕವಾಗಿ ಮನುಷ್ಯ ಅನುಭವಿಸುವ ಯಾತನೆಯತ್ತ ಮು ಹರಿಯುತ್ತದೆ; ವೈದ್ಯ ಎನಿಸಿಕೊಂಡವನು ಎಂತಹ ಗಳ ನಡುವೆಯೂ ಆರೋಗ್ಯವಂತನಾಗಿರಬೇಕು; ಗಳ ಖಿನ್ನತೆ, ಜಿಗುಪ್ಸೆಗಳನ್ನು ಕಂಡು ವಿಚಲಿತನಾಗದೇ ನ ಬೆಳೆಸಿಕೊಳ್ಳಬೇಕು. ಉಳಿದ ರೋಗಿಯನ್ನು ಗುಣ ಸಲು ವೈದ್ಯನೊಬ್ಬನಿಗೆ ಇಂತಹ ಸ್ಥೈರ್ಯ ಅಗತ್ಯ. ರಿತು ಯೋಚಿಸುವಾಗ ಆರೋಗ್ಯದ ಬಗ್ಗೆ ಫಿಟ್‌ನೆಸ್ ಅಪಾರ ಕಾಳಜಿ ವಹಿಸುವ ಸಿಲ್ವೆಸ್ಟರ್ ಸ್ಟಲ್ಲೋನ್ ಮಾತುಗಳು ಕಾಡತೊಡಗುತ್ತವೆ. ಆರೋಗ್ಯವನ್ನು ಮವಾಗಿಟ್ಟುಕೊಳ್ಳುವುದರ ಕುರಿತು ಆತ ಬರೆದಿರುವ ಮ್ಮು ಸಾಲುಗಳು ಮಾರ್ಗದರ್ಶನ ನೀಡುತ್ತವೆ. ಆತ ೋಗ್ಯವನ್ನು ಕಾಪಾಡಿಕೊಳ್ಳಲು ನಿರಂತರ ಎಡೆಬಿಡದೆ ಮ ಮಾಡುತ್ತಾನೆ. ಈಗ ಅವನಿಗೆ ಅರವತ್ತೆಂಟು ವರ್ಷ.

ದೇಹದ ಕೊಬ್ಬನ್ನು ಶೇ.4ರಿಂದ ಶೇ.7ರ ನಡುವೆ ಟ್ಟುಕೊಂಡಿರುವ ಈತ ಈಗಲೂ ವಾರದಲ್ಲಿ ಮೂರು ತಲಾ ತೊಂಭತ್ತು ನಿಮಿಷಗಳ ಸೆಸನ್ ಲೆಕ್ಕದಲ್ಲಿ -ಟ್ ಮಾಡುತ್ತಾನೆ. ಆದಷ್ಟು ಹೈ ಪ್ರೋಟೀನ್ ಟ್ ಮಾಡುವ ಈತನ ಆಕರ್ಷಕ, ಬಲಿಷ್ಠ ಶರೀರ ವದ ಹಿಂದೆ ಸ್ಟಿರಾಯಿಡ್‌ನ ಪ್ರಭಾವವಿರುವುದಾಗಿ ರು ಅಪಪ್ರಚಾರ ಎಬ್ಬಿಸಿದ್ದರೂ ಸ್ಟಲ್ಲೋನ್ ಅದನ್ನು ವಾಗಿ ನಿರಾಕರಿಸುತ್ತಾನೆ. ಅವನು ಹೇಳುವಂತೆ "ನೀವು ನುವ ಆಹಾರ, ಮಾಡುವ ವ್ಯಾಯಾಮ ನಿಮ್ಮ ದೈಹಿಕ, ನಸಿಕ ಮತ್ತು ಆಧ್ಯಾತ್ಮಿಕತೆಯ ಮೇಲೆ ಅಪಾರವಾದ ಮ ಬೀರುತ್ತದೆ. ಇದರಿಂದ ಬಹುಕಾಲದವರೆಗೆ ಬಗ್ಗೆ ನಿಮಗೆ ಹೆಮ್ಮೆ ಎನ್ನಿಸುವುದರ ಜೊತೆಗೆ ದೇಹಮನಸ್ಸುಗಳ ಮೇಲೆ ಹಿಡಿತ ಹೊಂದಿರುತ್ತೀರಿ. ಮ ಆರೋಗ್ಯವಿರದಿದ್ದರೆ ಖ್ಯಾತಿ, ಶ್ರೀಮಂತಿಕೆಗಳಿದ್ದೂ ಪ್ರಯೋಜನವಿಲ್ಲ. ನನ್ನ ಬದುಕಿನಲ್ಲಿ ಎದುರಾದ ಜಟಿಲ ಸವಾಲು, ಸಮಸ್ಯೆಗಳನ್ನು ಎದುರಿಸುವಲ್ಲಿ ಆರೋಗ್ಯ ಮತ್ತು ಫಿಟ್‌ನೆಸ್‌ನ ಪಾತ್ರ ಬಹು ದ್ದು."


ನ್ಯೂಯಾರ್ಕಿನಲ್ಲಿ ಜನಿಸಿದ ಸಿಲ್ವೆಸ್ಟರ್ ಸ್ಟಲ್ಲೋನ್ ದಲ್ಲಿ ನೆಮ್ಮದಿ ಕಾಣದವನು; ಅಪ್ಪ ಅಮ್ಮ ಜಗಳವಾಡಿ ಕೊಂಡು ವಿಚ್ಛೇದನ ಪಡೆದು ಬೇರೆಬೇರೆಯಾಗುತ್ತಾರೆ. ಆನಂತರ ಅಮ್ಮ, ಮತ್ತವಳ ಎರಡನೆಯ ಗಂಡನೊಡನೆ ಜೀವಿಸಬೇಕಾದ ಸ್ಥಿತಿ ಎದುರಾಗಿ ಸ್ಟಲ್ಲೋನ್ ಮಾನಸಿಕವಾಗಿ ಜರ್ಜರಿತನಾಗಿ ಶಾಲಾಕಾಲೇಜು ದಿನಗಳನ್ನು ಹೇಗೋ ಮುಗಿಸುತ್ತಾನೆ. ಪದವಿ ಮುಗಿಯುತ್ತಿದ್ದಂತೆಯೇ ಮಿಯಾಮಿ ವಿಶ್ವವಿದ್ಯಾಲಯದಲ್ಲಿ ಡ್ರೆಮೆಟಿಕ್ ಆರ್ಟ್ಸ್ ಬಗ್ಗೆ ಅಭ್ಯಸಿ ಸುತ್ತಾನೆ. ಈ ಮಧ್ಯೆ ನಟನಾಗುವ ಹುಚ್ಚು ಹಿಡಿಸಿಕೊಂಡು ನ್ಯೂಯಾರ್ಕ್ ಸಿಟಿಯುದ್ದಗಳ ಸುತ್ತುತ್ತಿರುತ್ತಾನೆ. ಬದುಕಿನ ದ್ವಂದ್ವ, ಜಿಜ್ಞಾಸೆ, ಏರಿಳಿತಗಳ ಬಗ್ಗೆ ಕನಿಷ್ಠ ಪ್ರಜ್ಞೆ ಇದ್ದ ಸ್ಟಲ್ಲೋನ್ 1970ರಲ್ಲಿ 'ಎ ಪಾರ್ಟಿ ಅಟ್ ಕಿಟ್ಟಿ ಅಂಡ್ ಸ್ಟಡ್ಸ್' ಎಂಬ ವಯಸ್ಕರ ಚಿತ್ರದಲ್ಲಿ ನಟಿಸುತ್ತಾನೆ. ಅಲ್ಲಿಂದಾಚೆಗೆ ಒಂದಿಷ್ಟು ಬೇರೆಬೇರೆ ಸಿನಿಮಾಗಳ ಬೇರೆ ಬೇರೆ ಬಗೆಯ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಾನೆ. ವೂಡಿ ಅಲೆನ್ನನ 'ಬನಾನಾಸ್' ಹಾಗೂ ಆ ವರ್ಷವೇ 'ಕ್ಲೂಟ್' ಎಂಬ ಸಿನಿಮಾಗಳಲ್ಲಿ ಅಭಿನಯಿಸಿದ ಈತ ಮುಂದಿನ ನಾಲ್ಕು ದಶಕಗಳಲ್ಲಿ ವಿಶ್ವಮಾನ್ಯ ನಟನಾದ; 'ರಾಕಿ' ಮತ್ತು 'ಜಾನ್ ರಾಂಬೋ' ಮುಂತಾದ ಚಿತ್ರಗಳಲ್ಲಿ ಅಭಿನಯಿಸಿ ಜಗತ್ತಿನ ಅದ್ಭುತ ಆಕ್ಷನ್ ಹೀರೋ ಎನ್ನಿಸಿಕೊಂಡದ್ದು ಈಗ ಚರಿತ್ರೆಯ ಭಾಗ.


ಹಾಗೆಯೇ ಅಭಿನಯವನ್ನು ಕಲೆಯಾಗಿ, ಆರೋಗ್ಯ ದೆದುರಿಗೆ ಏನೇನೂ ಅಲ್ಲದ ಸಾಧಾರಣ ಸಂಗತಿಯೆಂಬಂತೆ ಭಾವಿಸಿ ಬದುಕುತ್ತಿರುವವನೀತ. 'ನೀನು ತುಂಬಾ ಚೆನ್ನಾಗಿ ನಟಿಸುತ್ತೀ' ಎಂದಾಗ ಅಷ್ಟಾಗಿ ಹಿಗ್ಗದ ಸಿಲ್ವೆಸ್ಟರ್ ಸ್ಟಲ್ಲೋನ್ 'ನೀನೊಬ್ಬ ಆರೋಗ್ಯವಂತ ಮನುಷ್ಯ' ಅಂದಾಗ ಮತ್ತೊಮ್ಮೆ ತನ್ನ ದೇಹದ ಮುತುವರ್ಜಿಯೆಡೆಗೆ ಧ್ಯಾನಿಸುತ್ತಾನೆ. ಯಾಕೆಂದರೆ ಇಂದಿಗೂ ಈತನಿಗೆ ತನ್ನ ಫಿಟ್‌ನೆಸ್ ಬಗೆಗೆ ಇನ್ನಿಲ್ಲದ ಕಾಳಜಿ; ಬದುಕಿನ ಲವಲವಿಕೆಯನ್ನು ಆರೋಗ್ಯದ ಮುಖೇನ ಕಂಡುಕೊಳ್ಳುವ ಇಂಗಿತ. ಈತನ ಜೀವನ ತಾನು ಮಾಡುವ ಪಾತ್ರಗಳಿಗೆ ಶರೀರವನ್ನು ಹದಗೊಳಿಸುವುದಕ್ಕೆ, ಆ ಮೂಲಕ ತನ್ನ ಪರ್ಫಾರ್ಮೆನ್ಸ್ ಹಾಗೂ ಡೆಡಿಕೇಶನ್ ಮೂಲಕ ವೃತ್ತಿ ಬದುಕನ್ನು ಮತ್ತಷ್ಟು ಚಂದಗೊಳಿಸಿಕೊಳ್ಳುವುದಕ್ಕೆ. ಈ ನಿಟ್ಟಿನಲ್ಲಿ "ಇತ್ತೀಚಿನ ವರ್ಷಗಳಲ್ಲಿ ನನ್ನ ಶರೀರವನ್ನು ವಿವಿಧ ಪಾತ್ರಗಳ ಜಾಯಮಾನಕ್ಕೆ ಒಗ್ಗಿಸಿಕೊಳ್ಳಲು ಯತ್ನಿಸಿದೆ. ಕಠಿಣ ಶ್ರಮವನ್ನೂ ಸ್ವೀಕರಿಸಿದೆ. ಇಷ್ಟಕ್ಕೂ ನನ್ನ ಬದುಕಿಗೆ ದಾರಿಸೂಚಕ ಎನ್ನುವ ಯಾರೊಬ್ಬ ವ್ಯಕ್ತಿಯೂ ಇಲ್ಲ. 'ರಾಕಿ' ಪಾತ್ರದ ಹೊಟ್ಟೆಭಾಗದ ಸ್ನಾಯುಗಳಾಗಲೀ, 'ರಾಂಬೋ' ಪಾತ್ರದ ಬೆನ್ನಿನ ಸ್ನಾಯುಗಳಾಗಲೀ, 'ಕ್ಲಿಫ್ ಹ್ಯಾಂಗರ್' ಪಾತ್ರದ ಕಾಲುಗಳ ಸ್ನಾಯುಗಳಾಗಲೀ- ಇವನ್ನು ಕಠಿಣ ವ್ಯಾಯಾಮದ ಮೂಲಕ ಹೇಗೆ ರೂಪಿಸಿಕೊಳ್ಳಬೇಕು? ಹೇಗೆ ಉತ್ತಮ ಶೇಪ್ ತಂದುಕೊಳ್ಳಬೇಕು? ಎಂಬುದರ ಕುರಿತು ನನಗೆ ಯಾರೂ ಮಾರ್ಗದರ್ಶನ ನೀಡಲಿಲ್ಲ. ಅಥವಾ ನನ್ನ 'ಕಾಪ್‌ಲ್ಯಾಂಡ್' ಚಿತ್ರಕ್ಕಾಗಿ ನನ್ನ ತೂಕದಲ್ಲಿ ನಲವತ್ತು ಪೌಂಡ್ ಹೆಚ್ಚಿಸಿಕೊಳ್ಳುವ, ಇಲ್ಲವೇ ಇಳಿಸಿಕೊಳ್ಳುವ ಬಗ್ಗೆಯೂ ಯಾರೊಬ್ಬರೂ ನನಗೆ ಗೈಡ್ ಮಾಡಲಿಲ್ಲ. ಎಲ್ಲವೂ ನನ್ನ ಪ್ರಯೋಗ ಮತ್ತು ಪರಿಶ್ರಮಗಳಿಂದ ಪಡೆದಂಥವು" ಎಂದು ಹೇಳುವ ಸ್ಟಲ್ಲೋನ್ ಒಂದೊಂದು ಪಾತ್ರಕ್ಕೂ ದೇಹ ಕುರಿತಂತೆ ಮುತುವರ್ಜಿ ವಹಿಸುವ ಜಾಯಮಾನದವನು. ಕಷ್ಟಕರ ಪಾತ್ರಗಳ, ಕಷ್ಟಕರ ಸನ್ನಿವೇಶಗಳಲ್ಲಿ ನಟಿಸಬೇಕಾದ ಸಂದರ್ಭ ಎದುರಾದಾಗ ಯಾವುದೇ ಡ್ಯೂಪ್ ಬಳಸದೆ ತಾನೇ ಸ್ವತಃ ರಿಸ್ಕ್ ತೆಗೆದುಕೊಂಡು ನಟಿಸಲು ಬಯಸುವ ಈತ ಅನೇಕ ಬಾರಿ ಅಪಾಯಗಳಿಗೆ ತುತ್ತಾದ ಪ್ರಸಂಗಗಳೂ ಇವೆ. ಅದೆಷ್ಟೋ ಗಾಯಗಳನ್ನು ಮಾಡಿಕೊಂಡು ನೋವನುಭವಿಸಿದ್ದೂ ಇದೆ. 'ದಿ ಎಕ್ಸ್‌ಪೆಂಡಬಲ್ಸ್' ಚಿತ್ರದ ಚಿತ್ರೀಕರಣದ ವೇಳೆ ಸಹನಟ ಸ್ಟೀವ್ ಆಸ್ಟಿನ್ ಜೊತೆಗಿನ ಸಾಹಸದೃಶ್ಯದಲ್ಲಿ ಕತ್ತಿಗೆ ಪೆಟ್ಟು ಮಾಡಿಕೊಂಡಿದ್ದಿರಬಹುದು, 'ಎಸ್ಕೇಪ್ ಟು ವಿಕ್ಟರಿ' ಚಿತ್ರದ ಸಂದರ್ಭದಲ್ಲಿ ಬೆರಳು ಮುರಿದುಕೊಂಡಿದ್ದಿರಬಹುದು- ಇಂಥವೆಲ್ಲ ಸಿಲ್ವೆಸ್ಟರ್ ಸ್ಟಲ್ಲೋನ್ ಚಿತ್ರಗಳ ಚಿತ್ರೀಕರಣದ ವೇಳೆ ಸರ್ವೇಸಾಮಾನ್ಯ ವಿಷಯಗಳು.

ಸಿನಿಮಾಗಳಲ್ಲಿ ಜನಪ್ರಿಯನಾಗುತ್ತಿದ್ದಂತೆಯೇ ಧಾರ್ಮಿಕತೆಯ ಬಗ್ಗೆ ಅಷ್ಟಾಗಿ ತಲೆಕೆಡಿಸಿಕೊಳ್ಳದೆಯೇ ಹೋದ ಸ್ಟಲ್ಲೋನ್ ಚರ್ಚಿಗೆ ಹೋಗುವುದನ್ನು ನಿಲ್ಲಿಸುತ್ತಾನೆ. ಕ್ರಮೇಣ 1996ರ ನಂತರ ಮತ್ತೆ ನಿಷ್ಠಾವಂತ ಕ್ಯಾಥೊಲಿಕ್ ವ್ಯಕ್ತಿಯಾಗಿ ಪರಿವರ್ತಿತನಾಗುತ್ತಾನೆ. ಇಷ್ಟಕ್ಕೂ ಆತನ 'ರಾಕಿ-2' ಚಿತ್ರದಲ್ಲಿನ ಚರ್ಚಿನಲ್ಲಿ ಮದುವೆಯಾಗುವ, ಪಾದ್ರಿಯ ಮೂಲಕ ನವದಂಪತಿಗಳು ಆಶೀರ್ವಾದ ಪಡೆಯುವ ದೃಶ್ಯಗಳು, ಈತ ಇಡೀ ಚಿತ್ರದುದ್ದಕ್ಕೂ ತನ್ನ ಕೊರಳಿನಲ್ಲಿ ಕ್ರಾಸ್ ಧರಿಸುವುದು, ಯುದ್ಧ ಗೆದ್ದ ಕೂಡಲೇ 'ಥ್ಯಾಂಕ್ ಯೂ ಟು ಗಾಡ್' ಎನ್ನುವುದನ್ನು ಸೂಕ್ಷ್ಮವಾಗಿ ಗಮನಿಸಬಹುದು. ಇಷ್ಟಕ್ಕೂ "ನಾನೊಬ್ಬ ನಾಸ್ತಿಕನಲ್ಲ, ನಾನೊಬ್ಬ ಬ್ಯಾಪ್‌ಟೈಸ್ಡ್ ಕ್ಯಾಥೊಲಿಕ್. ಆದರೆ ಚರ್ಚಿಗೆ ಹೋಗುತ್ತಿರಲಿಲ್ಲವಷ್ಟೇ. ಚರ್ಚಿಗೆ ಹೋಗುವುದರ ಬಗ್ಗೆ ನನಗೆ ಯಾವುದೇ ವಿರೋಧವಿಲ್ಲ. ನನ್ನ ಪ್ರಕಾರ ಅಲ್ಲಿ ಜ್ಞಾನಕ್ಕೆ ಎಡೆಮಾಡಿಕೊಡುವ ವಾತಾವರಣವಿದೆ. ಅರ್ಥಪೂರ್ಣ ಬದುಕು ನಡೆಸಲು ಒಂದಿಷ್ಟು ರೀತಿರಿವಾಜುಗಳೂ ಇವೆ" ಎನ್ನುವ ಸ್ಟಲ್ಲೋನ್ ನಂತರದ ದಿನಗಳಲ್ಲಿ ನಿಯಮಿತವಾಗಿ ಚರ್ಚಿಗೆ ಹೋಗುವುದನ್ನು ರೂಢಿಸಿಕೊಂಡಾತ.

ತನ್ನ 'ರಾಂಬೋ ಸೀರೀಸ್' ಮೂಲಕ ಅಮೆರಿಕಾ ಪರ ನಿಲ್ಲುವ ಸಿಲ್ವೆಸ್ಟರ್ ಸ್ಟಲ್ಲೋನ್ ಕಮ್ಯುನಿಸಂ ವಿರುದ್ಧ ಹೋರಾಡುತ್ತಾನೆ. ತಾಯ್ನೆಲದ ಬಗ್ಗೆ ಅಪಾರ ಅಭಿಮಾನ, ಭಕ್ತಿ ಗೌರವಗಳನ್ನುಳ್ಳ ಪಾತ್ರಗಳಲ್ಲಿ ಮಿಂಚಿದ ಈತ ಸರ್ವಾಧಿಕಾರಿ ಧೋರಣೆಯ ಕಮ್ಯುನಿಸ್ಟ್ ಮನಸ್ಥಿತಿಗಳ ವಿರುದ್ಧ ಅಂತಹ ಅಜೆಂಡಾಗಳ ವಿರುದ್ಧ ಗಟ್ಟಿಯಾಗಿ ಧ್ವನಿ ಎತ್ತುತ್ತಾನೆ. ಇಷ್ಟು ಮಾತ್ರವಲ್ಲದೆ ಬಿಲ್ ಕ್ಲಿಂಟನ್ ಒಳಗೊಂಡಂತೆ ಒಂದಿಷ್ಟು ರಾಜಕಾರಣಿಗಳಿಗೆ ಕ್ಯಾಂಪೇನ್ ಫಂಡನ್ನು ಕೊಡುಗೆಯಾಗಿ ನೀಡುತ್ತಾನೆ. ಲಿಬರಲ್ಲಾಗಿ ಯೋಚಿಸುವ, ಕಾರ್ಯೋನ್ಮುಖನಾಗುವ ಮನೋಭಾವ ಹೊಂದಿರುವ ಈತನ ಇನ್ನೊಂದು ವಿಶೇಷ ಸಂಗತಿಯೆಂದರೆ ಅಮೆರಿಕನ್ ಆರ್ಮಿಯ ಲಾಂಛನ ಕಂಡರೆ ಎಲ್ಲಿಲ್ಲದ ಪ್ರೀತಿ, ಗೌರವ, ಸ್ಫೂರ್ತಿ.

ಮೂರು ಹೆಂಡತಿಯರು, ಐದು ಮಕ್ಕಳನ್ನು ಕಂಡ ಸಿಲ್ವೆಸ್ಟರ್ ಸ್ಟಲ್ಲೋನ್ ಚಿಕ್ಕಂದಿನಲ್ಲೇ ಸಾಹಸದತ್ತ, ರಿಸ್ಕ್ ತೆಗೆದುಕೊಳ್ಳುವತ್ತ ಕ್ರೇಜ್ ಇದ್ದವನು. ತಾನೊಬ್ಬ ಸೂಪರ್ ಹೀರೋ ಆಗಬೇಕೆಂದು ಕನಸು ಕಾಣುತ್ತಿದ್ದ, ತನ್ನ ಶಾಲಾದಿನಗಳಲ್ಲಿಯೇ ಸೂಪರ್ ಹೀರೋ ಕಾಸ್ಟ್ಯೂಮ್ ಖರೀದಿಸಿ, ಧರಿಸಿ, ಬಿಚ್ಚಿದ ಛತ್ರಿ ಹಿಡಿದು ಮನೆಯ ಬೆಡ್‌ರೂಮಿನ ಕಿಟಕಿಯಿಂದ ಹಾರಿ ನೆಲಕ್ಕೆ ಬಿದ್ದು ಮೂಳೆ ಮುರಿದುಕೊಂಡಿದ್ದ ಎಂದರೆ ನಿಮಗೆ ಆಶ್ಚರ್ಯವಾಗಬಹುದು. ಅದೇ ಜೋಶ್‌ನಲ್ಲಿ ಒಂದಿಷ್ಟು ಆಟೋಮೊಬೈಲ್ ಬಿಡಿಭಾಗಗಳನ್ನು ಖರೀದಿಸಿ ತಂದು ಅವಕ್ಕೆ ಸಿಮೆಂಟು ಇಟ್ಟಿಗೆಗಳನ್ನು ಕಟ್ಟಿ, ಕಂಬಕ್ಕೆ ಲಗತ್ತಿಸಿ ಹರ್ಟಿಂಗ್ ಬಾಂಬ್ಸ್ ನಿರ್ಮಿಸಿ ವ್ಯಾಯಾಮ ಮಾಡುತ್ತಿದ್ದ.





ಆರೋಗ್ಯ ಫಿಟ್‌ನೆಸ್, ನ್ಯೂಟ್ರಿಷನ್ನಿಗೆ ಸಂಬಂಧಿಸಿದ 'ಸ್ಲೈ ಮೂವ್ಸ್: ಮೈ ಪ್ರೂವೆನ್ ಪ್ರೋಗ್ರಾಮ್ ಟು ಲೂಸ್ ವೇಯ್ಟ್, ಬಿಲ್ಡ್ ಸ್ಟ್ರೆಂತ್ ಗೇಯ್ನ್ ವಿಲ್‌ಪವರ್ ಅಂಡ್ ಲೈವ್ ಯುವರ್ ಡ್ರೀಮ್' ಎಂಬ ಉಪಯುಕ್ತ ಪುಸ್ತಕವನ್ನೂ ಬರೆದಿದ್ದಾನೆ. ಈ ಪುಸ್ತಕದ ಮೊದಮೊದಲಿಗೆ ಸಿಲ್ವೆಸ್ಟರ್ ಸ್ಟಲ್ಲೋನ್‌ನ ಫಿಟ್‌ನೆಸ್ ಹಿಂದಿನ ರಹಸ್ಯ, ಆ ದೇಹಸ್ವಾಸ್ಥ್ಯದ ಹಿಂದಿರುವ ಪರಿಶ್ರಮ, ಆತ ಮಾಡುವಂತಹ ವ್ಯಾಯಾಮದ ವಿವಿಧ ಬಗೆಗಳು, ಕೊಬ್ಬು ಬೊಜ್ಜು ಬಾರದಂತೆ ಆತ ಅನುಸರಿಸುವ ಮಾರ್ಗಗಳು ಅಡಕಗೊಂಡಿವೆ. ಇನ್ನು ನಂತರದ ಪುಟಗಳಲ್ಲಿ ಒಬ್ಬ ಆರೋಗ್ಯವಂತ ವ್ಯಕ್ತಿಗಿರಬೇಕಾದ ಆಹಾರಪಾಲನೆ, ಆಹಾರ ಸೇವನೆಯ ವಿಷಯದಲ್ಲಿ ಬದುಕಿನುದ್ದಕ್ಕೂ ಉಪಯುಕ್ತವಾಗಬಲ್ಲ ಮಾರ್ಗದರ್ಶನ, ನ್ಯೂಟ್ರಿಷನ್ ಗೈಡ್, ಹೊಸದಾಗಿ ಜಿಮ್ ಮಾಡಬಯಸುವವರಿಗೆ ಗೈಡೆನ್ಸ್, ಮನಸನ್ನು ನೆಮ್ಮದಿಯಾಗಿ ಇಟ್ಟುಕೊಳ್ಳುವುದು ಹೇಗೆ ಎಂಬುದರ ಬಗ್ಗೆ ಸಲಹೆ, ಗುರಿಯನ್ನು ಮುಟ್ಟಲು ಅನುಸರಿಸಬೇಕಾಗ ತಾಳ್ಮೆ, ತಯಾರಿ, ಕಾರ್ಯತಂತ್ರಗಳ ಬಗೆಗಿನ ಮಾಹಿತಿ- ಇವೆಲ್ಲವೂ ಈ ಕೃತಿಯಲ್ಲಿ ಲಭ್ಯ.

ಅಭಿನಯದ ಜೊತೆಗೆ, ನಿರ್ದೇಶನ, ಬರವಣಿಗೆಯಲ್ಲೂ ಕೈಯಾಡಿಸಿ ಗೆದ್ದು ಅನೇಕ ಚಿತ್ರಗಳಿಗೆ ಸ್ಕ್ರಿಪ್ಟ್ ಬರೆದುದಲ್ಲದೆ 'ರಾಕಿ', 'ದಿ ಎಕ್ಸ್‌ಪೆಂಡಬಲ್ಸ್', 'ಫಸ್ಟ್ ಬ್ಲಡ್', 'ರಾಂಬೊ', 'ಡೆಮಾಲಿಷನ್ ಮ್ಯಾನ್', 'ರಾಕಿ ಬಲ್ಬೋವಾ', 'ಓವರ್ ದಿ ಟಾಪ್', 'ಕಾಪ್‌ಲ್ಯಾಂಡ್', 'ಎಸ್ಕೇಪ್ ಪ್ಲಾನ್', 'ಕೋಬ್ರಾ' ತರಹದ ಅನೇಕ ಅದ್ಭುತ ಚಿತ್ರಗಳನ್ನು ನೀಡುವ ಮೂಲಕ ಆಕ್ಷನ್ ಚಿತ್ರಗಳಿಗೆ ಹೊಸ ಆಯಾಮ ಒದಗಿಸಿಕೊಟ್ಟ 'ಸಿಲ್ವೆಸ್ಟರ್ ಸ್ಟಲ್ಲೋನ್' ಎಂಬ ಹೆಸರಿನಲ್ಲೇ ಏನೋ ಒಂದು ಕಿಕ್ಕು, ಯಾವುದೋ ಒಂದು ಬಗೆಯ ಪಾಸಿಟಿವ್ ಎನರ್ಜಿ ಇದೆ ಎಂಬುದಂತೂ ಸುಳ್ಳಲ್ಲ. ಈ ಬದುಕಿನಲ್ಲಿ ಶ್ರದ್ಧೆ ಏಕಾಗ್ರತೆಯ ಜೊತೆಗೆ ಉತ್ತಮ ಆರೋಗ್ಯವಿದ್ದರೆ ಒಬ್ಬ ಸಾಮಾನ್ಯ ಮನುಷ್ಯ ಏನೆಲ್ಲಾ ಮಾಡಬಹುದು ಎಂಬುದನ್ನು ಸಾಧಿಸಿ ಸಾಬೀತುಪಡಿಸಿದ ಈತ ಮಾಸ್ ಮೆಂಟಾಲಿಯ, ಸ್ಥೈರ್ಯವಂತ ಮನುಷ್ಯಗಳಿಗೆ ಯಾವತ್ತಿಗೂ ಪ್ರಿಯ.


■ ಹೃದಯಶಿವ

ಣ್ಣೊಂದು ಮುಖ ಬಯಲು ಮಾಡಿರುವುದು ನಂದನೀಯ.

-ಬಿ.ಬಿ.ರಾಜ್, ಹಂಪಾಪಟ್ಟಣ, ಎಚ್.ಬಿ.ಹಳ್ಳಿ

ಸಾನಿಯಾ ಮಿರ್ಜಾ ಭಾರತೀಯಳು

ಸಾನಿಯಾ ಮಿರ್ಜಾ ನೂರಕ್ಕೆ ನೂರು ಪಟ್ಟು ತೀಯಳು. ಅದರ ಬಗ್ಗೆ ಯಾವುದೇ ಮಾನವಿಲ್ಲ. ಆದರೆ ಸ್ಟೈಸ್‌ನ ವೇದ್ ಪ್ ಮಲ್ಲಿಕ್ ನೂರಕ್ಕೆ ರು ಭಾರತೀಯನೆ ಮುದರ ಬಗ್ಗೆ ಮಾನಗಳಿವೆ. ಕೆಂದರೆ ಆತ ವದ ವೈರಿಯಾದ, ವಾಸವೀಯ ತದ, ಭಾರತಕ್ಕೆ ಆಗಿರುವ ಕುಖ್ಯಾತ ಭಯೋತ್ಪಾದಕ ಸಯ್ಯದ್ ೀದ್‌ನನ್ನು ಭೇಟಿ ಮಾಡಿ ಬಂದಿದ್ದಾನೆ.



ಸಾನಿಯಾಳ ಭಾರತೀಯತೆಯನ್ನು ಪ್ರಶ್ನಿಸಿದ ಬಿಜೆಪಿಯ ನ್ನು ಯಾವುದಾದರೂ ಒಂದು ತಾಲಿಬಾನ್ ಪ್‌ಗೆ ಕಳುಹಿಸಬೇಕು. ಆತ ಭಾರತದಲ್ಲಿ ವಾಸಿಸಲು ಯೋಗ್ಯ.

-ರವಿ ಕುಮಾರ್, ಹಾಸನ

'ದಲಿತರಿಗೆ ಕೊನೆಗೂ ಸಿಕ್ಕಿತು ಭೂಮಿ' ವರದಿ ಸರ್ ಆಗಿದೆ. ಇಂತಹ ಹೋರಾಟಗಳಿಂದ ದಲಿತರಿಗೆ ಯ ಸಿಗುತ್ತಿದೆ. ಇದನ್ನು ಸಾಧ್ಯವಾಗಿಸಿದ ಕುಮಾರ್ ತಳ, ಕರಿಯಪ್ಪ ಗುಡಿಮನಿ ಮತ್ತು ಇತರೆ ನಾಯಕರಿಗೆ, ನ್ನು ವರದಿ ಮಾಡಿದ ಲಂಕೇಶ್ ಬಳಗಕ್ಕೆ ಥ್ಯಾಂಕ್ಸ್.

-ಓದುಗ, ಎಸ್‌ಎಂಎಸ್ ಮೂಲಕ

ವಿ.ಸೂ.: ನಿಮ್ಮ ಅನಿಸಿಕೆಗಳನ್ನು
nkesh70@rediffmail.com ಗೆ ನುಡಿ
ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ
ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ
ವಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.



ಶಿವಣ್ಣನ ಸಿನಿಮಾಗೆ ಸುದೀಪ್ ವಾಯ್ಸ್

ದಿವಂಗತ ಡಿ.ರಾಜೇಂದ್ರಬಾಬು ನಿರ್ದೇಶನದ ಕಟ್ಟಕಡೆಯ ಚಿತ್ರವಾದ 'ಆರ್ಯನ್' ಶಿವರಾಜಕುಮಾರ್ ಅಭಿನಯದ ಚಿತ್ರ ಎಂಬುದು ನಿಮಗೆ ಗೊತ್ತು. ರಾಜೇಂದ್ರಬಾಬು ತೀರಿಕೊಂಡ ನಂತರ ಎಸ್.ಮಹೇಂದ್ರ ಚಿತ್ರವನ್ನು ಕಂಪ್ಲೀಟ್ ಮಾಡಿದ್ದಾರೆ ಎಂಬುದೂ ನಿಮಗೆ ಗೊತ್ತು. ಈ ಚಿತ್ರ ಈಗ ಬೇರೊಂದು ರೀತಿಯಲ್ಲಿ ಪ್ರಚಾರ ಪಡೆದುಕೊಳ್ಳುತ್ತಿದೆ ಅಂದರೆ ನಂಬುತ್ತೀರಾ? ಅದೇನೆಂದರೆ, ಸುದೀಪ್ ಈ ಚಿತ್ರದ ಆರಂಭದಲ್ಲಿ ತಮ್ಮ ಧ್ವನಿ ನೀಡಿದ್ದಾರೆ. ತಮ್ಮ ಧ್ವನಿಯ ಮೂಲಕ ಚಿತ್ರದ ಪಾತ್ರಗಳನ್ನು ಪರಿಚಯ ಮಾಡಿಕೊಟ್ಟಿದ್ದಾರೆ. ತಮ್ಮ ಚಿತ್ರದ ತಮ್ಮ ಪಾತ್ರಕ್ಕಷ್ಟೇ ಧ್ವನಿ ಕೊಟ್ಟುಕೊಳ್ಳುತ್ತಿದ್ದ ಸುದೀಪ್ ಈ ಮೊದಲು 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ಹಾಗೂ 'ಶ್ರಾವಣಿ ಸುಬ್ರಹ್ಮಣ್ಯ' ತರಹದ ಚಿತ್ರಗಳಿಗೆ ಧ್ವನಿ ಕೊಟ್ಟಿದ್ದನ್ನು ಇಲ್ಲಿ ನೆನೆಯಬಹುದು. ಈ ಎರಡೂ ಚಿತ್ರಗಳು ಒಂದು ರೇಂಜಿಗೆ ಕ್ಲಿಕ್ ಆಗಿದ್ದನ್ನೂ ಇಲ್ಲಿ ಸ್ಮರಿಸಬಹುದು. ಈಗ 'ಆರ್ಯನ್'ಗಾಗಿ ಸುದೀಪ್ ಧ್ವನಿ ನೀಡಿದ್ದಾರೆ. 'ಆರ್ಯನ್' ಕೂಡ ಹಿಟ್ ಆದರೆ ಸಂತೋಷ.



ಅಲ್ಲಮಪ್ರಭುಗಳು ತೆರೆಯ ಮೇಲೆ

ಸಾಮಾಜಿಕ ಅಸಮಾನತೆಯನ್ನು ನಿರ್ಮೂಲನ ಮಾಡಬೇಕೆಂಬ ಹಣ ತೊಟ್ಟ ವಚನಕಾರರಲ್ಲಿ ಅಲ್ಲಮಪ್ರಭು ಪ್ರಮುಖರು. ಅನುಭವ ಮಂಟಪದ ಮುಂದಾಳತ್ವ ವಹಿಸಿದ್ದ ಇವರು ಇತರ ವಚನಕಾರರಿಗೆ ಮಾರ್ಗದರ್ಶಿಗಳಾಗಿದ್ದುಕೊಂಡು ವಚನ ಚಳವಳಿಗೆ ತಮ್ಮದೇ ಆದ ಮಹತ್ವದ ಕೊಡುಗೆ ನೀಡಿದವರು. ಇಂತಹ ಅಲ್ಲಮಪ್ರಭುಗಳ ಬಗ್ಗೆ ಕನ್ನಡದಲ್ಲಿ ಒಂದು ಸಿನಿಮಾ ಆಗುತ್ತದೆ ಎಂದರೆ ಕನ್ನಡಿಗರಾದ ಪ್ರತಿಯೊಬ್ಬರೂ ನಿಜಕ್ಕೂ ಹೆಮ್ಮೆ ಪಡಬೇಕಾದ ಸಂಗತಿ. ಕನ್ನಡಕ್ಕೆ ಉತ್ತಮೋತ್ತಮ ಚಿತ್ರಗಳನ್ನು ನೀಡಿದ ಟಿ.ಎಸ್.ನಾಗಾಭರಣ ಈ ಬಾರಿ ಅಲ್ಲಮಪ್ರಭು ಕುರಿತ ಸಿನಿಮಾ ಮಾಡಲು ವಿದ್ಯುಕ್ತವಾಗಿ ತಯಾರಿ ನಡೆಸಿಕೊಂಡಿದ್ದಾರೆ. ಸದ್ಯದಲ್ಲೇ ಉತ್ತರ ಕರ್ನಾಟಕದಲ್ಲಿ ಆರಂಭವಾಗುವ ಈ ಚಿತ್ರಕ್ಕೆ ಹರಿಖೋಡೆ ಹಣ ಹಾಕುತ್ತಿರುವುದು ಮತ್ತೊಂದು ವಿಶೇಷ. ಈ ಹರಿಖೋಡೆ ಈ ಮೊದಲು 'ಸಂತ ಶಿಶುನಾಳ ಶರೀಫ', 'ಮೈಸೂರು ಮಲ್ಲಿಗೆ' ಹಾಗೂ 'ನಾಗಮಂಡಲ'ದಂತಹ ಮಾಸ್ಟರ್ ಪೀಸ್‌ಗಳನ್ನು ನಿರ್ಮಿಸಿದ್ದರು. ನಾಗಾಭರಣರ ಜೊತೆ ಸೂಪರ್ ಕಾಂಬಿನೇಶನ್ನಿನಂತಿರುವ ಖೋಡೆ ಇಷ್ಟು ವರ್ಷಗಳ ಬಳಿಕ ಮತ್ತೆ ಸಿನಿಮಾರಂಗಕ್ಕೆ ವಾಪಸಾಗುತ್ತಿರುವುದು ಕೂಡ ಸಂತಸದಾಯಕ ಅಂಶವೇ. ಅಂದಹಾಗೆ ಈ 'ಶ್ರೀ ಅಲ್ಲಮಪ್ರಭು' ಚಿತ್ರದಲ್ಲಿ ಅನಂತ್ ನಾಗ್, ಗಿರೀಶ್ ಕಾರ್ನಾಡ್, ಶ್ರೀಧರ್, ಧನಂಜಯ್ ಒಳಗೊಂಡಂತೆ ಇನ್ನಿತರರು ಇರುತ್ತಾರಂತೆ.





ಬಾಲು ಉಳಿಯಲಿ ಆನಂದ್ ಬೆಳ...

'ಜಿಂಕೆ ಮರಿನಾ... ಜಿಂಕೆ ಮರಿನಾ...' ಎಂಬ ಹಾಡು ಬರೆದು ಒ... ಹೆಸರು ಗಳಿಸಿದ ಆನಂದ್ (ರಾಜ್ ಕಿರಣ್) ಎಂಬ ದೊಡ್ಡಬಳ್ಳಾ... ಹುಡುಗ 'ಓಂ' ಎಂಬ ಸೂಪರ್ ಹಿಟ್ ಚಿತ್ರಕ್ಕೆ ಸಂಭಾಷಣೆ ... 'ನಾಗರಹಾವು', 'ಸಂತ' ಹಾಗೂ 'ಮಲ್ಲಿಕಾರ್ಜುನ' ಎಂಬ ಸಾ... ಚಿತ್ರಗಳನ್ನು ನಿರ್ದೇಶಿಸಿದ್ದ ಮುರಳಿಮೋಹನ್ ಎಂಬ ವ್ಯಕ್ತಿಯ ಬಳಿ ಪಳ... ಈ ಹುಡುಗ ಮೊದಲಿನಿಂದಲೂ ಹಾಡು ಬರೆಯುವತ್ತ ಆಸಕ್ತಿ ತೋರ... ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿಕೊಂಡು ಬಂದಾತ. ಕಳೆದ ... ವರ್ಷಗಳ ಹಿಂದೆ 'ಮೇಸ್ತ್ರಿ' ಎಂಬ ಹೆಸರಿನಡಿ ಒಂದು ಸಿನಿಮಾ ಆ... ಮಧ್ಯದಲ್ಲೇ ಚಿತ್ರ ನಿಂತುಹೋಯಿತು. ಬಾಲು ಎನ್ನುವ ಗುಂಗುರುಕೂ... ಯುವಕ ಈ ಚಿತ್ರಕ್ಕೆ ಹಣ ಹಾಕಿ ಹೀರೋ ಆದಂತಹ ವ್ಯಕ್ತಿ. ಆದರೆ ... ಹುಮ್ಮಸ್ಸಿನಿಂದಲೇ ಆರಂಭವಾದ ಚಿತ್ರ ಅದೇಕೋ ಸುದ್ದಿಯೇ ಇ... ಕಾಣೆಯಾಗಿಬಿಟ್ಟಿತ್ತು. ಇದೀಗ 'ಮೇಸ್ತ್ರಿ' ಮತ್ತೆ ಬೆಳಕಿಗೆ ಬರುತ್ತಿದೆ. ... ಚಿತ್ರೀಕರಣ ಮುಗಿದಿದೆ ಅಂತ ಕರ್ನಾಟಕದ ಜನತೆಗೆ ಹೇಳುವ ಸಲ... ಈ ಚಿತ್ರತಂಡ ಪ್ರೆಸ್‌ಮೀಟ್ ಕರೆದಿತ್ತು. ಕಾಶಿನಾಥ್ ಮಗ ಆಲ... ಎಂಬಾತ ನಟಿಸಿ, ಬಿಡುಗಡೆಯಾಗಿ, ಫ್ಲಾಪಾಗಿ ಹೋದ 'ಬಾಜಿ' ಚಿ... ನಾಯಕಿಯಾಗಿ ನಟಿಸಿದ್ದ ರಾಣಿ ಈ ಚಿತ್ರದ ನಾಯಕಿ. 'ಒರಟ ಐ ... ಯೂ' ನಂತರ ಒಂದೇ ಒಂದು ಹಿಟ್ ಸಾಂಗ್ ಕೊಡಲು ಪ್ರಯತ್ನಿಸು... ಜಿ.ಆರ್.ಶಂಕರ್ ಈ ಚಿತ್ರದ ಸಂಗೀತ ನಿರ್ದೇಶಕ. ಸದ್ಯದಲ್ಲೇ ಹಾಡು ರಿ... ಮಾಡಿಕೊಳ್ಳಲಿರುವ 'ಮೇಸ್ತ್ರಿ' ತೆರೆಗೆ ಬರುವ ದಿನಗಳು ದೂರವಿಲ್ಲವಂ...



ಮಿಂಚಾಗಿ ನೀ ಬರಲು
ಕೃತಿ ಕರಬಂಧ

ಬುಲೆಟ್ ಬಸ್ಯ ಬಂದ ದಾರಿ ಬಿಡಿ



'ಒಲವೇ ಮಂದಾರ' ಎನ್ನುವ ಸದಭಿರುಚಿಯ ಸಿನಿಮಾ ಮಾಡಿ ಭರವಸೆ ಮೂಡಿಸಿದ್ದ ನಿರ್ದೇಶಕ ಜಯತೀರ್ಥ ಆಮೇಲೆ 'ಟೋನಿ' ಎಂಬ ಸಿನಿಮಾ ಮಾಡಿದರೂ ತಮ್ಮ ಅತಿಯಾದ ಆತ್ಮವಿಶ್ವಾಸದ ಪ್ರತಿಫಲವಾಗಿ ಹೀನಾಯ ಸೋಲನ್ನು ಅನುಭವಿಸಬೇಕಾಯಿತು. ರಂಗಭೂಮಿ, ಬೀದಿನಾಟಕಗಳಲ್ಲಿ ಸಾಕಷ್ಟು ಅನುಭವವಿರುವ, ಕನ್ನಡ ಸಾಹಿತ್ಯವನ್ನು ಸಾಕಷ್ಟು ಓದಿಕೊಂಡಿರುವ ಜಯತೀರ್ಥ ಜಾನಪದೀಯ ಹಿನ್ನೆಲೆಯುಳ್ಳ ಅಂದರೆ ಮಂಟೇಸ್ವಾಮಿ ಕಾವ್ಯದ ತುಣುಕುಗಳು, ಜಾನಪದ ಗೀತೆಗಳ ಛಾಯೆಯನ್ನು ತಮ್ಮ ಚಿತ್ರಗಳಲ್ಲಿ ತಂದಂಥವರು. ಎಲ್ಲೋ ಒಂದು ಕಡೆ ಕಮರ್ಷಿಯಲ್ ಸಿನಿಮಾಗಳಿಗೆ ಒಗ್ಗುವ ರೀತಿಯಲ್ಲಿ ನೆಲದ ಸಂಸ್ಕೃತಿಯನ್ನು ಅಳವಡಿಸಿಕೊಳ್ಳುವಲ್ಲಿ ವಿಫಲವಾದಾಗ ಅನಿರೀಕ್ಷಿತ ಸೋಲಿಗೆ ತಲೆ ಕೊಡಬೇಕಾಗುತ್ತದೆ. ಇಷ್ಟಕ್ಕೂ ಸಿನಿಮಾವೊಂದರ ಸೋಲನ್ನು ನಿರ್ದೇಶಕನ ತಲೆಗೆ ಕಟ್ಟುವ ಈ ಜಮಾನದಲ್ಲಿ ಕನ್ನಡ ಸಂಸ್ಕೃತಿಯ ಬಗ್ಗೆ ಗೌರವ, ಅಭಿಮಾನವಿರುವ ಜಯತೀರ್ಥ ತರಹದ ಮಂದಿ ತುಸು ಜಾಗರೂಕತೆಯಿಂದ ಅಡಿಯಿಟ್ಟರೆ ಅನುಕೂಲ.

ಇಂತಹ ಜಯತೀರ್ಥ ಈಗ ಶರಣ್ ಹಾಕಿಕೊಂಡು 'ಬುಲೆಟ್ ಬಸ್ಯ' ಅನ್ನುವ ಚಿತ್ರವನ್ನು ನಿರ್ದೇಶಿಸಲು ಹೊರಟಿದ್ದಾರೆ. ಜಯಣ್ಣ ಈ ಚಿತ್ರದ ನಿರ್ಮಾಪಕ. ಅಂದಹಾಗೆ ಈ 'ಬುಲೆಟ್ ಬಸ್ಯ' ಎಂಬುದು ಸಿ.ಬಿ.ಐ. ಶಂಕರ್ ಚಿತ್ರದಲ್ಲಿ ಸುಧೀರ್ ಮಾಡಿದ್ದ ಪಾತ್ರದ ಹೆಸರು. ಚಿತ್ರಕ್ಕೆ ಯಾವ ಹೆಸರನ್ನು ಇಡಬೇಕು ಅಂತ ಎಲ್ಲರೂ ತಲೆ ಕೆಡಿಸಿಕೊಂಡು ಕೂತಿರುವಾಗ ಈ ಟೈಟಲ್ ಶರಣ್ ತಲೆಗೆ ಥಟ್ಟನೆ ಹೊಳೆದು, ಅದನ್ನೇ ಇಡೋಣ ಸೂಪರ್... ಸೂಪರ್ ಅಂತ ಎಲ್ಲರೂ ಒಪ್ಪಿ ಇದೀಗ ಫಿಕ್ಸಾಗಿದೆಯಂತೆ. ಜಯತೀರ್ಥ ಈ ಸಿನಿಮಾದಲ್ಲಿ ಸಾಕಷ್ಟು ನಗಿಸಲಿ ಎಂಬುದು ನಮ್ಮ ಹಾರೈಕೆ.

ರಮ್ಯ ದೊಡ್ಮನೆಯಿಂದ ಹೊ...



ಸೂರಿ ನಿರ್ದೇಶನದ, ಪುನೀತ್ ರಾಜಕುಮಾರ್ ಅಭಿನಯದ 'ದೊಡ್ಮನೆ ಹುಡುಗ' ಚಿತ್ರದಲ್ಲಿ ರಮ್ಯ ನಟಿಸಲಿರುವುದು ಈಗಾಗಲೇ ಬಹುತೇಕ ಖಚಿತವಾಗಿತ್ತು. ಆದರೆ ರಮ್ಯ ಡಿಮ್ಯಾಂಡು ಮಾಡುತ್ತಿರುವ ಪೇಮೆಂಟು ಜಾಸ್ತಿ ಎಂಬ ಕಾರಣಕ್ಕೆ ಈಗ ಆಕೆಯನ್ನು ಚಿತ್ರದಿಂದ ಕೈಬಿಡಬೇಕಾಗಿ ಬಂದಿದೆಯಂತೆ. ಈ ಹಿಂದೆ 'ಅಭಿ', 'ಆಕಾಶ್' ಹಾಗೂ 'ಅರಸು' ಎಂಬ ಚಿತ್ರಗಳಲ್ಲಿ ರಮ್ಯ ಪುನೀತ್ ಜೊತೆ ನಟಿಸಿದ್ದು ಆ ಮೂರೂ ಚಿತ್ರಗಳು ಹಿಟ್ ಆಗಿದ್ದವು. ಈಗ ನಾಲ್ಕನೇ ಬಾರಿ ನಟಿಸಬೇಕಿತ್ತು. ಅಂದಹಾಗೆ ಜೋಗಿ ಕಾದಂಬರಿಯನ್ನು ಆಧಾರವಾಗಿ ಇಟ್ಟುಕೊಂಡು ಸೂರಿ ಈ ಚಿತ್ರವನ್ನು ಮಾಡುತ್ತಿದ್ದಾರಂತೆ. ಚಿತ್ರದ ಇದೇ ಹೆಸರಿನ ಈ ಕಾದಂಬರಿಯನ್ನು ಚಿತ್ರದ ಮುಹೂರ್ತದಂದೇ ಬಿಡುಗಡೆ ಮಾಡಲಾಗುತ್ತದಂತೆ. ಈ ಕಾರಣದಿಂದ 'ದೊಡ್ಮನೆ ಹುಡುಗ'ನ ಕಥೆ ಎಂಬುದು ಮೊದಲೇ ಗೊತ್ತಾಗಲಿದ್ದು ಆ ಬಗ್ಗೆ ಸೂರಿಗೆ ಯಾವುದೇ ಆತಂಕವಿಲ್ಲವಂತೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com